ಕನ್ನಡ ವಿಶ್ವವಿದ್ಯಾಲಯ ಹಂಪಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

"ಡಾ. ಸಿದ್ಧಲಿಂಗಯ್ಯನವರ ಆತ್ಮಕಥನದಲ್ಲಿ ಅಸ್ಮಿತೆಯ ಹುಡುಕಾಟ"

(ದಲಿತ ಆತ್ಮಕಥನಗಳ ಅಧ್ಯಯನದ ಹಿನ್ನೆಲೆಯಲ್ಲಿ)

ತೇಜಾವತಿ. ಕೆ

ಸಂಶೋಧನಾ ವಿದ್ಯಾರ್ಥಿನಿ

ನೊಂದಣಿ ಸಂಖ್ಯೆ : KVMBKS-00677

ಮಾರ್ಗದರ್ಶಕರು

ಡಾ. ಸಿ.ಬಿ. ಅನ್ನಪೂರ್ಣಮ್ಮ

ನ್ಯಾಷನಲ್ ಪದವಿ ಕಾಲೇಜು

ಬಸವನಗುಡಿ

ಬೆಂಗಳೂರು.

ಕಾವ್ಯಮಂಡಲ

ಬೆಂಗಳೂರು

2014

ಕನ್ನಡ ವಿಶ್ವವಿದ್ಯಾಲಯ ಹಂಪಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ನಿಬಂಧ

"ಡಾ. ಸಿದ್ಧಲಿಂಗಯ್ಯನವರ ಆತ್ಮಕಥನದಲ್ಲಿ ಅಸ್ಮಿತೆಯ ಹುಡುಕಾಟ"

(ದಲಿತ ಆತ್ಮಕಥನಗಳ ಅಧ್ಯಯನದ ಹಿನ್ನೆಲೆಯಲ್ಲಿ)

ತೇಜಾವತಿ. ಕೆ

ಸಂಶೋಧನಾ ವಿದ್ಯಾರ್ಥಿನಿ

ನೊಂದಣಿ ಸಂಖ್ಯೆ : KVMB/K0[illegible]00677

ಮಾರ್ಗದರ್ಶಕರು

ಡಾ. ಸಿ.ಬಿ. ಅನ್ನಪೂರ್ಣಮ್ಮ

ನ್ಯಾಷನಲ್ ಪದವಿ ಕಾಲೇಜು

ಬಸವನಗುಡಿ

ಬೆಂಗಳೂರು.

ಕಾವ್ಯಮಂಡಲ

ಬೆಂಗಳೂರು

2014

1135

ದೃಢೀಕರಣ ಪತ್ರ

ಶ್ರೀಮತಿ ತೇಜಾವತಿ ಕೆ. ಸಂಶೋಧಕರಾದ ಇವರು "ಡಾ. ಸಿದ್ಧಲಿಂಗಯ್ಯನವರ ಆತ್ಮಕಥನದಲ್ಲಿ ಅಸ್ಮಿತೆಯ ಹುಡುಕಾಟ" ಎಂಬ ಈ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿ, ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 17/7/2014

ಮಾರ್ಗದರ್ಶಕರು
ಡಾ.ಸಿ.ಬಿ. ಅನ್ನಪೂರ್ಣಮ್ಮ
ನ್ಯಾಷನಲ್‌ಪದವಿ ಕಾಲೇಜು
ಬಸವನಗುಡಿ, ಬೆಂಗಳೂರು

ಪ್ರಮಾಣ ಪತ್ರ

"ಡಾ. ಸಿದ್ಧಲಿಂಗಯ್ಯನವರ ಆತ್ಮಕಥನದಲ್ಲಿ ಅಸ್ಮಿತೆಯ ಹುಡುಕಾಟ" (ದಲಿತ ಆತ್ಮಕಥನಗಳ ಹಿನ್ನಲೆಯಲ್ಲಿ) ಎಂಬ ಈ ಶೀರ್ಷಿಕೆಯ ನಿಬಂಧವನ್ನು ಡಾ. ಸಿ.ಬಿ. ಅನ್ನಪೂರ್ಣಮ್ಮನವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯಕ್ಕೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೆಂಗಳೂರು

ದಿನಾಂಕ : 17-07-2014

Thejavathy K.
ತೇಜಾವತಿ ಕೆ.
ಸಂಶೋಧನಾ ವಿದ್ಯಾರ್ಥಿನಿ

ಪರಿವಿಡಿ

ಅಧ್ಯಾಯ–೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯದಲ್ಲಿ ಹಲವು ಸಾಹಿತ್ಯ ಪ್ರಕಾರಗಳು ಇಂಗ್ಲೀಷ್ ಸಾಹಿತ್ಯದ ಪ್ರಭಾವಕ್ಕೆ ಒಳಪಟ್ಟಂತೆ "ಆತ್ಮಕಥೆ" ಪ್ರಕಾರವೂ ಸಹಾ ಕನ್ನಡಕ್ಕೆ ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಲೇ ಮೂಡಿಬಂದಿದೆ. ಇಂಗ್ಲೀಷ್ ಸಾಹಿತ್ಯದಲ್ಲಿ ವಿಪುಲವಾದ ಆತ್ಮಚರಿತ್ರೆಗಳು ಕಂಡುಬರುತ್ತವೆ. ಡಾ: ಜಾನ್ಸನ್, ಫ್ರಾಂಕ್ಲಿನ್, ಟಾಲ್‌ಸ್ಟಾಯ್, ಡಬ್ಲ್ಯೂ, ಚರ್ಚಿಲ್ ಇತ್ಯಾದಿ ಅಂತೆಯೇ ಡಾ: ಸಿದ್ಧಲಿಂಗಯ್ಯನವರ ಆತ್ಮಕಥೆಯ ಮೊದಲ ಕಂತನ್ನು ಕೆಲವು ವರ್ಷಗಳ ಹಿಂದೆ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ್ದು, ಎಸ್.ಆರ್ ರಾಮಕೃಷ್ಣರವರ ಅನುವಾದದಲ್ಲಿ ಕೃತಿ ಮೂಡಿಬಂದಿದೆ. ಇಂಗ್ಲೀಷ್ ಆವೃತ್ತಿಯ ಶೀರ್ಷಿಕೆ "ಎ ವರ್ಡ್ ವಿತ್ ಯೂ, ವರ್ಲ್ಡ್" ಎಂದಿದೆ. ಈ ಕೃತಿ ಸಿದ್ಧಲಿಂಗಯ್ಯನವರ ಪದ್ಯವೊಂದರ ಸಾಲಿನಿಂದ ಹೆಕ್ಕಿಕೊಂಡಿದ್ದು ಡಿ.ಆರ್ ನಾಗರಾಜ್ ವರ್ಷಗಳ ಹಿಂದೆಯೇ ಹೇಳುವಂತೆ ಇದು ಹೃದಯ ಸ್ಪರ್ಶಿ ಹಾಗೂ ಹಾಸ್ಯ ಪ್ರಜ್ಞೆಯುಳ್ಳ ಸಂಗತಿಗಳನ್ನು ಒಳಗೊಂಡ ಪುಸ್ತಕವಾಗಿ ಹೊರಬಂದಿದೆ ಹಾಗೂ ಈ ಕೃತಿಯನ್ನು 'ಬಡವರ ನಗುವಿನ ಶಕ್ತಿ' ಎಂದೇ ಇವರು ಹೇಳಿದ್ದಾರೆ.

ಹೊಸಗನ್ನಡ ಸಾಹಿತ್ಯದ ಗದ್ಯ ಪ್ರಕಾರಗಳಲ್ಲಿ ಆತ್ಮಕಥೆ, ಜೀವನ ಚರಿತ್ರೆ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಕಳೆದ ಒಂದೆರಡು ದಶಕಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಕಥೆ ಕೃತಿಗಳು ಪ್ರಕಟವಾಗುತ್ತಿವೆ. ಹೊಸಗನ್ನಡ ಸಾಹಿತ್ಯವನ್ನು ಕಟ್ಟಿ ಬೆಳೆಸಿದವರೆಲ್ಲಾ ಈ ಪ್ರಕಾರವನ್ನು ಸಾಧ್ಯವಾದಷ್ಟು ಮಟ್ಟಿಗೆ ಬೆಳೆಸಿದ್ದಾರೆ ಎನ್ನುವುದನ್ನು ಹಲವಾರು ವ್ಯಕ್ತಿಗಳ ಆತ್ಮಕಥೆಗಳನ್ನು ಅವಲೋಕಿಸಿದಾಗ ತಿಳಿದುಬರುತ್ತದೆ.

ಒಬ್ಬ ವ್ಯಕ್ತಿ ತನ್ನ ಜೀವನದ ವಿಚಾರಗಳನ್ನು ತಾನೇ ಬರೆದಲ್ಲಿ ಅದು "ಆತ್ಮಕಥೆ" ಎನಿಸಿಕೊಳ್ಳುತ್ತದೆ. ಆತ್ಮಕಥೆ ವ್ಯಕ್ತಿಯೊಬ್ಬನ ಚರಿತ್ರೆಯಾಗಿರುವಂತೆ ಆತನ ಸುತ್ತಮುತ್ತಣ ಪರಿಸರದ ಚರಿತ್ರೆಯೂ ಆಗಿರುತ್ತದೆ. ಕಥಾನಾಯಕ ತನ್ನ ಮತ್ತು ತನ್ನ ಸುತ್ತಮುತ್ತಲಿನ ಜೀವನವನ್ನು ತಾನು ಕಂಡಂತೆ ಪ್ರಾಮಾಣಿಕವಾಗಿ ವಿವರಿಸಿರುತ್ತಾನೆ. ಬರೆಯುವ ಶಕ್ತಿ ಮತ್ತು ತಾಳ್ಮೆ ಇದ್ದಲ್ಲಿ ಪ್ರತಿಯೊಬ್ಬರೂ ಸಹಾ ತಮ್ಮ ಆತ್ಮಕಥೆಯನ್ನು ತಾವೇ ಬರೆಯಬಹುದು. ಆದರೆ ಸಮಾಜದಲ್ಲಿ ಆತ್ಮಕಥೆಯನ್ನು ಬರೆದಾತ ಇತರರಿಗೆ ಆದರ್ಶ ವ್ಯಕ್ತಿಯಾದರಂತೂ ಆತ ಬರೆದ ಆತ್ಮಕಥೆಗೆ ಹೆಚ್ಚು ಪ್ರಾಧಾನ್ಯತೆ ಒದಗುತ್ತದೆ. ಒಬ್ಬ ಆದರ್ಶ ವ್ಯಕ್ತಿಯಾಗಿ ಪ್ರಸ್ತುತ ಸಮಾಜಕ್ಕೆ ತಮ್ಮ ಜೀವನದ ಸ್ಥಿತಿ–ಗತಿಗಳನ್ನು ತಿಳಿಸಿಕೊಟ್ಟು ಎಲ್ಲರ ಗಮನ ಸೆಳೆದ ಅಪರೂಪದ ಸಹಜ, ಸರಳ ವ್ಯಕ್ತಿತ್ವದ ಕವಿ ಡಾ: ಸಿದ್ಧಲಿಂಗಯ್ಯ. ಶ್ರೀಯುತರು ತಮ್ಮ ಆತ್ಮಕಥೆ "ಊರು ಕೇರಿ" ಯಲ್ಲಿ ತಮ್ಮ ಜೀವನದ ಕಡು ಬಡತನ, ಅವಮಾನದಿಂದ ನಲುಗಿ ಹೋಗಿದ್ದ ದಲಿತ ಸಮುದಾಯದ ವಿವರಣೆ ಕೊಡುತ್ತ ಈ ನೆಲೆಯಿಂದ ಬಂದ ತಾವು ಹೇಗೆ ಸಶಕ್ತರಾಗಲು ಸಾಧ್ಯ ಎಂಬುದನ್ನು ವಿವರಿಸಿದ್ದಾರೆ. ಈ ಮೂಲಕ ಇವರು ಮಾದರಿಯಾಗುತ್ತಾರೆ.

ಮೃದು ಸ್ವಭಾವವುಳ್ಳವರೂ, ವಿಚಾರವಾದಿಗಳು ಆದ ನಾಡೋಜ ಡಾ: ಸಿದ್ಧಲಿಂಗಯ್ಯನವರು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದಾರೆ. ತಮ್ಮ ಬರಹದ ಮೂಲಕ ಶೋಷಿತರ ಕತ್ತಲೆಯ ಬದುಕನ್ನು ಅದಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ನೆಲೆಯಿಂದ ಹೊರಟ ತಾವು ಸಮಾಜದಲ್ಲಿ ಮಾರ್ಗದರ್ಶಕರಂತಿದ್ದಾರೆ. ಸತತ

ಪರಿಶ್ರಮ, ನಿರ್ದಿಷ್ಟ ಗುರಿಯನ್ನು ತಲುಪಲು ತಮಗಿದ್ದ ಬದ್ಧತೆ ಈ ಕುರಿತ ವಿವರಗಳನ್ನು ತಮ್ಮ ಆತ್ಮಕಥನದಲ್ಲಿ ತಿಳಿಸಿದ್ದಾರೆ. ಶ್ರೀಯುತರು ಬರೆದಂತಹ ಆತ್ಮಕಥೆಯಲ್ಲಿ ನಾನು ಇಡೀ ದಲಿತ ಸಮುದಾಯದ ನೋವು ಯಾವರೀತಿ ಇದೆ ಎನ್ನುವ ಸತ್ಯವನ್ನು ಕಂಡು ಕೊಂಡಿದ್ದೇನೆ. ದಲಿತರ ಸಮಸ್ಯೆಗೆ ಮುಖ್ಯ ಕಾರಣ ಬಡತನ ಮತ್ತು ಅನಕ್ಷರತೆ. ಇದಕ್ಕೆ ಕಾರಣ ಸೋಮಾರಿತನವಲ್ಲ. ಬಡತನದಿಂದ ಹಸಿವು, ಆಕ್ರೋಶ ಎಲ್ಲವೂ ಹೆಚ್ಚಾಗುತ್ತದೆ. ಸವರ್ಣೀಯರ ದೌರ್ಜನ್ಯ, ಜಾತಿ ವ್ಯವಸ್ಥೆಯ ಬರ್ಬರ ಕ್ರೌರ್ಯ ದಲಿತರ ಬದುಕು ಮಸುಕಾಗಲು ಕಾರಣವಾಗುತ್ತದೆ. ಇಂಥ ಸನ್ನಿವೇಶ ಶ್ರೀಯುತರ ಜೀವನದಲ್ಲಿ ಎದುರಾದರೂ ಡಾ: ಸಿದ್ಧಲಿಂಗಯ್ಯನವರ ವೈಚಾರಿಕತೆಯ ದೃಷ್ಟಿಕೋನ, ಬರಹದ ವಿಶಿಷ್ಟತೆ ಹಾಗೂ ತಮ್ಮ ಪ್ರತಿಭೆಯಿಂದ ಒಡಗೂಡಿದ ಭಾಷಣದ ವೈಖರಿ ಇತ್ಯಾದಿ ಸಾಧನೆಗಳಿಂದ ಸಮಾಜದಲ್ಲಿ ಜನರ ಪ್ರೀತಿಗೆ ಪಾತ್ರರಾಗಿ, ದಲಿತತ್ವಕ್ಕೆ ಅದರದ್ದೇ ಆದ ವರ್ಚಸ್ಸು, ಘನತೆ, ಗೌರವಗಳನ್ನು ತಂದುಕೊಟ್ಟು ಕರ್ನಾಟಕದ ಎರಡನೇಯ ಅಂಬೇಡ್ಕರ್ ಎಂಬ ಉಪಾಧಿಗೆ ಭಾಜನರಾಗಿದ್ದಾರೆ.

ಅಂತೆಯೇ "ಪಂಪ ಆದಿಕವಿಯಾದರೆ ದಲಿತರ ಆದಿಕವಿ ಸಿದ್ಧಲಿಂಗಯ್ಯ ಎಂಬುದು ಉತ್ಪ್ರೇಕ್ಷೆಯಲ್ಲ. ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂಬ ಮಾತು ಬೇರೆ ಎಲ್ಲರಿಗಿಂತ ಹೆಚ್ಚಾಗಿ ಇವರಿಗೆ ಅನ್ವಯಿಸುತ್ತದೆ"[೧] ಎಂದು ಡಾ: ವಿ.ಎಸ್ ಆಚಾರ್ಯರವರು ಹೇಳುತ್ತಾರೆ.

ಮೊದಲ ಅಧ್ಯಾಯವು ದಲಿತ ಆತ್ಮಕಥನದ ಉದ್ದೇಶ, ವ್ಯಾಪ್ತಿಯನ್ನು ಒಳಗೊಂಡಿದ್ದು ಮುಖ್ಯವಾಗಿ ದಲಿತರ ಅನಕ್ಷರತೆ, ಬಡತನ, ಅವಮಾನಕ್ಕೆ ಕಾರಣಗಳೇನು? ಇಡೀ ದಲಿತ ಸಮುದಾಯವನ್ನು ಸವರ್ಣೀಯರು ಹೇಗೆ ಕಾಣುತ್ತಿದ್ದರು? ಪ್ರತಿಭೆ ಎನ್ನುವುದು ಹೇಗೆ ಗೆಲುವಿಗೆ ನಗುವಿನ ಶಕ್ತಿಯಾಗಿ ಕಂಗೊಳಿಸುತ್ತದೆ ಎನ್ನುವ ಪ್ರಧಾನ ಅಂಶವನ್ನು ಶ್ರೀಯುತರ ಆತ್ಮಕಥೆಯ ಮೂಲಕ ಗ್ರಹಿಸಿದ್ದೇನೆ. ಇತರ ಆತ್ಮಕಥೆಗಳನ್ನು ಕೂಡ ಪ್ರತಿಮಾತ್ಮಕವಾಗಿ ಅಧ್ಯಯನದ ಮುಖೇನ ಅಭ್ಯಸಿಸಿದ್ದೇನೆ. ಶೋಷಿತರ ಬದುಕಿನ ಸ್ಥಿತಿ–ಗತಿಗಳು ಹೇಗೆ ಅವಮಾನಕ್ಕೆ ಒಳಗಾಗುತ್ತವೆ, ಯಾವ ಬದ್ಧತೆಯಿಂದ ಸಮಾಜದಲ್ಲಿ ತಮ್ಮನ್ನು ತಾವು ಗುರ್ತಿಸಿಕೊಳ್ಳುತ್ತಾರೆ ಎನ್ನುವ ವಿವರಗಳನ್ನು ಗುರ್ತಿಸಿ ಈ ನಿಬಂಧದಲ್ಲಿ ಹೇಳಲು ಹೊರಟಿದ್ದೇನೆ.

ಎರಡನೇ ಅಧ್ಯಾಯದಲ್ಲಿ ದಲಿತರು ಸ್ವಾತಂತ್ರ್ಯಪೂರ್ವದಿಂದಲೂ ಬಡತನದಿಂದ, ಹಸಿವಿನಿಂದ, ಹಿಂಸೆಯಿಂದ, ಸಾಮಾಜಿಕ ಅಪಮಾನದಿಂದ ನರಳುತಿದ್ದರು. ಸ್ವಾತಂತ್ರ್ಯಾನಂತರ ಇಂದು ತಮ್ಮದೇ ಆದ ವ್ಯಕ್ತಿತ್ವ, ಪ್ರತಿಭೆ, ಛಲ, ಸೃಜನಶೀಲ ಸಾಧನೆಗಳಿಂದ ಬದಲಾವಣೆಗಳನ್ನು ದಲಿತ ಸಮುದಾಯಗಳು ಒಳಗೊಳ್ಳುತ್ತಿವೆ ಎನ್ನುವುದನ್ನು ಇತರ ಆತ್ಮಕಥನಗಳ ಹಿನ್ನೆಲೆಯಲ್ಲಿ ಉದಾಹರಣೆಗಳನ್ನು ಕೊಟ್ಟು ಹೇಳಲು ಇಚ್ಚಿಸಿದ್ದೇನೆ. ಇಲ್ಲಿ ಬದಲಾಗುತ್ತಿರುವ ಆತ್ಮಕಥೆಗಳ ಸ್ವರೂಪವೂ ಕಂಡುಬರುತ್ತದೆ.

ಮೂರನೇ ಅಧ್ಯಾಯದಲ್ಲಿ ಪ್ರಮುಖ ಸಾಹಿತಿ, ದಲಿತ ಕವಿ ಎನಿಸಿಕೊಂಡ ಡಾ: ಸಿದ್ಧಲಿಂಗಯ್ಯನವರ ಆತ್ಮಕಥೆ "ಊರು ಕೇರಿ ಭಾಗ ೧" ಮತ್ತು "ಊರು ಕೇರಿ ಭಾಗ ೨" ಪುಸ್ತಕಗಳನ್ನು ಅಭ್ಯಸಿಸಿ, ಈ ಆತ್ಮಕಥೆಯ ಮೂಲಕ ದಲಿತ ಸಮುದಾಯದ ನೆಲೆಯ ಗುರುತುಗಳನ್ನು ಹುಡುಕುವ ಪ್ರಯತ್ನ ಮಾಡಿದ್ದೇನೆ. ಇದೇ ಅಸ್ಮಿತೆಯ ಹುಡುಕಾಟ. ಈ ಹಿನ್ನೆಲೆಯಲ್ಲಿ ಆ ಅಧ್ಯಾಯವನ್ನು ನೋಡಲಾಗಿದೆ. ಅಂದರೆ ದಲಿತರ ಹಸಿವನ್ನು, ಬಡತನವನ್ನು ಪ್ರತಿಭೆ ಮೂಲಕ ಹೇಗೆ ಗೆಲ್ಲಬಹುದೆಂಬುದನ್ನು ಈ ಆತ್ಮಕಥೆಯ ಮೂಲಕ ಗುರ್ತಿಸಿದ್ದೇನೆ.

ದಲಿತರು ಬದುಕನ್ನು ಕಟ್ಟಿಕೊಳ್ಳಲು ಮಾಡುವ ಪ್ರಯತ್ನಗಳು ಅದಕ್ಕೆ ಎದುರಾಗುವ ಅಡೆತಡೆಗಳು ಪರಂಪರೆಯಿಂದ ಸಾಗಿಬಂದ ದೌರ್ಜನ್ಯ, ಮಕ್ಕಳಿಗೆ ವಿದ್ಯಾಭ್ಯಾಸದ ತೊಡಕುಗಳು, ಮಹಿಳೆಯರ ಜಗತ್ತು, ದಲಿತ ಕುಟುಂಬ, ಆ ಕೇರಿಯಲ್ಲಿನ ತಲ್ಲಣಗಳು, ಮುಗ್ಧ ಮಕ್ಕಳ ಮೇಲೆ ಬೀರುವ ಪರಿಣಾಮಗಳು ಈ ಕುರಿತ ವಿವರಣೆ ನೀಡಿದ್ದೇನೆ. ಈ ನಡುವೆ ಸಿದ್ಧಲಿಂಗಯ್ಯನವರು ವಿದ್ಯಾಭ್ಯಾಸ ಮಾಡಿದ ರೀತಿ ಪ್ರಶಂಸನೀಯವಾಗಿದೆ. ಪ್ರಮುಖವಾಗಿ ಅದಕ್ಕೆ ನೆರವಾದವರು ತಂದೆ ತಾಯಿ, ತಾತನ ಮನೆಯವರು. ಬೆಂಗಳೂರಿಗೆ ಬಂದ ನಂತರ ಸಿಕ್ಕ ಸಹಾಯ, ಇವರಿಗಿದ್ದ ಗುರಿ–ಆದರ್ಶಗಳು ಈ ಕುರಿತು ಸ್ಪಷ್ಟ ಚಿತ್ರಣವನ್ನು ಇಲ್ಲಿ ನೀಡಲಾಗಿದೆ.

ಡಾ: ಸಿದ್ಧಲಿಂಗಯ್ಯನವರು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಶಿಕ್ಷಣ ಕ್ಷೇತ್ರ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸ್ನೇಹಿತರನ್ನು ಒಳಗೊಂಡು ಅಜಾತಶತ್ರು ಎನಿಸಿದ್ದಾರೆ. ಅಂತಹ ಸ್ನೇಹಿತರಲ್ಲಿ ಹಲವರು ಪ್ರಸಿದ್ಧ ಸಾಹಿತಿಗಳೂ, ಗಣ್ಯವ್ಯಕ್ತಿಗಳೂ, ವಿಮರ್ಶಕರೂ ಇದ್ದಾರೆ. ಹಾಗಾಗಿ ವಿಮರ್ಶಕರು ಶ್ರೀಯುತರನ್ನು ಯಾವರೀತಿ ಕಂಡುಕೊಂಡಿದ್ದಾರೆಂಬುದನ್ನು ಈ ಅಧ್ಯಾಯದಲ್ಲಿ ಹಲವು ಗ್ರಂಥಗಳನ್ನು ಅಧ್ಯಯನ ಮಾಡುವ ಮುಖೇನ ಗ್ರಹಿಸಿ ಅರ್ಥೈಸಿದ್ದೇನೆ.

ನಾಲ್ಕನೇ ಅಧ್ಯಾಯದಲ್ಲಿ ಭಾರತ ಮಾತ್ರವಲ್ಲದೇ ಇತರ ದೇಶದಲ್ಲೂ ಯಾವ ರೀತಿ ಹಲವು ಗುಂಪುಗಳಿವೆ, ವರ್ಣಭೇದ ಹಿನ್ನೆಲೆಯಲ್ಲಿ ಹೇಗೆ ಜಾತೀಯತೆಯು ತನ್ನ ಪ್ರಭಾವ ಬೀರಿದೆ ಎನ್ನುವುದನ್ನು, ಹಲವು ಘಟನೆಗಳನ್ನು ಉದಾಹರಿಸುವ ಮೂಲಕ ದಲಿತ ಸಮುದಾಯವನ್ನು, ಅವರ ಬದುಕಿನ ಸ್ವರೂಪವನ್ನು ವಿವರಿಸಿದ್ದೇನೆ. ಜೊತೆಗೆ ಸಿದ್ಧಲಿಂಗಯ್ಯನವರ ಆತ್ಮಕಥೆ ಹೇಗೆ ಇದನ್ನೇ ಹೋಲುತ್ತದೆ ಮತ್ತು ಈ ದಲಿತ ಸಮುದಾಯ ಹೊಸದಾಗಿ ಸಬಲೀಕರಣಗೊಳ್ಳುತ್ತಿರುವ ಸಮುದಾಯವಾಗಿ ರೂಪುಗೊಳ್ಳುತ್ತಿರುವುದನ್ನು ಈ ಅಧ್ಯಾಯದಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದೇನೆ.

ಸಮಾರೋಪದಲ್ಲಿ ಡಾ: ಸಿದ್ಧಲಿಂಗಯ್ಯನವರ ಜೀವನದ ವಿವಿಧ ಹಂತವನ್ನು ಸಂಕ್ಷಿಪ್ತ ಆವೃತ್ತಿಯಲ್ಲಿ ಹೇಳಿದ್ದು, ಅನುಬಂಧದಲ್ಲಿ ಅವರ ಪ್ರಕಟಿತ ಕೃತಿಗಳು, ಸಂದ ಪ್ರಶಸ್ತಿಗಳು, ಬದುಕಿನ ಘಟ್ಟಗಳು, ವಂಶ ವೃಕ್ಷವನ್ನು ಅಧ್ಯಯನದ ಮೂಲಕ ಗ್ರಹಿಸಿ ತಿಳಿಸಿದ್ದೇನೆ.

ಒಟ್ಟಿನಲ್ಲಿ ಹೇಳುವುದಾದರೆ ಕನ್ನಡದ ಮಹಾನ್ ಸಾಹಿತಿಯೂ, ಪ್ರಸಿದ್ಧ ಕವಿಯೂ ಆದ ಡಾ: ಸಿದ್ಧಲಿಂಗಯ್ಯನವರ ಆತ್ಮಕಥೆಯ ಅಧ್ಯಯನದಿಂದ ಅವರ ಜೀವನದ ಮತ್ತು ಅವರನ್ನು ರೂಪಿಸಿದ ದಲಿತ ಜಗತ್ತಿನ ಮತ್ತು ಅವರು ರಚಿಸಿರುವ ಸಾಹಿತ್ಯಲೋಕದ ಪರಿಚಯ ತಿಳಿಯುತ್ತದೆ. ಈ ಅಧ್ಯಯನದಿಂದ ದಲಿತ ಜಗತ್ತಿನ ಆತ್ಮದ ಒಳಗಡೆಯೇ ಪ್ರವೇಶ ಮಾಡಿದಂತಹ ವಿಶಿಷ್ಟವಾದ ಅನುಭವವಾಗುತ್ತದೆ.ಇಂತಹ ಅತ್ಯುತ್ತಮವಾದ ಆತ್ಮಕಥೆಯನ್ನು ಹೊರತಂದಿರುವ ಕವಿಗೆ ನಾನು ಸದಾ ಋಣಿಯಾಗಿದ್ದೇನೆ. ಈ ಕೃತಿ ಸಾಹಿತ್ಯ ಲೋಕಕ್ಕೆ ದೊರಕಿದ್ದು ಇದನ್ನು ಓದಿದಾಗ ವೈರುಧ್ಯಗಳ ನಡುವೆಯೇ ಇವರು ಜೀವನವನ್ನು ಕಟ್ಟಿಕೊಂಡ ಬಗೆಗೆ ನನಗೆ ಕುತೂಹಲವಿತ್ತು. ಈ ಕುತೂಹಲವೇ ಅವರ ಆತ್ಮಕಥನದ ಅಧ್ಯಯನಕ್ಕೆ ಪ್ರೇರಣೆಯಾಗಿ ಪರಿಣಮಿಸಿತು. ಈ ಹಿನ್ನೆಲೆಯಲ್ಲಿ ಸಂಶೋಧನಾ ಕಾರ್ಯವನ್ನು ಮುಂದುವರೆಸಿದ್ದೇನೆ.

ಒಟ್ಟಾರೆಯಾಗಿ ಡಾ:ಸಿದ್ಧಲಿಂಗಯ್ಯನವರ ಆತ್ಮಕಥನವು ಎಷ್ಟೇ ಅಪವಾದ, ಅವಮಾನ, ಹಿಂಸೆಗಳಿಂದ ಕಂಡಿದ್ದರೂ ಅದನ್ನು ಲೇಖಕ ಹಾಸ್ಯಪ್ರಜ್ಞೆಯ ಮನೋಭಾವದಿಂದ ವಿವರಿಸಿರುವುದನ್ನು ಇಲ್ಲಿ ಗಮನಿಸಬಹುದು. ಹಾಸ್ಯವಿದ್ದರೂ ಸೂಕ್ಷ್ಮತೆಯಿರುವವರಿಗೆ ಮಾತ್ರ ಶ್ರೀಯುತರ ನೋವಿನ ಸ್ಥಿತಿ ಅರಿಯಲು ಸಾಧ್ಯ ಎನ್ನುವಷ್ಟರ ಮಟ್ಟಿಗೆ ಅವರ ಸಾಹಿತ್ಯ ಬರವಣಿಗೆ ಮೂಡಿಬಂದಿದೆ.

ಡಾ:ಸಿದ್ಧಲಿಂಗಯ್ಯನವರು ಬೆಳೆದದ್ದು ದಲಿತ ಕೇರಿಯಲ್ಲಿ. ಮಾಗಡಿ ತಾಲ್ಲೂಕಿನ ಹೊರವಲಯದಲ್ಲಿ. ಬಾಲ್ಯದ ನೆನಪಿನ ಜೊತೆ ಇಡೀ ತನ್ನ ಸುತ್ತಣ ನಿಸರ್ಗದ ಜೊತೆ ಜೊತೆಯಲ್ಲಿ ತಾವು ಬೆಳೆದ ಬದುಕಿನ ಚಿತ್ರಣವನ್ನು ಆತ್ಮಕಥೆಯಲ್ಲಿ ಪಡಿಮೂಡಿಸಿದ್ದಾರೆ. ಇಷ್ಟೇ ಅಲ್ಲದೇ ಹಳ್ಳಿಯಿಂದ ನಗರಕ್ಕೆ ಬಂದಾಗ ಹಲವಾರು ರೀತಿಯ ಪ್ರತಿಭಟನೆಗಳು, ಸರಣಿಸಭೆಗಳು, ಮೆರವಣಿಗೆಗಳಲ್ಲಿ ಪಾಲ್ಗೊಂಡ ಅನುಭವಗಳು, ರಾಜಕೀಯ ಗುಂಪುಗಳ ಗಲಾಟೆ, ಎದುರಿಸಿದ ರೀತಿ, ಸ್ವಪ್ರತಿಷ್ಠೆಗೆ ಆದ ಗಾಯಗಳು, ರಾಜಕೀಯಕ್ಕೆ ಅಂಟಿಕೊಂಡ ಘಟನೆಗಳು ಈ ಎಲ್ಲಾ ಅಂಶಗಳನ್ನು ನನ್ನ ಎಂ.ಫಿಲ್ ನಿಬಂಧದಲ್ಲಿ ಅಧ್ಯಯನದ ಮುಖೇನ ಗ್ರಹಿಸಿ ಹೇಳಿದ್ದೇನೆ.

"ಬಾಲಕ ಸಿದ್ಧಲಿಂಗಯ್ಯನ ಬದುಕು ನಿರಾತಂಕದಿಂದೇನೂ ಇರಲಿಲ್ಲ. ವಿರೋಧಿ ಗ್ಯಾಂಗ್‌ಗಳ ನಡುವಿನ ಘನಘೋರ ಕದನಗಳನ್ನು ಕಂಡು, ಮೇಲ್ಜಾತಿಯ ಜನರಿಂದ ದಲಿತರ ಮೇಲೆ ನಡೆದ ದಾಳಿಗಳನ್ನು ಅನುಭವಿಸುತ್ತಲೇ ಬೆಳೆದು, ರಾಜಕೀಯ ಚಳುವಳಿಗಾರರು ಆದಮೇಲೂ ವೈಯಕ್ತಿಕವಾಗಿಯೂ ಸಾಕಷ್ಟು ಬೆದರಿಕೆಗಳನ್ನು ಎದುರಿಸಬೇಕಾಯಿತು"[2] ಎಂದು ರಾಮಚಂದ್ರಗುಹಾರವರು ಪ್ರಜಾವಾಣಿಯೊಂದರ ಲೇಖನದಲ್ಲಿ ಶ್ರೀಯುತರನ್ನು ಕುರಿತಂತೆ ಅವರ ಜೀವನದ ಕೆಲವು ಘಟನಾವಳಿಗಳನ್ನು ಸ್ಮರಿಸಿ ಬರೆದಿದ್ದಾರೆ.

ಅಂತೆಯೇ "ಇಂಗ್ಲೀಷ್‌ನಲ್ಲಿ ಬಂದಿರುವ ಭಾರತೀಯ ಲೇಖಕರ ಆತ್ಮಕಥೆಗಳಲ್ಲಿ ಬಹುಪಾಲು ಗಂಭೀರವಾದವು. ಸ್ವಹಿತ ಚಿಂತನೆಯಿಂದ ಕೂಡಿದಂಥವು. ಈ ಅದ್ಭುತ ಕೃತಿಯನ್ನು ಓದಿದ ಮೇಲೆ ಮಾನವೀಯತೆಯ ಬೆಚ್ಚಗಿನ ಅನುಭವ ನನ್ನದಾಯಿತು. ಬಾಲ್ಯ ಹಾಗೂ ಬೌದ್ಧಿಕ ರೂಪಾಂತರದ ಕುರಿತು ಹೀಗೂ ಬರೆಯಬಹುದು ಎನಿಸಿತು"[3] ಎಂದು ಡಾ: ಸಿದ್ಧಲಿಂಗಯ್ಯನವರ ಆತ್ಮಕಥೆ ಓದಿದ ನಂತರ ತಮಗಾದ ಅನುಭವವನ್ನು ಸಹ ಪ್ರಜಾವಣಿಯೊಂದರ ಲೇಖನದಲ್ಲಿ ರಾಮಚಂದ್ರಗುಹಾರವರು ಹಂಚಿಕೊಂಡಿದ್ದಾರೆ.

ಹೀಗೆ ಆತ್ಮಕಥೆ ಕೇವಲ ಕಳೆದು ಹೋದ ಜೀವನವೊಂದರ ವೃತ್ತಾಂತವಾಗದೆ ಅದು ಉಳಿದವರ ಜೀವನದ ಮೇಲೆ ಬೀರುವ ಪ್ರಭಾವ ಮಹತ್ತರವಾದದ್ದು ಹಾಗೂ ಮಾರ್ಗದರ್ಶಕವಾದದ್ದು. ಈ ಹಿನ್ನೆಲೆಯಲ್ಲಿ ನಾನು ನನ್ನ ಈ ಅಧ್ಯಯನವನ್ನು ಮುಂದುವರೆಸುತ್ತಿದ್ದೇನೆ. ದಲಿತರ ಆತ್ಮಕಥೆಗಳು ಪ್ರಾದೇಶಿಕವಾಗಿ, ಸಾಮಾಜಿಕವಾಗಿ, ಭಾಷಿಕವಾಗಿ ಬೇರೆ ಬೇರೆ ನೆಲೆಗಳಿಂದ ಕೂಡಿದ್ದರೂ ಜಾತಿ ಹಿನ್ನೆಲೆಯಲ್ಲಿ ನೋಡಿದಾಗ ಬದುಕಿನ ನೆಲೆಗಳು ಒಂದೇ ರೀತಿಯ ಅವಮಾನಕ್ಕೆ ಒಳಪಟ್ಟಿರುತ್ತವೆ ಎಂಬುದನ್ನು ಹಲವಾರು ದಲಿತರ ಆತ್ಮಕಥೆಗಳನ್ನು ಓದಿದಾಗ ಅರಿವಿಗೆ ಬರುತ್ತದೆ. ಅಂತೆಯೇ ಶ್ರೀಯುತರ ಆತ್ಮಕಥೆಯೂ ಇದರಿಂದ ಹೊರತಾಗಿಲ್ಲ ಎಂಬುದನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

ಒಂದೇ ಸಾಮಾಜಿಕ ಹಿನ್ನೆಲೆಯಲ್ಲಿರುವಂತಹ ಒಂದೇ ಸಮುದಾಯವನ್ನು ಅಧ್ಯಯನ ಮಾಡುವುದು ಈ ನಿಬಂಧದ ಮುಖ್ಯ ಉದ್ದೇಶವಾಗಿದೆ. ದಲಿತರ ಸ್ಥಿತಿಗತಿಗಳು ಮುಂದಿನ ಪೀಳಿಗೆಗೆ ಹೇಗೆ ಅಸ್ಮಿತೆಯಾಗಿ ಬಳಕೆಯಾಗಬಹುದು ಎಂಬುದನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವ ಉದ್ದೇಶದಿಂದ ಡಾ: ಸಿದ್ಧಲಿಂಗಯ್ಯನವರ "ಊರು ಕೇರಿ" ಆತ್ಮಕಥನವನ್ನು ಆರಿಸಿಕೊಂಡಿದ್ದೇನೆ.

ದಲಿತರ ಬದುಕಿನ ಘಟ್ಟಗಳು, ವೈವಿಧ್ಯಪೂರ್ಣ ಜೀವನದ ಸ್ಥಿತಿಗತಿಗಳು, ಬದಲಾಗುತ್ತಿರುವ ಆತ್ಮಕಥನಗಳ ಸ್ವರೂಪ, ಹೊಸ ಸಮುದಾಯದ ರಚನೆಯ ಪ್ರಯತ್ನ, ಅಸ್ಮಿತೆಯ ಹುಡುಕಾಟವಾಗಿ ಊರುಕೇರಿ ಇತ್ಯಾದಿ ಪ್ರಮುಖ ಅಂಶಗಳು ನನ್ನ ಸಂಶೋಧನಾ ವ್ಯಾಪ್ತಿಗೆ ಒಳಗೊಳ್ಳುತ್ತವೆ.

ಸಿದ್ಧಲಿಂಗಯ್ಯನವರು ಕನ್ನಡ ನಾಡಿನ ಅಪರೂಪದ ಪ್ರತಿಭೆ ಎಂದರೆ ತಪ್ಪಾಗಲಾರದು ಸಮಾಜದ ಅತ್ಯಂತ ತಳ ಸಮುದಾಯದಿಂದ ಬಂದ ಇವರು ಶತಶತಮಾನಗಳಿಂದ ಕಾಡುತ್ತ ಬಂದಿರುವ ಹಸಿವು, ಬಡತನ, ಅಸ್ಪೃಶ್ಯತೆ, ಅಪಮಾನ, ಅನಕ್ಷರತೆ ಹಾಗೂ ಮೌಢ್ಯಗಳನ್ನು ಮೆಟ್ಟಿ ನಿಂತವರು. ಸ್ವಸಾಮರ್ಥ್ಯದಿಂದಲೇ ಅಕ್ಷರವನ್ನು ಕಲಿತು ಉದ್ಯೋಗ ಹಾಗೂ ಉನ್ನತ ಸ್ಥಾನಮಾನಗಳನ್ನು ಗಳಿಸಿದಂತವರು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಬೇರೆ ಬೇರೆ ಭಿನ್ನತೆಗಳು ಎದುರಾದರೂ ಸಾಹಿತ್ಯ ಮತ್ತು ಚಳುವಳಿಯನ್ನು ಬದುಕಿನ ಭಾಗವೆಂದೇ ಭಾವಿಸಿ ನಡೆದವರಾಗಿದ್ದು ಎಲ್ಲ ಸಾಹಿತಿಗಳ ಪ್ರೀತಿ–ಸ್ನೇಹ, ಸಹನೆ ಸಜ್ಜನಿಕೆಗೆ ಪ್ರೀತಿ ಪಾತ್ರರಾಗಿದ್ದು ಎಲ್ಲ ವರ್ಗಗಳಲ್ಲೂ ಸ್ನೇಹಿತರನ್ನು ಹೊಂದಿದ್ದಾರೆ.

- ❖ ಒಬ್ಬ ವ್ಯಕ್ತಿಯ ಆತ್ಮಕಥನವು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಒಂದು ನಾಡಿನ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.
- ❖ ಇವರ ಆತ್ಮಚರಿತ್ರೆ ಒಟ್ಟು ಸಾಮಾಜಿಕ ವ್ಯವಸ್ಥೆಯ ಚಿತ್ರಣವನ್ನು ಕಟ್ಟಿಕೊಡುತ್ತದೆ. ವ್ಯಕ್ತಿಯು ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ವೈಚಾರಿಕವಾಗಿ, ಸಾಂಸ್ಕೃತಿಕವಾಗಿ ತನ್ನನ್ನು ರೂಪಿಸಿಕೊಂಡ ಬಗೆ ಇಂತಹ ಸಮುದಾಯದಲ್ಲಿ ಒಂದು ಮಾದರಿಯಾಗಿ ನಿಲ್ಲುತ್ತದೆ. ಆದ್ದರಿಂದ ಅದನ್ನು ಒಂದೆಡೆ ಕ್ರೋಢೀಕರಿಸುವುದು ಮತ್ತು ನಿರಂತರ ಪರಿಶ್ರಮದ ಮೂಲಕ ತಳ ಸಮುದಾಯದ ನೆಲೆಯಿಂದ ಬಂದ ವ್ಯಕ್ತಿ ತಲುಪಬಹುದಾದ ಎತ್ತರವನ್ನು ಇಲ್ಲಿ ಗುರುತಿಸಿ ಈ ದಾರಿಯ ವಿವಿದ ಘಟ್ಟಗಳನ್ನು ಗುರುತಿಸಿ ಇದು ಹೇಗೆ ಅನುಕರಣೀಯ ಎಂಬುದನ್ನು ಸ್ಪಷ್ಟಪಡಿಸುವುದು ಈ ನಿಬಂಧದ ಉದ್ದೇಶವಾಗಿದೆ.
- ❖ ಅಲ್ಲದೆ ದಲಿತ ಸಮುದಾಯದ ಮೇಲೆ ಆಗಿರಬಹುದಾದ ಡಾ: ಸಿದ್ಧಲಿಂಗಯ್ಯನವರ ಪ್ರಭಾವವನ್ನು ಕುರಿತು ತಿಳಿದುಕೊಳ್ಳುವುದು.
- ❖ ವಿಮರ್ಶಾತ್ಮಕವಾದ ಅಧ್ಯಯನಕ್ಕೆ ಶ್ರೀಯುತರ ಆತ್ಮಕಥನವನ್ನು ಒಳಪಡಿಸಿದಾಗ ಅವರ ಚಿಂತನೆಗಳನ್ನು ಅರ್ಥಮಾಡಿಕೊಳ್ಳುವುದು ಹಾಗೂ ಪ್ರಸ್ತುತ ಸನ್ನಿವೇಶದಲ್ಲಿ ಅವರ ಆತ್ಮಕಥನದ ಮೂಲಕ ಅವರ ಬದುಕಿನಲ್ಲಾದ ಬದಲಾವಣೆಯ ಪ್ರಮುಖ ಅಂಶಗಳು ಹಾಗೂ ಅಸ್ಮಿತೆಯ ಅಗತ್ಯತೆಯನ್ನು ಕಂಡುಕೊಳ್ಳುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಈ ಮೂಲಕ ಇಡೀ ದಲಿತ ಸಮುದಾಯವನ್ನು ವಿಶ್ಲೇಷಿಸಿದಾಗ ಸಮುದಾಯದ ಅತಂತ್ರಸ್ಥಿತಿಗೆ ಕಾರಣಗಳೇನು? ಇಲ್ಲಿ ಡಾ: ಸಿದ್ಧಲಿಂಗಯ್ಯನವರ ಜೀವನದ ಹೋರಾಟ ಮತ್ತು ಪ್ರಯತ್ನಗಳೇನು? ಎಂಬುದನ್ನು ವ್ಯವಸ್ಥಿತವಾಗಿ ತಿಳಿಯುವ ಬಗೆಯನ್ನು ಈ ಸಂಶೋಧನಾ ನಿಬಂಧ ಒಳಗೊಂಡಿದೆ.

ಕೊನೆಟಿಪ್ಪಣಿ

1. ಬಿ. ಶಿವಕುಮಾರ್ : 'ದನಿ ಇಲ್ಲದವರ ದನಿ ನಾಡೋಜ ಡಾ. ಸಿದ್ಧಲಿಂಗಯ್ಯ', ದಲಿತ ಅಭಿವೃದ್ಧಿ ಸಂಸ್ಥೆ, ಕನ್ನಡ ವಿಶ್ವವಿದ್ಯಾಲಯ, ಪುಟ-೩
2. ಪ್ರಜಾವಾಣಿ ಲೇಖನ : ದಿನಾಂಕ ೧೩—೬-೨೦೧೪, ಪುಟ-೬
3. ಪ್ರಜಾವಾಣಿ ಲೇಖನ : ದಿನಾಂಕ ೧೩—೬-೨೦೧೪, ಪುಟ-೬

ಅಧ್ಯಾಯ-೨

ಆತ್ಮಕಥನಗಳು ಬದಲಾಗುತ್ತಿರುವ ಸ್ವರೂಪ

'ಆತ್ಮಕಥೆ' ಎನ್ನುವುದು ಕನ್ನಡ ಗದ್ಯ ಸಾಹಿತ್ಯದಲ್ಲಿ ಮೂಡಿಬಂದಂತಹ ಹೊಸ ಪ್ರಕಾರವಾಗಿದೆ. ಕವಿಶ್ರೇಷ್ಠರೂ ತಾವೇ ಸ್ವತಃ ತಮ್ಮ ಜೀವನದ ಬಗೆಗೆ ಬರೆದಂತಹ ಆತ್ಮಕಥೆಗಳು ನಮ್ಮಂತಹವರಿಗೆ, ಸಮಾಜಕ್ಕೆ ದಾರಿ ದೀಪವಾಗಿರುತ್ತದೆ. ದಲಿತರು-ಸವರ್ಣೀಯರು ಸೇರಿದಂತೆ ಬರಹಗಾರರ ಕೆಲವು ಆತ್ಮಕಥೆಗಳನ್ನು ಅಭ್ಯಸಿಸಿ ಅವಲೋಕಿಸುವುದರ ಮೂಲಕ ಆತ್ಮಕಥೆಗಳ ಬದಲಾಗುತ್ತಿರುವ ಸ್ವರೂಪವನ್ನು ಈ ಅಧ್ಯಯನದಲ್ಲಿ ನಾನು ಹೇಳಲು ಹೊರಟಿದ್ದೇನೆ.

ಆತ್ಮಕಥೆಗಳು ಕವಿಯ ವೈಯಕ್ತಿಕ ಜೀವನದ ವಿವರಗಳು, ಅವರ ಸಾಹಿತ್ಯ ಸೃಷ್ಠಿಗೆ ಪ್ರೇರಕವಾದಂತಹ ಅಂಶಗಳನ್ನು ತಿಳಿಸಿಕೊಡುತ್ತವೆ. ಆತ್ಮಚರಿತ್ರೆಯನ್ನು ಅವಲೋಕಿಸಿ ಅಲ್ಲಿ ಅನಾವರಣಗೊಂಡಿರುವ ವಿಷಯಗಳ ಸಾರವನ್ನು ಸಂಕ್ಷಿಪ್ತವಾಗಿ ತಿಳಿಸುವ ಪ್ರಯತ್ನವನ್ನು ನನ್ನ ಈ ಅಧ್ಯಯನದಲ್ಲಿ ಕೈಗೊಂಡಿದ್ದೇನೆ. ವ್ಯಕ್ತಿಯ ಆತ್ಮಕಥೆ ವ್ಯಕ್ತಿಯೊಬ್ಬರದಾದರೂ ಅದು ರಾಷ್ಟ್ರದ, ಒಂದು ಕಾಲದ ಇತಿಹಾಸದ, ಸಾಮಾಜಿಕ ಪರಿಸ್ಥಿತಿಯ ಅರಿವಿಗೆ ಸಹಾಯಕವಾಗುತ್ತದೆ. ಆ ವ್ಯಕ್ತಿಯು ಪ್ರಸಿಗ್ಧ ಸಾಹಿತಿಯೋ, ಕಲಾವಿದನೋ, ವಿಶಿಷ್ಟ ಸಾಧನೆ ಮಾಡಿರುವವನೋ ಆಗಿದ್ದರಂತೂ ಅವರ ಜೀವನ ಒಟ್ಟಾರೆ ಸಮಾಜ ಜೀವನದ, ರಾಷ್ಟ್ರಜೀವನದ ಅವಿಭಾಜ್ಯ ಅಂಗವಾಗುತ್ತದೆ. ಆದರೆ ಆತ್ಮಚರಿತ್ರೆಯು ಯಾವಾಗಲೂ ಕೇವಲ ಮಹಾಪುರುಷರಿಗೆ ಸೀಮಿತವಾಗಿರಬೇಕು ಎಂಬ ನಿರ್ಬಂಧವನ್ನು ಒಪ್ಪಲಾಗುವುದಿಲ್ಲ.

"ಎಷ್ಟು ಕ್ಷುದ್ರ, ನಿರರ್ಥಕವೆಂದು ಕಾಣುವ ಜೀವನವೂ ಸಹ ಯಥಾರ್ಥ ನಿರೂಪಣೆ ಪಡೆದಾಗ ಸತ್ವಪೂರ್ಣವಾಗಿ ಕಾಣಬಲ್ಲದು" ಎಂಬುದು ಸಾಹಿತಿಗಳ ಅನಿಸಿಕೆ. ಒಟ್ಟಾರೆ ಆತ್ಮಕಥೆಗಳ ಉದ್ದೇಶ ಒಬ್ಬ ಆದರ್ಶ ವ್ಯಕ್ತಿಯ ಜೀವನದ ವಿವರಣೆಯನ್ನು ತಿಳಿಸುವುದೇ ಆಗಿದೆ.

'ಆತ್ಮಕಥೆ' ಎಂಬ ಪ್ರಕಾರವು ಕನ್ನಡಕ್ಕೆ ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಲೇ ಮೂಡಿಬಂದದ್ದು. ಇಂಗ್ಲೀಷ್ ಸಾಹಿತ್ಯದಲ್ಲಿ ವಿಪುಲವಾದ ಆತ್ಮಚರಿತ್ರೆಗಳು ಕಂಡುಬರುತ್ತವೆ. ಉದಾ:-ರೂಸೊ, ಪ್ಯಾಂಕ್ಲಿನ್, ಜಾನ್ಸನ್, ಚರ್ಚಿಲ್ ಹೀಗೆ ಮುಂತಾದವರ ಆತ್ಮಕಥೆಗಳು ಇಂಗ್ಲೀಷ್ ಸಾಹಿತ್ಯದಲ್ಲಿವೆ. ಇದೇ ರೀತಿ ಕನ್ನಡದಲ್ಲೂ ಹಲವು ಆತ್ಮಕಥೆಗಳು ಕಂಡುಬರುತ್ತವೆ. ಕನ್ನಡ ಸಾಹಿತ್ಯಕ್ಕೆ ಬಂದಿರುವ ಆತ್ಮಕಥೆಗಳು ಅರ್ಧ ಸ್ವತಂತ್ರ ಆತ್ಮಕಥೆಗಳಾದರೆ ಉಳಿದವುಗಳು ಅನುವಾದಗಳಾಗಿವೆ. ಸ್ವತಂತ್ರ ಆತ್ಮಕಥೆಗಳಲ್ಲಿ ಸಾಹಿತಿಗಳ ಮತ್ತು ಕಲಾವಿದರ ಆತ್ಮವೃತ್ತಾಂತಗಳನ್ನು ಕಾಣಬಹುದು.

ರಾಷ್ಟ್ರಕವಿ ಕುವೆಂಪು, ದ.ರಾ ಬೇಂದ್ರೆ, ಮಾಸ್ತಿ ವೆಂಕಟೇಶ್ ಐಯ್ಯಂಗಾರ್, ಶಿವರಾಮ ಕಾರಂತರು, ವಿ.ಕೃ ಗೋಕಾಕ್ ಮುಂತಾದ ಸಾಹಿತಿಗಳ ಆತ್ಮಕಥೆಗಳು ಸ್ವತಂತ್ರವಾದರೆ, ಮರಾಠಿ ಮೂಲದ ಕನ್ನಡಕ್ಕೆ ಅನುವಾದವಾಗಿರುವ ಕೃತಿಗಳು ದಯಾ ಪವಾರರ 'ಬಲುತ', ಶರಣಕುಮಾರ ಲಿಂಬಾಳೆಯವರ 'ಅಕ್ರಮ ಸಂತಾನ', ಬೇಬಿತಾಯಿ ಕಾಂಬಳೆಯವರ 'ಬದುಕು ನಮ್ಮದು', ಲಕ್ಷ್ಮಣ ಗಾಯಕವಾಡರ 'ಉಚಲ್ಯಾ' ಇತ್ಯಾದಿ. ಕನ್ನಡಕ್ಕೆ ಅನುವಾದಗೊಂಡ ಈ ಮೇಲಿನ ನಾಲ್ಕು ಆತ್ಮಕಥೆಗಳನ್ನು ಸಿದ್ಧಲಿಂಗಯ್ಯನವರ ಆತ್ಮಕಥೆಯಾದ ಊರು

ಕೇರಿಯ ಹಿನ್ನೆಲೆಯಲ್ಲಿ ಅಭ್ಯಸಿಸಿ ಈ ನಿಬಂಧದ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದೇನೆ. ಅಭ್ಯಸಿಸಿರುವ ಈ ನಾಲ್ಕು ದಲಿತ ಆತ್ಮಕಥೆಗಳ ಘಟನಾವಳಿಗಳನ್ನು ಗಮನಿಸಿ 'ಆತ್ಮಕಥನಗಳು ಬದಲಾಗುತ್ತಿರುವ ಸ್ವರೂಪ' ಎಂಬ ಅಧ್ಯಯನವನ್ನು ಕೈಗೊಂಡಿದ್ದು ಇದಕ್ಕೆ ಪೂರಕವಾಗಿ ಕೆಲವು ದಲಿತ ಹೋರಾಟಗಾರರ ಕೃತಿಗಳನ್ನು ಆಯ್ಕೆಮಾಡಿಕೊಂಡಿದ್ದೇನೆ.

ವ್ಯಕ್ತಿಯೇ ತನ್ನ ಬದುಕನ್ನು ಕುರಿತು ಪ್ರಾಮಾಣಿಕವಾಗಿ ಬರೆದ ಇಂತಹ ಗ್ರಂಥಗಳು ಆ ವ್ಯಕ್ತಿಯ ಜೀವನವನ್ನು ಅರಿಯಲು ಪ್ರಾಮಾಣಿಕ ಸಾಕ್ಷ್ಯ ಒದಗಿಸುತ್ತವೆ. ರಾಷ್ಟ್ರಕವಿ ಕುವೆಂಪುರವರ "ನೆನಪಿನ ದೋಣಿಯಲ್ಲಿ" ಎಂಬ ಆತ್ಮಕಥೆ ಕುವೆಂಪುರವರ ಕಾವ್ಯ ಜೀವನದ ಅವರ ಬದುಕಿನ ಎಳೆಗಳನ್ನು, ವೈಯಕ್ತಿಕ ಜೀವನದ ಏಳು-ಬೀಳುಗಳನ್ನು ಜೊತೆಗೆ ಆ ಕಾಲದ ಸಾಮಾಜಿಕ ಸ್ಥಿತಿ-ಗತಿಯನ್ನು ಬಿಂಬಿಸುತ್ತದೆ. ಕವಿಯು ತನ್ನ ನೆನಪಿನ ಚುಕ್ಕಾಣಿಯನ್ನು ಹಿಡಿದು ನೆನಪಿನ ದೋಣಿಯನ್ನು ನಡೆಸುತ್ತ ಹಲವಾರು ವಿಷಯಗಳನ್ನು ತಿಳಿಸುತ್ತಾ ಸಾಗುತ್ತಾರೆ.

1968-69 ರಲ್ಲಿ 1350 ಪುಟಗಳ ಮೂರು ಸಂಪುಟಗಳಲ್ಲಿ ಪ್ರಕಟವಾಗಿರುವ ಮಾಸ್ತಿಯವರ "ಭಾವ" ಎಂಬ ಆತ್ಮಕಥೆ ಕನ್ನಡದ ವಿಶೇಷ ಆತ್ಮಕಥೆಗಳಲ್ಲಿ ಒಂದು. ಇದು ಅವರ ಸಾರ್ಥಕ ಜೀವನದ ಅರ್ಧಶತಮಾನದ ಬದುಕನ್ನು ಬಿಂಬಿಸುತ್ತದೆ.

ಶಿವರಾಮಕಾರಂತರ 'ಹುಚ್ಚುಮನಸ್ಸಿನ ಹತ್ತು ಮುಖಗಳು' ಮತ್ತು 'ಸ್ಮೃತಿಪಟಲದಿಂದ' ಎಂಬ ಕೃತಿಗಳು ಕಾರಂತರ ಕಾಲು ಶತಮಾನದ ಬಾಳಿನ ಕಥೆಯನ್ನು ತಿಳಿಸುತ್ತದೆ. ಇವು ಕಾರಂತರ ಸಮೃದ್ದವಾದ ಅನುಭವ ಹಾಗೂ ಬಹುಮುಖ ಪ್ರತಿಭೆಗೂ ಜ್ವಲಂತ ಸಾಕ್ಷಿಯಾಗಿವೆ. ಇದರಲ್ಲಿ ಕವಿಯು ಗುರು, ಗುರಿಯಿಲ್ಲದೆ ಹುಚ್ಚು ಮನಸ್ಸು ತೋರಿದ ದಿಕ್ಕಿನಲ್ಲಿ ನಡೆದ ಈ ಸಾಹಸಿ ಮಾಡಿದ ಸಾಧನೆಯ ರಾಷ್ಟ್ರಭಕ್ತಿ, ಸ್ವದೇಶಿ ಚಳುವಳಿ, ಆಧ್ಯಾತ್ಮ ಸಾಧನೆ, ವ್ಯಾಪಾರ, ಪತ್ರಿಕೋದ್ಯಮ, ಕಲೆಯ ವಿಭಿನ್ನ ಮುಖಗಳು, ನಾಟಕ, ನೃತ್ಯ, ವಾಸ್ತುಶಿಲ್ಪ, ಸಂಗೀತ, ಸಮಾಜ ಸುಧಾರಣೆ, ಗ್ರಾಮೋದ್ಧಾರ, ಶಿಕ್ಷಣ ವಲಯದ ಪ್ರಯೋಗಗಳು, ಉದ್ಯೋಗ ಇಷ್ಟೆಲ್ಲಾ ವಿಭಿನ್ನ ರೀತಿಯ ಬದುಕಿನ ವಿವರಗಳು ತಮ್ಮ ಜೀವನದಲ್ಲಿ ನಡೆದಿವೆ ಎಂಬುದನ್ನು ತಿಳಿಸುತ್ತಾರೆ. ಸ್ವತಂತ್ರ ಜೀವನದಿಂದ ಸಂನ್ಯಾಸಿ ಜೀವನ ನಡೆಸಿ ನಂತರ ಸಂಸಾರಿಯಾಗಿ ಸಾಗಿದ್ದೇನೆ ಎಂದು ಅವರೇ ಹೇಳಿಕೊಳ್ಳುತ್ತಾರೆ. ಹೀಗೆ ಪ್ರಚಲಿತ ವಿಷಯಗಳ ಬಗೆಗಿನ ಆಳವಾದ ಆಲೋಚನೆ, ಅಸಾಧ್ಯ ಸಾಹಸಗಳನ್ನು ಜಯಿಸಿದ ಕೀರ್ತಿ ಕಾರಂತರದ್ದು.

ದೇಜಗೌರವರ 'ಹೋರಾಟದ ಬದುಕು' (1968) ಅವರ ಅರ್ಧಶತಮಾನದ ಆತ್ಮಕಥೆ. ಇವರ 40 ವರ್ಷಗಳ ಜೀವನದ ಹೋರಾಟದ ವಿವರ, ಸಾಹಿತ್ಯದ ಬಗೆಗಿನ ಪ್ರೀತಿ, ಕನ್ನಡ ನುಡಿಯ ಬಗೆಗಿನ ಅವರ ಅಭಿಮಾನ ಇವುಗಳನ್ನು ಒಳಗೊಂಡಿದ್ದು ಅಚ್ಚ ಕನ್ನಡಿಗನ ಹೋರಾಟದ ಬದುಕನ್ನು ಈ ಆತ್ಮಕಥೆಯು ಒಳಗೊಂಡಿದೆ. ಹಾಗೆಯೇ ದ.ರಾ ಬೇಂದ್ರೆಯವರು ನಡೆದು ಬಂದ ದಾರಿಯ ಮೂರನೆಯ ಸಂಪುಟದಲ್ಲಿ 'ಚತುರ್ಮುಖ' ಎಂಬ ಶೀರ್ಷಿಕೆಯಲ್ಲಿ ತಮ್ಮ ಆತ್ಮವೃತ್ತಾಂತವನ್ನು ಬರೆದಿದ್ದಾರೆ. ಆಲೂರು ವೆಂಕಟರಾಯರ 'ಜೀವನ ಸ್ಮರಣೆ' ನವರತ್ನರಾಂರವರ ಕೆಲವು ನೆನಪುಗಳು, ಸಿಂಪಿಲಿಂಗಣ್ಣನವರ 35ವರ್ಷಗಳು, ಜಿ.ಪಿ ರಾಜರತ್ನಂರವರ 10 ವರ್ಷಗಳು, ವಾಸುದೇವಚಾರ್ಯರ 'ನೆನಪುಗಳು', ಗುಬ್ಬಿವೀರಣ್ಣನವರ 'ಕಲೆಯೇ ಕಾಯಕ' ಇನ್ನು ಮುಂತಾದವು ಕನ್ನಡದ ಮುಖ್ಯ ಆತ್ಮ ಕಥೆಗಳಾಗಿವೆ.

70 ರ ದಶಕದ ಆರಂಭದಲ್ಲಿ ನವ್ಯ ಸಾಹಿತ್ಯದ ನಂತರ ಕಂಡುಬಂದದ್ದು ದಲಿತ ಮತ್ತು ಬಂಡಾಯ ಸಾಹಿತ್ಯ. ಜ್ಯೋತಿ ಬಾಪುಲೆ, ಅಂಬೇಡ್ಕರ್, ಪೆರಿಯಾರ್‌ರ ಬರಹಗಳು ಹಾಗೆಯೇ ಇಂದಿರಾಗಾಂಧಿಯವರ ದಲಿತ ಪರ ಕಾಳಜಿ, ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ದೇವರಾಜು ಅರಸುರವರ ಶೋಷಿತ ವರ್ಗಗಳ ಕುರಿತಾದ ಕಾಳಜಿಯೇ ಕಾರಣವಾಗಿ ಅನೇಕ ದಲಿತರು ಶಿಕ್ಷಣದ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಯಿತು. ಹೀಗೆ ಶಿಕ್ಷಣ ಪಡೆದ ಸಮುದಾಯ ತನ್ನ ಹಾಗೂ ತನ್ನ ಸುತ್ತಲಿನ ಸಮುದಾಯದ ಅತಂತ್ರಸ್ಥಿತಿ ಮತ್ತು ಇದಕ್ಕೆ ಕಾರಣವಾದ ವ್ಯವಸ್ಥಿತ ರಾಜಕಾರಣದ ಕುರಿತು ಆಲೋಚಿಸಿತು. ಇದರ ಪರಿಣಾಮವೇ ದಲಿತ ಬಂಡಾಯ ಸಾಹಿತ್ಯದ ರಚನೆ.

ಕನ್ನಡದಲ್ಲಿ ಕಂಡು ಬಂದಂತಹ ದಲಿತ ಲೇಖಕರು ಆತ್ಮಕಥನಗಳನ್ನು ಬರೆದರು. ಇಲ್ಲಿ ತಮ್ಮ ಬಗ್ಗೆ ಹೇಳಿಕೊಳ್ಳುವುದಕ್ಕಿಂತಲೂ ಈ ಮೂಲಕ ತಮ್ಮ ಸಮುದಾಯದ ದಾರುಣ ಸ್ಥಿತಿಯನ್ನು, ಅಲ್ಲೇ ಬದುಕನ್ನು ಕಟ್ಟಿಕೊಳ್ಳಲು ನಡೆಸಬೇಕಾದ ಹೋರಾಟಗಳನ್ನು ತಿಳಿಸುವುದೇ ಇಲ್ಲಿ ಮೊದಲ ಆದ್ಯತೆಯಾಗಿತ್ತು. ಇದು ಅಗತ್ಯವೂ ಆಗಿತ್ತು. ಕನ್ನಡದಲ್ಲಿ ಮೊದಲು ಬಂದ ಆತ್ಮಕಥನವೆಂದರೆ ಅರವಿಂದ ಮಾಲಗತ್ತಿಯವರ ಗೌರ್ನಮೆಂಟ್ ಬ್ರಾಹ್ಮಣ. ನಂತರದಲ್ಲಿ ತುಂಬಾಡಿ ರಾಮಯ್ಯನವರ ಮಣೆಗಾರ, ಲಕ್ಷ್ಮಣ್‌ರವರ 'ಸಂಭೋಳಿ', ಸಿದ್ಧಲಿಂಗಯ್ಯನವರ ಆತ್ಮಕಥನ 'ಊರುಕೇರಿ' ಪ್ರಮುಖವಾದ ಗಮನಾರ್ಹ ಕೃತಿಗಳು. ಇದೇ ರೀತಿ ಅನ್ಯಭಾಷೆಯಲ್ಲಿ ರಚನೆಯಾಗಿದ್ದ ಅನೇಕ ದಲಿತ ಹೋರಾಟಗಾರರ ಆತ್ಮಕಥೆಗಳು ಕನ್ನಡಕ್ಕೆ ಅನುವಾದಗೊಂಡಿದ್ದು ಬಹು ಮುಖ್ಯವಾಗಿ ಮರಾಠಿಯಿಂದ ಬಂದ ಬಲುತ, ಅಕ್ರಮ ಸಂತಾನ, ಉಚಲ್ಯಾ, ಬದುಕು ನಮ್ಮದು ಈ ಆತ್ಮಕಥನಗಳು ಸಾಕಷ್ಟು ಪ್ರಭಾವ ಬೀರಿವೆ.

ದಲಿತ ಸಮುದಾಯಗಳು ಪ್ರಾದೇಶಿಕವಾಗಿ, ಭಾಷಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಬೇರೆ ಬೇರೆ ನೆಲೆಗಳನ್ನು ಒಳಗೊಂಡಿದ್ದರೂ ಅವರ ಬಗೆಗಿನ ಶೋಷಣೆಗಳು ಹಾಗೂ ಬದುಕಿನ ನೆಲೆಗಳ ಸ್ವರೂಪ ಒಂದೇ ಬಗೆಯಾಗಿದೆ. ಅಲ್ಲದೆ ಎಲ್ಲಾ ಅವಮಾನಿತರ, ದಮನಕ್ಕೆ ಒಳಗಾದವರ, ಅಸಹಾಯಕರ ಶೋಷಣೆಯ ವಿರುದ್ಧ ಹೋರಾಟಗಳು ನಡೆದಿವೆ. ಪ್ರಜಾಸತ್ತಾತ್ಮಕವಾಗಿ, ರಕ್ತರಹಿತವಾಗಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಲು ಹಲವು ದಲಿತ ಬಂಡಾಯ ಹೋರಾಟಗಾರರು ಕೈಜೋಡಿಸಿದ್ದಾರೆ. ಇಂತಹವರ ಆತ್ಮಕಥೆಗಳು ಸಹೃದಯರ ಮನ ಕಲಕುತ್ತವೆ. ಊರು ಕೇರಿ ಆತ್ಮಕಥನದ ಹಿನ್ನೆಲೆಯಲ್ಲಿ ಡಾ: ಸಿದ್ಧಲಿಂಗಯ್ಯನವರನ್ನು ಇಲ್ಲಿ ದಮನಿತರ ಸಮುದಾಯಕ್ಕೆ ಚೈತನ್ಯ ತುಂಬಿದವರೆಂದು ಹೇಳಬಹುದು. ದಲಿತ ಹೋರಾಟಗಾರರಲ್ಲದೆ ಕೆಲವು ಸವರ್ಣೀಯ ಸಾಹಿತಿಗಳೂ ಸಹ ಇವರನ್ನು ದಲಿತರೆನ್ನುವ ಸಂಕುಚಿತ ಮನಸ್ಥಿತಿಯಿಂದ ಹೊರತರಲು ಪ್ರಯತ್ನಿಸಿದ್ದಾರೆ.

ಮುಂದುವರೆದು ಯಾವುದೇ ದಲಿತರ ಪ್ರಜ್ಞಾವಂತ, ಸಂವೇದನಾಶೀಲ ದಿನಗಳನ್ನು ಅಭ್ಯಸಿಸಿದಾಗ ನಮಗೆ ತಿಳಿದುಬರುವ ಅಂಶವೆಂದರೆ ದಲಿತರು ಬಾಲ್ಯಜೀವನದಲ್ಲಿ ಹೆಚ್ಚು ಬಡತನ, ಹಸಿವು ಹೊಂದಿದ್ದು ಈ ಕಾರಣದಿಂದಾಗಿಯೇ ದಲಿತರು ಪಟ್ಟಭದ್ರಹಿತಾಶಕ್ತಿಗಳಿಂದ ಶೋಷಿತರಾಗಿದ್ದು ಆಕ್ರೋಶ, ಸಿಟ್ಟು, ಹಿಂಸೆ ಇಂತಹ ಮನಸ್ಥಿತಿಗೆ ಒಳಗಾಗಿರುವುದನ್ನು ಕಾಣಬಹುದು. ಹೀಗೆ ಬದುಕಿನ ಎಲ್ಲಾ ಹಂತಗಳಲ್ಲಿಯೂ ದಲಿತರು ಹೆಚ್ಚು ನೋವು ಮತ್ತು ಅಪಮಾನ ಅನುಭವಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಈ ಕಾಲಘಟ್ಟದಲ್ಲಿಯಿದ್ದ ಅನೇಕ

ದಲಿತರು ಶಿಕ್ಷಣ ಪಡೆದು ಅನುವಾದಗಳನ್ನು ಮಾಡಿದರು. ಇದರ ಪರಿಣಮವಾಗಿ ದಲಿತ ಬರಹಗಾರರು ಸಹ ತಮ್ಮ ಆತ್ಮಕಥನಗಳನ್ನು ಬರೆದಿದ್ದಾರೆ.

ಡಾ॥ ಅಂಬೇಡ್ಕರ್, ನೇಲ್ಸನ್ ಮಂಡೇಲಾರಂತಹವರ ಬದುಕನ್ನು ಕುರಿತಾದ ಶ್ರದ್ಧೆ, ಪ್ರಾಮಾಣಿಕತೆ, ಛಲ, ಸ್ವಾಭಿಮಾನ, ಹೋರಾಟದ ವಿಧಾನ, ಪ್ರತಿಭೆ, ದಿಟ್ಟತನ ಇಂತಹ ಮೌಲ್ಯಗಳಿಂದ ಪ್ರಭಾವಿತರಾದವರು ಸಿದ್ಧಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಬಿ. ಕೃಷ್ಣಪ್ಪ ಮುಂತಾದವರು. ಇವರುಗಳು ಅವಿರತ ಹೋರಾಟದಿಂದಲೇ ಬದುಕನ್ನು ಕಟ್ಟಿಕೊಂಡ ಶ್ರದ್ಧಾಳುಗಳು. ಇವರ ಬರವಣಿಗೆಯಿಂದ ಪ್ರಭಾವಿತರಾದ ಅನೇಕ ತಳಸಮುದಾಯದ ತರುಣರು ಇವರನ್ನೇ ಆದರ್ಶವಾಗಿರಿಸಿಕೊಂಡು ಶೋಷಿತ ನೆಲೆಗಳಿಂದ ಹೊರಬರುವ ಪ್ರಯತ್ನವನ್ನು ಮಾಡಲು ಸಾಧ್ಯವಾಗುತ್ತಿದೆ.

ಈ ಹಿನ್ನೆಲೆಯಿಂದ ನೋಡಿದಾಗ ಇವರ ಆತ್ಮಕಥನ ಉಂಟುಮಾಡಿದ ಪರಿಣಾಮ ವಿಶೇಷವಾದದ್ದು. ಈ ಹಿಂದೆ ಪರಿಚಯಿಸಿದ ಮಾಸ್ತಿ, ಕಾರಂತ, ಕುವೆಂಪು ಇತ್ಯಾದಿ. ಸಮಾಜದ ಮುಖ್ಯವಾಹಿನಿಯಲ್ಲಿದ್ದ ಬರಹಗಾರರ ಆತ್ಮಕಥನಗಳಿಗಿಂತ ಸಿದ್ಧಲಿಂಗಯ್ಯನವರ ಆತ್ಮಕಥನಗಳ ಸ್ವರೂಪ ಭಿನ್ನವಾಗಿದೆ.

ಹಾಗೆಯೇ ಕನ್ನಡಕ್ಕೆ ಅನುವಾದವಾಗಿರುವ ದಲಿತ ಆತ್ಮಕಥನಗಳನ್ನು ಸೇರಿಸಿಕೊಂಡಂತೆ ಒಟ್ಟಾರೆ ದಲಿತ ಆತ್ಮಕಥನಗಳ ಸ್ವರೂಪವು ಸಹ ಭಿನ್ನವಾಗಿದೆ. ಈ ಹಿನ್ನೆಲೆಯಲ್ಲಿ ಮರಾಠಿ ಮೂಲದಿಂದ ಕನ್ನಡಕ್ಕೆ ಅನುವಾದವಾಗಿರುವ ದಲಿತ ಆತ್ಮಕಥನಗಳ ಬದಲಾದ ಸ್ವರೂಪದ ಅಂಶಗಳನ್ನು ಇಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಬೇಬಿತಾಯಿ ಕಾಂಬಳೆಯ 'ಬದುಕು ನಮ್ಮದು' ಮರಾಠಿಯ ಮೊದಲ ದಲಿತ ಸ್ತ್ರೀಯ ಆತ್ಮಕಥೆಯಾಗಿದ್ದರಿಂದ ಇದಕ್ಕೊಂದು ವಿಶೇಷ ಸ್ಥಾನವಿದೆ. 50ವರ್ಷಗಳ ಹಿಂದಿನ ಪಶ್ಚಿಮ ಮಹಾರಾಷ್ಟ್ರದ ಹಳ್ಳಿಯ ಹೊಲೆಯ ಸಮಾಜದ ಚಿತ್ರ ಇದರ ಕೇಂದ್ರ ಬಿಂದು. ಇವರ ಬರವಣಿಗೆಯ ಸ್ವರೂಪ ಸಮಾಜ ಶಾಸ್ತ್ರೀಯದ್ದಾಗಿದೆ. ಇವರು ಬಾಲ್ಯದಿಂದಲೂ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಆಷಾಢಮಾಸದ ದೇವರ ಆಚರಣೆ, ಮೈಮೇಲೆ ದೇವರು ಬರುವ ಪದ್ಧತಿ, ಪೋತರಾಜರ ಜೀವನ, ಕೋಣನ ಜಾತ್ರೆ ಉಳಿದ ಕಡೆಯಲ್ಲಿ ಉಪಲಬ್ಧವಿಲ್ಲದ ಮಾಹಿತಿಯೂ ಸಮಾಜ ಶಾಸ್ತ್ರದ ದೃಷ್ಟಿಯಿಂದ ಅಮೂಲ್ಯವಾದದ್ದು. ಈ ಆತ್ಮಕಥನದಲ್ಲಿ ಲೇಖಕಿಯು ಆ ಕಾಲದ ಹೊಲೆಯ ಮಹಿಳೆಯರ ಜೀವನ, ಏಳೆಂಟು ವರ್ಷದ ಪೋರಿಯ ಲಗ್ನ, ಅತ್ತೆಯ ಮನೆಯ ಕಿರುಕುಳ, ಚಿತ್ರಹಿಂಸೆ, ಮಗ ಸೊಸೆಯನ್ನು ದೂರಮಾಡುವ ಅತ್ತೆಯ ಕುತಂತ್ರ, ಓಡಿಹೋದ ಸೊಸೆಯನ್ನು ಹಿಡಿದು ತಂದು ಕಾಲಿಗೆ ಹಾಕುವ ಸಂಕೋಲೆ, ಮೂಗು ಕತ್ತರಿಸುವ ಪ್ರಸಂಗ ಇಂಥ ಅಮಾನುಷ ಪ್ರಕಾರಗಳನ್ನು ಬೇಬಿ ಕಾಂಬಳೆಯವರು ಸಹಜವಾಗಿ ಬಣ್ಣಿಸುವ ರೀತಿಯು ಭಾರತೀಯ ಸ್ತ್ರೀ ಜೀವನ ಮತ್ತು ಸಮಾಜದ ಮೇಲೆ ಬೆಳಕು ಚೆಲ್ಲುತ್ತದೆ. ಆಷಾಡದ ಜೀವ ಹಿಂಡುವ ಸ್ನಾನ, ಹೇನುಗಳನ್ನು ಕೊಲ್ಲುವ ಪ್ರಸಂಗಗಳಲ್ಲಿ ಹಾಸ್ಯ ಬೆರೆತುಕೊಂಡಿದೆ. ಬಡತನವಿದ್ದರೂ ದಲಿತರು ರಾಜಾ–ರಾಣಿ ಎಂದು ತಮ್ಮನ್ನು ಕರೆದುಕೊಳ್ಳುವಲ್ಲಿ ನೋವು ಮತ್ತು ನಿರೀಕ್ಷೆಯ ಕನಸುಗಳು ಮೇಲ್ನೋಟಕ್ಕೆ ವ್ಯಕ್ತವಾಗಿದೆ.

ಬೇಬಿತಾಯಿ ಕಾಂಬಳೆ ಸುದೀರ್ಘವಾದ ಪ್ರವಾಸ ಕೈಗೊಂಡು ಆ ಪ್ರವಾಸದಲ್ಲಿ ಅವರು ಕಂಡು ಅನುಭವಿಸಿದ ಪ್ರಸಂಗಗಳನ್ನು ತುಂಬಾ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಹೊಲೆಯ ಜನಾಂಗಕ್ಕೆ ಸೇರಿದ ಮಹಿಳೆಯ ಸುತ್ತಲಿನ ಸಮಾಜ ಹಾಗೂ ಬೇಬಿ ಕಾಂಬಳೆಯವರ ವೈಯಕ್ತಿಕ ಜೀವನದಲ್ಲಿ ಡಾ: ಅಂಬೇಡ್ಕರ್‌ರ ಪ್ರಭಾವ ಬಹಳ ಮುಖ್ಯವಾದದ್ದು. 50 ವರ್ಷಗಳ ಹಿಂದಿನ ಹೊಲೆಯರ ಬದುಕು ಹೇಗಿತ್ತು, ಏನನ್ನು ಅನುಭವಿಸಬೇಕಿತ್ತು, ಗುಲಾಮಗಿರಿಯ ಸಂಕೋಲೆಯಲ್ಲಿ ಸಿಲುಕಿ ಹೇಗೆ ಒದ್ದಾಡಬೇಕಿತ್ತು. ಇಂತಹ ಜೀವನದ ಸ್ಥಿತಿಯಿಂದ ಮೇಲೆತ್ತಲು ಅಂಬೇಡ್ಕರ್ ಕೈಗೊಂಡ ಕಾರ್ಯದ ಅರಿವನ್ನು ಮೂಡಿಸಲು ಇವರು ಪ್ರಯತ್ನ ನಡೆಸಿದ್ದಾರೆ. ಅಂಬೇಡ್ಕರ್‌ರವರ ಹೋರಾಟ ಆದರ್ಶಗಳು ಅಂಬೇಡ್ಕರ್‌ರವರ ಪ್ರಭಾವದಿಂದಾಗಿ ತಮ್ಮ ಜೀವನ ಶೈಲಿ ಬದಲಾದ ಬಗ್ಗೆ ಅವರು ತಮ್ಮ ಕಥೆಯಲ್ಲಿ ಹೇಳುತ್ತಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. 'ತಮಗೆ ಅಂಬೇಡ್ಕರ್‌ರಿಂದ ಶಕ್ತಿ ಬಂತು ನಮ್ಮ ಬಾಳು ಬಂಗಾರವಾಯಿತು' ಎಂದು ಕೃತಜ್ಞತೆ ಸಲ್ಲಿಸಲು ಇಚ್ಚಿಸುತ್ತಾರೆ.

ಬೇಬಿತಾಯಿ ಕಾಂಬಳೆಯವರು ತಮ್ಮ ಜೀವನದ ಅನುಭವಗಳನ್ನು ತಿಳಿಸುತ್ತಾ ಒಮ್ಮೆ ಬಾಬಾ ಸಾಹೇಬ ಅಂಬೇಡ್ಕರರ ಜಯಂತಿಯನ್ನು ಆಚರಿಸುತ್ತಾರೆ. ನೆನಪನ್ನು ಮೆಲುಕು ಹಾಕುತ್ತಾರೆ. ಒಮ್ಮೆ ಊರಿನ ಹಿರಿಯರೆಲ್ಲ ಸೇರಿ ಜಯಂತಿ ಆಚರಿಸಲೆಂದು ಹಬ್ಬದ ಸಿದ್ಧತೆ ನಡೆಸಿದರು. ಬಾಬಾ ಸಾಹೇಬರು ಫಲಟಣಗೆ ಬರಬೇಕೆಂದು ಅನಿಸಿತು.

ಊರಿನ ಹಿರಿಯರೆಲ್ಲರೂ ಬಾಬಾಸಾಹೇಬರನ್ನು ಕರೆತರುವ ಸಿದ್ಧತೆ ನಡೆಸಿ ಯೋಚನೆಯನ್ನು ಹಮ್ಮಿಕೊಂಡರು. ಆರೇಳು ತಿಂಗಳ ಕಾಲ ವಂತಿಗೆ ಸಂಗ್ರಹಿಸುವ ಕೆಲಸದಲ್ಲಿ ತೊಡಗಿಕೊಂಡರು. ಬಾಬಾ ಸಾಹೇಬರಿಗೆ ಆಮಂತ್ರಣ ನೀಡಲು ಕಾಂಬಳೆಯವರ ತಂದೆ ಪಂಡರಿನಾಥಮಿಸ್ತ್ರಿ, ನಾನಾ ಮೆಂಬರ್ ಮತ್ತು ಕರಿದಾದು ಎಂಬುವರು ಹೋಗಿದ್ದರು. ನಂತರದಲ್ಲಿ ಸಭೆಯ ದಿನಾಂಕಕ್ಕೆ ಊರ ಹೊರಗಿನ ಬಯಲಲ್ಲಿ ಭವ್ಯ ಮಂಟಪ ಕಟ್ಟಿ ಹತ್ತಾರುಹಳ್ಳಿಗಳಿಗೆ ಆಮಂತ್ರಣ ನೀಡಿದರು. ಬಾಬಾ ಸಾಹೇಬರನ್ನು ಸ್ವಾಗತಿಸಲು ಜನಸಮುದಾಯ ಕಿಕ್ಕಿರಿದು ನಿಂತಿತ್ತು. ಬಾಬಾ ಸಾಹೇಬರ ಕಾರು ಮುಂದೆ ಬರಲೂ ಹಾದಿಯಿರಲಿಲ್ಲ, ಕೊನೆಗೆ ಬಾಬಾ ಸಾಹೇಬರು ಕಾರಿನಿಂದ ಕೆಳಗಿಳಿದರು. ಪ್ರಾಣದ ಹಂಗು ಇಲ್ಲದೆ ಬೇಬಿತಾಯಿ ಕಾಂಬಳೆ ಮತ್ತು ಅವರ ಸ್ನೇಹಿತೆಯರು ಅಂಥ ಜನಸಂದಣಿಯಲ್ಲೂ ಕಾರಿನ ಹತ್ತಿರಕ್ಕೆ ತಲುಪಿದರು. ಬಾಬಾ ಸಾಹೇಬರನ್ನು ಪ್ರತ್ಯಕ್ಷ ಕಂಗಳಿಂದ ನೋಡಿದ ಆನಂದವನ್ನು ಅವರು ಸ್ಮರಿಸುತ್ತಾರೆ.

"ಎತ್ತರವಾದ ಕಟ್ಟುಮಸ್ತಾದ ತರೂ ದೇಹ, ಬಿಳಿ ಬಣ್ಣ, ಅಗಲ ಹಣೆ, ಕಣ್ಣಿಗೆ ಕನ್ನಡಕ, ನೀಲಿ ಸೂಟು, ಅದೇ ಬಣ್ಣದ ಕೋಟು, ಕಾಲಿಗೆ ಕಪ್ಪು ಬೂಟು, ಆಜಾನು ಬಾಹು ದೇಹ ಜನಸಮುದಾಯದ ನಡುವೆ ನಿಂತಾಗ ಅವರೆಲ್ಲ ನೆಲಕ್ಕೆ ತಲೆ ಹಚ್ಚಿ ನಮಸ್ಕರಿಸಿದರು"[1] ಬಾಬಾ ಸಾಹೇಬರು ವೇದಿಕೆಯಲ್ಲಿ ವಿರಾಜಮಾನರಾದರು. ಬಾಬಾ ಸಾಹೇಬರು ಭಾಷಣ ಮಾಡಲು ನಿಂತಾಗಲಂತೂ ಅಲ್ಲಿದ್ದ ಜನರು ಅವರನ್ನು ಕಣ್ಣೊಳಗೆ ತುಂಬಿಕೊಂಡರು. ಅವರ ಅಮರವಾಣಿ ಎಲ್ಲರ ಅಂತಕರಣಕ್ಕೆ ನಾಟಿತು. ಆ ಕಾಲದಲ್ಲಿ ಆ ವಯಸ್ಸಿನಲ್ಲಿ ಅವರ ಭಾಷಣ ಜನಕ್ಕೆ ಅರ್ಥವಾಗುವಂತಿರಲಿಲ್ಲ. ಆದರೆ ಬಾಬಾ ಸಾಹೇಬರ ಅಮರವಾಣಿಯಿಂದ ಹೊರಬಿದ್ದ ಎರಡು ಶಬ್ದ ಮಾತ್ರ ಬೇಬಿ ಕಾಂಬಳೆಯವರ ಅಂತಃಕರಣ ಸೇರಿ ಅವರೇ ಹೇಳಿದಂತೆ ನಾನದನ್ನು ಮುತ್ತಿಗಿಂತಲೂ ಹೆಚ್ಚಾಗಿ ಜತನ

ಮಾಡಿದ್ದೇನೆ ಎಂದಿದ್ದಾರೆ. ಬಾಬಾ ಸಾಹೇಬರು ತಮ್ಮ ಭಾಷಣದಲ್ಲಿ "ನನ್ನ ದೀನ-ದಲಿತ ಭಗಿನಿಯರೆ, ನಮ್ಮ ಹಲವು ಪೀಳಿಗೆಯೆಲ್ಲ ಸುಟ್ಟು ಬೂದಿಯಾಗಿದೆ. ಆದರೆ ಮುಂದಿನ ಪೀಳಿಗೆಯವರು ಸಂಘರ್ಷ ಮಾಡಲು ಶಿಕ್ಷಣ ನೀಡಿ ಬುದ್ದಿವಂತರನ್ನಾಗಿ ಮಾಡಬೇಕಿದೆ. ಅಂಥ ಹಠ, ಛಲ ನನ್ನ ಭಗಿನಿಯರಲ್ಲಿದೆ. ಯಾವ ಮಾತೆಯು ತನ್ನ ರಕ್ತವನ್ನು ಹರಿಸುತ್ತಾಳೋ ಅವಳು ತನ್ನ ಶೀಲ, ಮಮತೆಯ ಸಹಾಯದಿಂದ ಮಕ್ಕಳ ಕಲ್ಯಾಣ ಮಾಡುತ್ತಾಳೆ. ಮುಗಿಲಿಗೆ ಹೊದಿಕೆ ಹಾಕುತ್ತಾಳೆ. ಈ ಜವಾಬ್ದಾರಿಯನ್ನು ನಾನು ತಾಯಂದಿರ ಮತ್ತು ಭಗಿನಿಯರ ಮೇಲೆ ಹೊರಿಸುತ್ತೇನೆ. ಅವರು ಈ ಹೊಣೆಯನ್ನು ತುಂಬಾ ಉತ್ಸಾಹದಿಂದ ಸ್ವೀಕರಿಸುತ್ತಾರೆಂಬ ನಂಬುಗೆ ನನಗಿದೆ."[2] ಎಂದರು. ಬಾಬಾ ಸಾಹೇಬರು ಮಹಿಳೆಯರ ಮೇಲೆ ಹೊರಿಸಿದ ಜವಾಬ್ದಾರಿಯನ್ನು ನನ್ನ ಬಾಲ್ಯ ವಯಸ್ಸಿನಲ್ಲಿ ನನ್ನ ಅಂತಃಕರಣದಲ್ಲಿ ಜತನವಾಗಿರಿಸಿದೆ. ಅದರ ಆಧಾರದಿಂದಲೇ ಬದುಕು ಸಾಗಿಸಿದೆ ಎಂದು ಬೇಬಿತಾಯಿ ಕಾಂಬಳೆಯವರು ಹೇಳುತ್ತಾರೆ.

ಬಾಬಾ ಸಾಹೇಬರು ಹಲವು ಕಡೆಗಳಲ್ಲಿ ಸಭೆಗಳನ್ನು ನಡೆಸಿದರು. ಅಲ್ಲಿ ಯಾರು ಅವರ ಸಭೆ ತಪ್ಪಿಸಲು ಸಿದ್ದರಿರಲಿಲ್ಲ. ಜನ ಹಿಂಡು ಹಿಂಡಾಗಿ ಹೋಗುತ್ತಿದ್ದರು. ಇವರ ಮಾತುಗಳಿಂದ ಪ್ರಭಾವಿತರಾಗಿ ಪ್ರತಿ ಊರಲ್ಲೂ ಜನರು ದೇಗುಲವನ್ನು ಪ್ರವೇಶಿಸುವ ಪ್ರಯತ್ನ ಮಾಡಿದರು. ಅವರು ಹೇಳಿದ ಮಾತುಗಳನ್ನು ಜನರೆಲ್ಲ ಪ್ರಾಣವನ್ನು ಪಣಕಿಟ್ಟು ಕಾರ್ಯರೂಪಕ್ಕೆ ತಂದರು. ಬಾಬಾ ಸಾಹೇಬರ ಮಾತು ವೇದವಾಕ್ಯವಾಯಿತು ಬಾಬಾ ಸಾಹೇಬರ ವಿದ್ಯೆ ತಪಶ್ಚರ್ಯೆಯು ಇಂದಿನ ಜೀವನದ ದಾರಿದೀಪವಾಗಿದೆ. "ಬೌದ್ಧಿಕ ತಪದಿಂದ ಗೌತಮ ಬುದ್ದನಾದಂತೆ, ವಿದ್ಯೆಯ ತಪದಿಂದ ಭೀಮರಾವನು ಬುದ್ದನಾದನು. ಬಾಬಾ ಸಾಹೇಬರ ಶಕ್ತಿಶಾಲಿ, ಬುದ್ಧಿಶಾಲಿ, ತತ್ವಶಾಲಿ ಉತ್ತೇಜನದ ಜೀವನ ಪ್ರವಾಹವು ಮುಂದೆ ಸಾಗಿತ್ತು. ಶೀಲ, ಸತ್ಯ, ನ್ಯಾಯ, ನೀತಿಯ ತತ್ವದ ಬಗೆಗಿನ ಬಾಬಾ ಸಾಹೇಬರ ಭಾಷಣವು ಈಗ ಜಗತ್ತಿಗೆ ಅರಿವಾಗತೊಡಗಿದೆ."[3]

ಬೇಬಿತಾಯಿಕಾಂಬಳೆಯವರು ತಮ್ಮ ಮೇಲೆ ಅಂಬೇಡ್ಕರ್‌ರ ಪ್ರಭಾವದಿಂದ ತಮ್ಮ ಜೀವನ ಹೇಗೆ ಬದಲಾಯಿತೆಂಬುದನ್ನು ಬಹಳ ಸೊಗಸಾಗಿ ಬಣ್ಣಿಸಿದ್ದಾರೆ. ಅಜ್ಞಾನಿಗಳಾದ ನಮಗೆ ಹೆಚ್ಚು ಗೊತ್ತಿರಲಿಲ್ಲ. ತಟ್ಟನೆ ರೂಢಿ ಸಂಪ್ರದಾಯ ಬಿಡುವ ಧೈರ್ಯವಿರಲಿಲ್ಲ. ನಮ್ಮ ಈ ದೇಶದಲ್ಲಿ ಪ್ರಗತಿಯಾಗಬಹುದೆಂದು ಕನಸು-ಮನಸಿನಲ್ಲೂ ಊಹಿಸಿರಲಿಲ್ಲ. ಕೇವಲ ಪಿಳಿಪಿಳಿ ಕಣ್ಣು ಬಿಡುವ ರಕ್ತಮಾಂಸದ ಅಸ್ತಿಪಂಜರವಾಗಿದ್ದೆವು. ಆದರೆ ಈ ನಿಸ್ತೇಜ ಅಸ್ತಿಪಂಜರದಲ್ಲಿ ಭೀಮಜ್ಯೋತಿ ಬೆಳಗಿತು. ಆ ಅಗ್ನಿತೇಜದಿಂದ ನಾವು ಮಾತು ನಡಿಗೆ ಕಲಿತೆವು ಈ ಅಜ್ಞಾನಿಗಳಾದ ಅಸ್ಥಿಪಂಜರಗಳಿಗೆ ಆತ್ಮಬೋಧೆಯಾಗಿ ಅಂಬೇಡ್ಕರ್‌ರ ಧಮನಿಗಳಲ್ಲಿ ರಕ್ತ ಹರಿಯಲಾರಂಭಿಸಿತು. ಭೀಮನ ಸೈನಿಕರಾಗಿ ಹೋರಾಟಕ್ಕೆ ಸಿದ್ಧರಾದೆವು. ಈ ಸಂಘರ್ಷದಿಂದ ಮೂರು ಭೀಮ ರತ್ನ ಹೊರತೆಗೆದೆವು. ಮೊದಲನೆಯದು ಮಾನವೀಯತೆ, ಎರಡನೆಯದು ಶಿಕ್ಷಣ, ಮೂರನೆಯದು ಕರು ತಾಯಿ ಬಳಿಗೆ ಹೋಗುವ ಬೌದ್ದಧರ್ಮ ಭೀಮನು ಬೌದ್ಧಧರ್ಮವನ್ನು ಪ್ರತಿಯೊಬ್ಬರ ಉಡಿಗೆ ಚೆಲ್ಲಿ ಮಾನವೀಯತೆ ಮೆ ರೆದರು. ಬಾಬಾ ಸಾಹೇಬರು ಉದಯಿಸದೇ ಇದ್ದಿದ್ದರೆ ನಾನು ಯಾವುದಾದರೂ ಜೋಪಡಿಯಲ್ಲಿ ಇರಬೇಕಿತ್ತು. ಹಗಲಿರುಳು ಅನ್ಯರ ಸೇವೆ ಮಾಡಬೇಕಾಗುತ್ತಿತ್ತು. ತಪ್ಪಿದರೆ ಚಾಬೂಕಿನ ಹೊಡೆತ ತಿನ್ನ ಬೇಕಿತ್ತು, ಭೀಮರಾವನು ಅದನ್ನೆಲ್ಲ ಸುಟ್ಟು ಹೊಳೆಯಲ್ಲಿ ತೇಲಿಬಿಟ್ಟಿದ್ದಾನೆ. ನಮಗೆ ಬಂಗಾರದ ದಿನಮಾನಗಳನ್ನು ತಂದುಕೊಟ್ಟಿದ್ದಾನೆ. ಇಂಥ ಬೆಳಗುವ

ಸೂರ್ಯನನ್ನು ನಮಸ್ಕರಿಸಿ, ಮಕ್ಕಳಿಗೆ ಅವರ ಪರಿಚಯ ಮಾಡಿಕೊಡಬೇಕು. ಈ ತ್ಯಾಗದಿಂದ ಉರಿಯುವ ಭೀಮ ಸೂರ್ಯನೇ ನಮ್ಮ ವಿಶ್ವ, ಇವನೇ ನಮ್ಮನ್ನು ರೂಪಿಸಿದವನು, ದಲಿತರಿಗಾಗಿ ಈ ತ್ಯಾಗರಾಜನು ತನ್ನ ಆಹುತಿ ನೀಡಿ ನಮ್ಮ ಬದುಕು ಅರಳುವಂತೆ ಮಾಡಿದ್ದಾನೆ. ಅವನ ಕಿಡಿಯಿಂದ ನಾವು ಚೈತನ್ಯರಾಗಿದ್ದೇವೆ. ಅವನು ಗಳಿಸಿದ ಸಂಪತ್ತನ್ನು ಉಪಯೋಗಿಸುತ್ತಿದ್ದೇವೆ ಎಂದು ಮಕ್ಕಳಿಗೆ ಹೇಳಿ ಬುದ್ಧ ತತ್ವವನ್ನೇ ಬೋಧಿಸಬೇಕು.

"ನನ್ನ ಬಳಿ ಏನಿದೆ ಭೀಮಾ ನಿನಗೆ ಕೊಡಲು?
ಅರ್ಪಿಸುತ್ತೇನೆ ದುಃಖದ ಹೂಗಳನ್ನು
ಕಂಬನಿಯಿಂದ ನಿನ್ನ ಪಾದ ತೊಳೆಯುತ್ತೇನೆ
ಆತ್ಮದ ಬೆಂಕಿಯಿಂದ ಜ್ಯೋತಿ ಬೆಳಗಿಸುತ್ತೇನೆ
ಜ್ಯೋತಿಯಲ್ಲಿ ಕಾಣುತ್ತಿದೆ ನನಗೆ ಬುದ್ಧ ಭೀಮರ ಮೂರ್ತಿ"[4]

ಎಂದು ಹಾಡಿ ಹೊಗಳುವುದಲ್ಲದೇ, ಭೀಮನ ಸಂವಿಧಾನವೇ ಸತ್ಯಶೀಲ, ನೀತಿಯನ್ನು ಆಧರಿಸಿದ್ದು. ಶೀಲ ಸಂವಿಧಾನದ ಕಂಬ, ಸತ್ಯ ಚಪ್ಪರ, ನೀತಿಯು ಬುನಾದಿ ಇದುವೇ ಮಾನವ ಜೀವನದ ಮನೆಯಾಗಿದೆ. ಈ ಮೂರು ರತ್ನಗಳ ಮನೆಯಲ್ಲಿ ಮಾನವರೆಲ್ಲ ಬದುಕುವುದನ್ನು ನೋಡಬೇಕೆಂಬ ಬಯಕೆ ಬಾಬಾ ಸಾಹೇಬರದ್ದಾಗಿತ್ತು ಎಂದು ತಮ್ಮ ಮನಸ್ಸಿನಾಳಾದ ಮಾತುಗಳನ್ನು, ಡಾ: ಅಂಬೇಡ್ಕರ್‌ರ ಬಗೆಗಿನ ತಮ್ಮ ನಿಲುವನ್ನು ತುಂಬು ಹೃದಯದಿಂದ ತಮ್ಮ 'ಬದುಕು ನಮ್ಮದು' ಎಂಬ ಕೃತಿಯಲ್ಲಿ ಬೇಬಿತಾಯಿ ಕಾಂಬಳೆಯವರು ತಿಳಿಸುತ್ತಾರೆ.

'ಉಚಲ್ಯಾ' ಎಂಬ ಆತ್ಮಕಥೆ ಶ್ರೀ ಲಕ್ಷ್ಮಣ ಗಾಯಕವಾಡರು ಮರಾಠಿಯಲ್ಲಿ ಬರೆದ ಆತ್ಮಕಥೆಯ ಕನ್ನಡ ಅನುವಾದ. ಇಲ್ಲಿನ ಭಾಷೆಗೆ ಶೃಂಗಾರದ ಸೋಗಿಲ್ಲ ಆದರೆ ನೇರ ಎದೆಗೆ ತಾಗುವ ನಿಷ್ಠುರ ಗುಣವಿದೆ. ನೂರಾರು ವರ್ಷಗಳಿಂದ ತುಳಿತಕ್ಕೊಳಗಾದ ಜನರ ನೋವಿನ ಸಿಟ್ಟಿನ ತಳಮಳದ ಅಸಹಾಯಕತೆಯ ನಿಟ್ಟುಸಿರಿದೆ. ಬದುಕಬೇಕು ಎಂಬ ತುಡಿತವಿದೆ. ನಮ್ಮ ಬಹುಮುಖಿ ಸಮಾಜಕ್ಕೆ 'ಆತ್ಮ' ಎಂಬುದೊಂದಿದ್ದರೆ ಆ ಆತ್ಮಕ್ಕೆ ಆಘಾತ ಉಂಟುಮಾಡಬಲ್ಲಂಥ ಶಕ್ತಿಯಿದೆ. ಬ್ರಿಟೀಷರಿಂದ 'ಕ್ರಿಮಿನಲ್ ಟ್ರೈಬ್' ಎಂಬ ಹಣೆಪಟ್ಟಿ ಅಂಟಿಸಿಕೊಂಡ ಬುಡಕಟ್ಟಿನಲ್ಲಿ ಹುಟ್ಟಿದವರು ಶ್ರೀ ಲಕ್ಷ್ಮಣ ಗಾಯಕವಾಡರು. ತಮ್ಮ ಜನರ ಬದುಕಿನ ಬಗ್ಗೆ ಇತರರೂ ಕಣ್ಣುತೆರೆಯುವಂತೆ ಮಾಡುವ ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ. ಒಬ್ಬ ಸಮಾಜದ ಕಾರ್ಯಕರ್ತರಾಗಿ ಇವರು ಹುಟ್ಟಿದ ಸಮಾಜವನ್ನು ಹೊರಜಗತ್ತಿಗೆ ಅಪರಿಚಿತವಾಗಿರುವ ಹಲವಾರು ಒಳನೋಟಗಳನ್ನು ಈ ಆತ್ಮಕಥನದಲ್ಲಿ ಚಿತ್ರಿಸಿದ್ದಾರೆ. ಸಾವಿರಾರು ವರ್ಷಗಳಿಂದ ಮನುಷ್ಯರಿಗಿಂತಲೂ ಕಡೆಯಾದ ಪ್ರಾಣಿ ಸಮಾನ ಜೀವನ ನಡೆಸುತ್ತಿದ್ದ ಇವರನ್ನು ಉಳಿದ ಸಮಾಜ 'ಗುನ್ಹೇಗಾರ'ನೆಂದು ಗುರುತಿಸಲಾರಂಭಿಸಿತು. ಶಿಕ್ಷಣ ಮತ್ತು ಆಸ್ತಿ ಇಲ್ಲದ ಈ ಸಮುದಾಯಕ್ಕೆ ಜೀವನದ ಎಲ್ಲಾ ಮಾರ್ಗಗಳು ಮುಚ್ಚಿದ್ದರಿಂದ ಈ ಜನಾಂಗ ಅನಿವಾರ್ಯವಾಗಿ ಕಳ್ಳತನಕ್ಕಿಳಿಯಬೇಕಾಯಿತು. ಕಳ್ಳತನವೊಂದೇ ಈ ಜನರ ಎದುರಿಗಿರುವ ಏಕೈಕ ಮಾರ್ಗ. ಇವರ ಮೇಲೆ ಬಲವಂತದಿಂದ ಹೇರಿದ ವ್ಯವಸಾಯದ ಉಪಯೋಗವನ್ನು ಮೇಲ್ವರ್ಗದ ಜನ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರು. ಹುಟ್ಟಿನಿಂದಲೇ 'ಗುನ್ಹೇಗಾರ' ರೆಂಬ ಹಣೆಪಟ್ಟಿ ಹಚ್ಚಿಕೊಂಡ ಏಕಮೇವ ಜಾತಿ ಇದು.

ಲಕ್ಷ್ಮಣ ಗಾಯಕವಾಡರು ಬಾಲ್ಯದಿಂದಲೇ ತಮ್ಮ ಸುತ್ತಲಿನ ಈ ಉಚಲ್ಯಾ ಜನರ ದಾರಿದ್ರ್ಯ, ಸಂಕಟ, ವೇದನೆಗಳನ್ನು ನೋಡುತ್ತ ಬಂದವರು. ಕ್ರಮೇಣ ಇವರು ಕಾರ್ಯಕರ್ತರಾಗಿ ಅವರ ವ್ಯಥೆಯನ್ನು ತಮ್ಮ ಚರ್ಚೆ, ಭಾಷಣಗಳ ಮುಖಾಂತರ ವ್ಯಕ್ತಪಡಿಸುತ್ತಿದ್ದರು. ಮನುಷ್ಯರಂತೆ ಬದುಕಲು ನಮಗೂ ಹಕ್ಕಿದೆ, ಸ್ವಂತ ಶಕ್ತಿಯ ಮೇಲೆ ಬದುಕಬೇಕು, ಶಿಕ್ಷಣ ಪಡೆದು ಅನ್ಯಾಯದ ವಿರುದ್ದ ಸಂಘಟಿತರಾಗಬೇಕೆಂದು ಲಕ್ಷ್ಮಣ ಗಾಯಕವಾಡರು ತಮ್ಮ ಜನರಿಗೆ ತಿಳಿಹೇಳುತ್ತಾ ಸಮಶೀಯರಿಗೆ, ಬುದ್ದಿಜೀವಿಗಳಿಗೆ ನಮ್ಮ ಸಮಾಜದ ನೋವಿನ ಕಥೆ ಗೊತ್ತಿಲ್ಲವೆಂದು ತಿಳಿಸುತ್ತಾರೆ. ಒಂದೆಡೆ ಹಸಿವು, ಆಶ್ರಯಕ್ಕಾಗಿ ನ್ಯಾಯಸಮ್ಮತ ಮಾರ್ಗಗಳೆಲ್ಲ ಮುಚ್ಚಾಲ್ಪಟ್ಟಾಗ ಕಳ್ಳತನ ಮಾಡುವ ಅನಿವಾರ್ಯ ಇವರದಾಗಿತ್ತು. ಸುಶಿಕ್ಷಿತ, ಪ್ರತಿಷ್ಠಿತ ಸಮಾಜವೂ ಇದೆ. ಲಂಚ, ಭ್ರಷ್ಟಾಚಾರಗಳ ಮೂಲಕ ಲಕ್ಷಗಟ್ಟಲೆ ಗಳಿಸಿದರೂ ಇವರು ಗುನ್ಹೇದಾರರೆಂದು ಪರಿಗಣಿಸಲ್ಪಡುವುದಿಲ್ಲ. ಆದರೆ ಹತ್ತಿಪ್ಪತ್ತು ರೂಪಾಯಿ ಕಳ್ಳತನ ಮಾಡುವ ಜನ ಗುನ್ಹೇಗಾರರೆನಿಸುತ್ತಾರೆ.

ಮೂಲಭೂತ ಅವಶ್ಯಕತೆಗಳೆಲ್ಲ ತೀರಿದ ಬಳಿಕವೂ ಐಷರಾಮ ಜೀವನಕ್ಕಾಗಿ, ಭೋಗಜೀವನಕ್ಕಾಗಿ ನ್ಯಾಯಬಾಹಿರವಾದ ರೀತಿಯಲ್ಲಿ ಹಣ ದೋಚುವ ಲಂಚ ಸ್ವೀಕರಿಸುವ ಜನ ಇಲ್ಲಿದ್ದಾರೆ. ಇಂತಹ ಸಮಾಜ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಲೇಖಕರ ಮನಸ್ಸು ಕಸಿವಿಸಿಗೊಳ್ಳುತ್ತಿತ್ತು. ನಮ್ಮ ಸಮಾಜಕ್ಕೆ ಅನ್ಯಾಯವಾಗುತ್ತಿದೆ, ಇವರಿಂದ ಬದುಕುವ ಎಲ್ಲಾ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ ಎನಿಸುತ್ತಿತ್ತು. ಕಾರ್ಯಕರ್ತನೆಂದು ಓಡಾಡುವಾಗ ವಿವಿಧ ಸ್ತರಗಳ ಜನರ ಸಂಪರ್ಕದಿಂದ ನಮ್ಮ ನೀತಿ ಮೌಲ್ಯದಲ್ಲಿ ಪ್ರಾಮಾಣಿಕ ತನದಲ್ಲಿ ಪ್ರಚಂಡ ವಿರೋದಾಭಾಸವಿದ್ದು ಪ್ರತಿಯೊಂದು ಜಾತಿಯ-ಜಮಾತಿಯ ಪ್ರಾಮಾಣಿಕತನದ ಚಾರಿತ್ರದ ಬಗ್ಗೆ ಅವರದ್ದೇ ಆದ ಚೌಕಟ್ಟಿದೆ. ಇಂಥ ವಿವಿಧ ಚೌಕಟ್ಟಿನ ಗರ್ಭದೊಳಗೆ ಇಡೀ ಸಮಾಜ ಥೋಂಗಿಯಂತೆ ಜೀವಿಸುತ್ತಿದೆ. ಇದರಲ್ಲಿ ದಟ್ಟದರಿದ್ರರೂ, ಉಪೇಕ್ಷಿಸಲ್ಪಟ್ಟವರೂ, ಗುನ್ಹೇದಾರರೂ ತುಳಿಯಲ್ಪಟ್ಟಿದ್ದಾರೆ. ಪ್ರಾಮಾಣಿಕವಾಗಿ ಬದುಕುವ ಮನಸ್ಸಿದ್ದರೂ ಸಮಾಜ ಅದಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಇದೆಲ್ಲ ಬದಲಾಗಬೇಕೆಂಬ ಇಚ್ಚೆ ಲೇಖಕರದು.

ಉಪೇಕ್ಷಿತ ಸಮಾಜದ ತರುಣನೊಬ್ಬ ಕೆಲಸಕ್ಕಾಗಿ ಅಲೆದು ನೂಲಿನ ಗಿರಣಿಯಲ್ಲಿ ಕೆಲಸಮಾಡುತ್ತಾ ಅರೆ ಶಿಕ್ಷಣ ಪಡೆದು ಬದುಕು ರೂಪಿಸಿಕೊಳ್ಳಲು ಪಟ್ಟಶ್ರಮ, ಪ್ರಭಾವ ಬೀರಿದ ವ್ಯಕ್ತಿಗಳು, ಹೆಗಲಿಗೆ ಹೆಗಲಾದ ಪತ್ನಿಯ ಸಹಕಾರ, ಆಕೆಯ ತ್ಯಾಗ, ಮಹಾರಾಷ್ಟ್ರದ ಉಪೇಕ್ಷಿತ ಜನಾಂಗದ ಸ್ಥಿತಿಗತಿಗಳನ್ನು ಕವಿ ತನ್ನ ಆತ್ಮಕಥನದ ಮೂಲಕ ಬಿಂಬಿಸಲು ಹೊರಟಿದ್ದಾರೆ.

ಮರಾಠಿ ಸಾಹಿತ್ಯ ಪ್ರಕಾರಗಳಲ್ಲಿ ಆತ್ಮಕಥೆಗಳಿಗೆ ಉಳಿದ ಪ್ರಕಾರಗಳಿಗಿಂತ ಉನ್ನತಸ್ಥಾನವಿದೆ ಇಂಥ ವೈವಿಧ್ಯಮಯ ಜನಪ್ರಿಯವಾದ ಆತ್ಮಕಥೆಗಳಿಂದ ಇಂದು ಮರಾಠಿ ಸಾಹಿತ್ಯ ಸಮೃದ್ದವಾಗಿದೆ. ಈ ಆತ್ಮಕಥೆಗೆ ನೂರಾಐವತ್ತು ವರ್ಷಗಳ ಸುದೀರ್ಘ ಇತಿಹಾಸವಿದೆ. ಮರಾಠಿ ಆತ್ಮಕಥೆಗಳ ಒಂದು ವೈಶಿಷ್ಟವೆಂದರೆ ವ್ಯವಸಾಯದಲ್ಲಿ ನಿರತರಾದ ಬೇರೆ ಜಾತಿ-ಜನಾಂಗಕ್ಕೆ ಸೇರಿದ ವ್ಯಕ್ತಿಗಳೂ ಸಹ ಇತ್ತೀಚೆಗೆ ಆತ್ಮಕಥೆ ಬರೆಯುವಲ್ಲಿ ತೊಡಗಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಎಪ್ಪತ್ತರ ದಶಕದಲ್ಲಿ ದಲಿತ ಪ್ಯಾಂಥರಿನ ಪ್ರಭಾವ ಉಳಿದ ಸಾಹಿತ್ಯ ಪ್ರಕಾರಗಳ ಮೇಲೆ ಆದಂತೆ ಆತ್ಮಕಥೆಯ ಮೇಲೂ ಆಯಿತು. ಇದಕೊಂದು ಕ್ರಾಂತಿಕಾರಿ ತಿರುವು ಸಿಕ್ಕಿತು

'ಉಚಲ್ಯಾ' ಕೃತಿಗೆ 1988 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದ್ದು, ಕಳ್ಳತನವನ್ನೇ ಮುಖ್ಯ ಕಸುಬಾಗಿ ಹೊಂದಿದ್ದ 'ಜಂಗಮ' ಜಾತಿಯ ಅಲೆಮಾರಿ ಜನಾಂಗಕ್ಕೆ ಸೇರಿದ ವ್ಯಕ್ತಿಯೊಬ್ಬನ ಆತ್ಮಕತೆ ಇದಾಗಿದೆ. ಲಕ್ಷ್ಮಣ ಮಾನೆಯ 'ಉಪರಾ', ಮಲ್ಲಿಕಾ ಶೇಖರರ 'ಮಲಾ ಉದ್ವಸ್ತವಯಾಚೇ ಆಹೇ', ಶರಣಕುಮಾರ ಲಿಂಬಾಳೆಯ 'ಅಕ್ಕರ ಮಾಶಿ', ಸೋನ ಕಾಂಬಳೆಯ 'ಆಠವಣಿಚೆ ಪಕ್ಷಿ', ದಯಾಪವಾರರ 'ಬಲುತ' ಇವು ಇತ್ತೀಚಿನ ಅತ್ಯಂತ ಮಹತ್ವದ ಕೃತಿಗಳು.

"ತಮ್ಮ ಉಚಲ್ಯಾ ಆತ್ಮಕಥೆಯಲ್ಲಿ ಲೇಖಕರು ತಾವು ಟೆರಿಕಾಟ್ ಬಟ್ಟೆ ಧರಿಸಿ ಹೋಗುತ್ತಿದ್ದುದರಿಂದ ಜನ ಆತನನ್ನು ಮೇಲ್ವರ್ಗದವರೆಂದು ಭಾವಿಸುತ್ತಿದ್ದರು"[5] ಎಂದು ಹೇಳಿಕೊಂಡಿದ್ದಾರೆ. ಅಂದರೆ ಟೆರಿಕಾಟ್ ಬಟ್ಟೆಯ ಹೊಲಿಗೆಗೆ ಹೆಚ್ಚು ಖರ್ಚಾಗುತ್ತದೆಂದು ಟೇಲರ್ ಹೇಳಿದ್ದರಿಂದ ಹೆಚ್ಚಿನ ಖರ್ಚಿನ ಬಟ್ಟೆಯನ್ನೂ ಮೇಲ್ವರ್ಗದವರು ಧರಿಸುತ್ತಿದ್ದುದರಿಂದ ಕಳ್ಳತನ ಮಾಡಿ ತಂದಿದ್ದು ಟೆರಿಕಾಟ್ ಬಟ್ಟೆಯನ್ನೇ ಅವರು ಧರಿಸುತ್ತಿದ್ದರು. ಸೋಪಾನ ಮತ್ತು ಅವನ ಹೆಂಡತಿ ಎಲ್ಲವು ವಿವಿಧ ರೀತಿಯ ಕಳ್ಳತನ, ಕೊರಳಹಾರ, ಕಿವಿಯೋಲೆ ಹೀಗೆ ಕಳ್ಳತನ ಮಾಡುತ್ತಿದ್ದರು. ಗಂಡ–ಹೆಂಡತಿ ಇಬ್ಬರು ಕಳ್ಳತನದ ಬಳಿಕ ಹೆಂಡಕುಡಿದು ಪಾಲಿಗಾಗಿ ಜಗಳವಾಡುತ್ತಿದ್ದರು "ನಾನು ಇಷ್ಟೆಲ್ಲ ಕಳ್ಳತನ ಮಾಡಿ ಬಂಗಾರ ತಂದುಕೊಟ್ಟೆ ಆದ್ರೆ ನೀನ್ ನನಗೇನು ಕೊಟ್ಟಿ?"[6] ಎಂದು ಗಂಡನನ್ನು ಹೆಂಡತಿ ಪ್ರಶ್ನಿಸುತ್ತಿದ್ದಳು. ಆಗ ಸೋಪಾನ ಹೇಳುತ್ತಿದ್ದ "ನೋಡ ಎಲ್ಲಿ, ನೀ ನನ್ನ ರಂಡಿ. ಹೆಂಡ್ತಿ ಹಾಂಗ ನಿನ್ನ ಸಂಗಡ ತಿರುಗಾಡ್ತೇನಿ. ಕಳ್ಳತನದಾಗ ಪಾಲು ಕೊಡ್ತೇನಿ. ಆದರೂ ಹಿಂಗಂತಿಯಲ್ಲ?" ಎಂದು ಸೋಪಾನ ಆಕೆಯನ್ನು ಓಡಿಸಿಕೊಂಡು ಹೋಗುತ್ತಿದ್ದೆ. ಹೀಗೆ ಕೆಲವು ಪ್ರಕರಣಗಳನ್ನು ತುಂಬಾ ಸೊಗಸಾಗಿ ಹೇಳಿದ್ದಾರೆ.

ಒಮ್ಮೆ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಲೇಖಕರು ಭಾಗವಹಿಸಿದ್ದರು. ಲೇಖಕರು ಮತ್ತು ಅವರ ಕಾರ್ಯಕರ್ತರೆಲ್ಲ ಸೇರಿ ಯಾರಿಗೆ ಬೆಂಬಲ ನೀಡಬೇಕೆಂದು ಯೋಚಿಸಿ ಕೊನೆಗೆ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಿದ್ದರು. ಏಕೆಂದರೆ ಈ ದೇಶದಲ್ಲಿ ಚುನಾವಣೆಗೆ ಸ್ಪರ್ಧಿಸಲು ಹಣ, ಪ್ರತಿಷ್ಠೆ, ಕುಲೀನ ಮನೆತನ, ಗೂಂಡಾಗಿರಿ ಇವೆಲ್ಲ ಅತೀ ಅವಶ್ಯಕ ಇದೆಲ್ಲ ನಮ್ಮಂಥ ಪಾಮರರ ಕೆಲಸವಲ್ಲ ಎಂದು ಅವರಿಗೆ ಅನಿಸಿತ್ತು. ಆ ಕಾಂಗ್ರೆಸ್ ಅಭ್ಯರ್ಥಿಗೆ ಲೇಖಕರು ಹೀಗೆ ಹೇಳಿದರು "ಸಾಹೇಬರ, ನನ್ನ ಸಂಪೂರ್ಣ ಬೆಂಬಲ ನಿಮಗೇ, ರಿಕ್ಷಾ, ಸ್ವೀಕರದವರ ಬಾಡಿಗೆಗಾಗಿ ಏಳೆಂಟು ಸಾವಿರ ಕೊಡ್ರಿ, ಮತ್ತೆ ನೀವು ಆರಿಸಿ ಬಂದ ಬಲಿಕ ಅಲೆಮಾರಿಗಳ ವಿಮುಕ್ತಿಗಾಗಿ ಸಾಹಾಯ ಮಾಡ್ರಿ ಸಾಕು!"[7] ನನ್ನ ಇಚ್ಚೆ ಇಷ್ಟೆ ಎಂದು ಇದನ್ನ ಕೇಳಿ ಆ ಕಾಂಗ್ರೆಸ್ ಅಭ್ಯರ್ಥಿ ಅವಾಕ್ಕಾದರು. ನಂತರ ಇವರ ಮಾತನ್ನು ಒಪ್ಪಿದರು.

ಹೀಗೆ ಲೇಖಕರು ತಮ್ಮ ಜನರ ಮೂಲ ಕಸುಬಾದ ಕಳ್ಳತನ, ತರಬೇತಿ, ಅವರ ಹಸಿವೂ, ದಾರಿದ್ರ್ಯ, ನಿರುದ್ಯೋಗ, ಕ್ರಿಮಿನಲ್ ಟ್ರೈಬ್ ಎಂಬ ಹಣೆಪಟ್ಟಿ ಅಂಟಿಸಿಕೊಂಡ ತಪ್ಪಿಗಾಗಿ ನಡೆಸುವ ನಿರಂತರ ಅಲೆಮಾರಿ ಜೀವನ, ತಮ್ಮ ಜನಾಂಗದ ಸಾಂಸ್ಕೃತಿಕ ಬದುಕು , ಅವರ ಮೇಲಾದ ಅನ್ಯಾಯ , ಕಳ್ಳತನದ ಹಲವು ಮಾದರಿಗಳು , ಆರ್ಥಿಕ ಮುಗ್ಗಟ್ಟು , ಪೋಲಿಸ್‌ದಾಳಿ , ದೌರ್ಜನ್ಯ , ಶಿಕ್ಷೆ ಇತ್ಯಾದಿಗಳನ್ನು ದಾಖಲೆ ಸಹಿತ ವಿವರಿಸುತ್ತಾರೆ. ಜೊತೆಗೆ ತನ್ನ ಜನಾಂಗದ ಜನರಿಗಾಗಿ ನಡೆಸಿದ ಹೋರಾಟ ಸಂಘಟನೆ ಚಳುವಳಿಯ ವಿವರಗಳನ್ನು ತಿಳಿಸಿದ್ದಾರೆ. ಏನೇ ಆಗಲಿ ವೈಚಾರಿಕ ಚಳುವಳಿಯ ಮುಖಾಂತರ ದಲಿತರ, ಪೀಡಿತರ, ಶೋಷಿತರ

ಪರಿವರ್ತನೆ ಮಾಡಲು ಅವರನ್ನು ಇಂತಹ ವಿಷವರ್ತುಲದಿಂದ ಪಾರು ಮಾಡಲು ನಿರಂತರ ಪ್ರಯತ್ನಶೀಲವಾಗಬೇಕೆಂಬ ದೃಢಸಂಕಲ್ಪ ಲೇಖಕರದ್ದಾಗಿದೆ.

ದಯಾಪವಾರರ 'ಬಲುತ' ಎಂಬ ಆತ್ಮಕಥನವನ್ನು ಕನ್ನಡಕ್ಕೆ ಪ್ರೊ॥ ಚಂದ್ರಕಾಂತ ಪೋಕಳೆ ಎಂಬುವರು ಅನುವಾದಿಸಿದ್ದಾರೆ. ಇದರಲ್ಲಿ ಇಪ್ಪತ್ತು ವರ್ಷಗಳ ಘಟನೆಯನ್ನು ಸಮಾವೇಶಗೊಳಿಸಲಾಗಿದೆ. ವಿಷಯ ಸೂತ್ರವನ್ನು ಸ್ಪಷ್ಟಪಡಿಸಲು ಇತ್ತೀಚಿನ ಕೆಲವು ಘಟನೆಯನ್ನು ಬಳಸಿಕೊಳ್ಳಲಾಗಿದೆ. ಡಿಸೆಮಬರ್ 24, 1978 ರಲ್ಲಿ 'ಬಲುತ' ಪ್ರಕಟವಾಯಿತು. ಕಳೆದ ಕೆಲವು ವರ್ಷಗಳಿಂದ ಜನಪ್ರಿಯವಾಗಿ ಚರ್ಚೆಗೂ ಒಳಗಾಯಿತು. ಇದರ 'ಸಿನೇಮಾ' ಕೂಡ ಸಿದ್ದವಾಯಿತು. ಹಿಂದಿಯಲ್ಲೂ 'ಅಛೂತ' ಎಂಬ ಹೆಸರಿನಲ್ಲಿ ಪ್ರಕಟಗೊಂಡಿದೆ. ಫೋರ್ಡ ಫೌಂಡೇಶನ್‌ದಿಂದ ಶಿಷ್ಯವೃತ್ತಿಯೂ ಲಭಿಸಿತು. ಎಫ್.ಎಫ್.ಸಿ ಯಿಂದ ಐದು ಸಾವಿರ ಬಹುಮಾನವು ದೊರಕಿದೆ"[8] ಎಂದು ವಿಮರ್ಶಕರು ಇದನ್ನು ಹೊಗಳಿದ್ದಾರೆ.

ನಮ್ಮ ಸಂಪೂರ್ಣ ಸಮಾಜವು ಒಂದೇ ಸಮಾನ ಪಾತಳಿಯಲ್ಲಿಲ್ಲ. ಸಮಾಜದಲ್ಲಿಯ ಭಿನ್ನ ಭಿನ್ನ ವಿಭಾಗ, ಜಾತಿವ್ಯವಸ್ಥೆ, ಸಂಸ್ಕಾರದಿಂದಾಗಿ ಮಾನಸಿಕ ವ್ಯವಸ್ಥೆ, ಇದೆಲ್ಲದರಿಂದ ಭಗ್ನಗೊಂಡ ಜೀವನ, ವಿವೇಕ, ನೈತಿಕತೆಯ ಹುಸಿ, ಒತ್ತಡ ಇದರಿಂದಾಗಿ ಸಾಹಿತ್ಯ ಕೃತಿಯನ್ನು ನಿರ್ಮಲವಾಗಿ ಆಸ್ವಾದಿಸುವ ಪ್ರಕ್ರಿಯೆಯು ಶುದ್ದವಾಗಿ ಉಳಿದಿಲ್ಲ, ಹೀಗಾಗಿ ಸಮಾಜದ ಬೇರೆ–ಬೇರೆ ಗುಂಪುಗಳು ಈ ಕೃತಿಯನ್ನು ವಿವಿಧ ದೃಷ್ಟಿಯಿಂದ ನೋಡುತ್ತವೆ, ನಮ್ಮ ದೇಶದ ಪ್ರತಿಯೊಂದು ಜಾತಿಯು ತಮ್ಮ ಅಹಂಕಾರವನ್ನು ಕಾಯ್ದುಕೊಳ್ಳುತ್ತದೆ. ಈ 'ಬಲುತ' ಕಥನವನ್ನು ಕೆಲವರು ದ್ವೇಷಿಸಿದರೆ ಮತ್ತೆ ಹಲವು ಸುಶಿಕ್ಷಿತ ದಲಿತ ಓದುಗರು –"ಪುಸ್ತಕ ಓದಿ ಬಿಕ್ಕಿಬಿಕ್ಕಿ ಅತ್ತೆ..... ಇದು ದಲಿತರ ಚಳುವಳಿಯ ಐತಿಹಾಸಿಕ ದಸ್ತಾವೇಜು. ನೀವು ನಮ್ಮದೇ ದುಃಖವನ್ನು ಅಗಸೆ ಬಾಗಿಲಿಗೆ ತೂಗು ಹಾಕಿದಿರಿ"[9] ಎಂಬ ಒಳ್ಳೆಯ ಪ್ರತಿಕ್ರಿಯೆಯನ್ನು ನೀಡುತ್ತಾರೆ.

ಸುಶಿಕ್ಷಿತ ದಲಿತ ಒದುಗರು ಹೆಚ್ಚು ಕಸಿವಿಸಿಗೊಳ್ಳಲು 2 ಕಾರಣಗಳಿವೆ. ಒಂದು–ಅವರು ಸ್ವತಃ ಅನುಭವಿಸಿದ ಭೂತಕಾಲ ಅದು ತೀರನಾಚಿಕೆಯಿಂದ ಕೂಡಿತ್ತು. ಅದನ್ನು ಓದುವಾಗ ಅವರು ಚಡಪಡಿಸುತ್ತಾರೆ. ಎರಡನೆಯದು–ಡಾ॥ ಅಂಬೇಡ್ಕರರ ನಂತರ ಈ ಚಳುವಳಿ ಏಕೆ ಕ್ಷೀಣಗೊಂಡಿತು, ಅದರ ಕ್ರಾಂತಿಕಾರಕ ಬೆನ್ನೆಲುಬು ಇಲ್ಲವಾಯಿತು ಎಂಬ ವಾಸ್ತವವನ್ನು ಅವರು ಸ್ವೀಕರಿಸುವ ಸ್ಥಿತಿಯಲ್ಲಿ ಇಲ್ಲದೇ ಇರುವುದು, ಅಂಬೇಡ್ಕರ್ ಚಳುವಳಿಯ ಸೂಕ್ಷ್ಮವಾದವನ್ನು ಲೇಖಕರು ಇಲ್ಲಿ ಬಿಡಿಸಿ ತೋರಿಸಿದ್ದಾರೆ. ಹೊಸದಾಗಿ ಮಧ್ಯಮ ವರ್ಗಕ್ಕೆ ಪ್ರವೇಶಿಸುವ ದಲಿತರು ತ್ರಿಶಂಕು ಸ್ಥಿತಿ ಅನುಭವಿಸುತ್ತಿದ್ದಾರೆ. ಅಧಿಕಾರಕ್ಕಾಗಿ ಪುಡಾರಿಗಳು ಹಿಡಿಯಷ್ಟು ಮತ್ತು ದಲಿತ ಚಳುವಳಿಯನ್ನು ಏಣಿಯಂತೆ ಬಳಸಿಕೊಂಡರು. ಇದರಿಂದ ಚಳುವಳಿ ಹೇಗೆ ದುರ್ಬಲವಾಯಿತೆಂಬುದನ್ನು ಇಲ್ಲಿ ತೋರಿಸಲಾಗಿದೆ. 'ಬಲುತ' ದ ಆರಂಭಕ್ಕೆ ಜಾಕ್ ಲಂಡನ್‌ನ ವಾಕ್ಯವಿದೆ 'ಈ ಕಲ್ಲು ಇಮಾರತಿಯ ನಿರ್ಮಾಣದಿಂದ ನಿಷ್ಪ್ರಯೋಜಕ ಗೊಳಿಸಲಾಗಿದೆ.'[10] ಈ ವಾಕ್ಯದ ಅರ್ಥವು ಬಹಳ ಜನರಿಗಾಗಲಿಲ್ಲ. ಊರ ಚಾಕರಿಯು ಸಂಪೂರ್ಣ ದಲಿತ ಸಮಾಜವನ್ನು ಕೊಳೆಯುವಂತೆ ಮಾಡಿತು.

ಓದುಗರು ಮಾತ್ರ ವಿಮರ್ಶಕರು 'ಬಲುತ' ವನ್ನು ನಿರೀಕ್ಷೆಗಿಂತ ಹೆಚ್ಚು ಸ್ವಾಗತಿಸಿದ್ದಾರೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. "ಗೊತ್ತಿರುವ ಶಬ್ದಗಳ ಅರ್ಥವನ್ನು ಮತ್ತೇಕೆ ವಿವರಿಸುತ್ತಾರೆ? ಇದರರ್ಥ ಲೇಖಕರು

ಮೇಲ್ವರ್ಗದ ಸುಶಿಕ್ಷಿತನಾಗಿಯೇ ಬರೆಯುತ್ತಾನೆ. ಕಲಾಕೃತಿಯ ನಿರ್ಲಿಪ್ತಭಾವ ಎಲ್ಲಾ ಕಡೆ ಗೋಚರಿಸುವುದಿಲ್ಲ. ಹಿಗಾಗಿ ರಚನಾಶಿಲ್ಪಕ್ಕೆ ಬಾದೆ ಬರುತ್ತದೆ"[11] ಎಂದೊಬ್ಬ ವಿಮರ್ಶಕರು ಹೇಳುತ್ತಾರೆ. ಆಕೃತಿಬಂಧದ ವಿಷಯ ಎಲ್ಲಾರಿಗೂ ಒಪ್ಪಿಗೆಯಾಗುವಂತಹ ಸಂಗತಿ ಕಲಾಶಾಸ್ತ್ರದಲ್ಲಿ ಆಶ್ವಾಸನೆಯ ಪ್ರಕ್ರಿಯೆಯನ್ನು ಹೇಳಲಾಗಿದೆ. ಲೇಖಕರ ಪ್ರಕಾರ ಯಾವ ಶಬ್ದಗಳು ನಿಘಂಟುವಿನಲ್ಲಿ ಇರುವುದಿಲ್ಲವೋ, ಸಾಹಿತ್ಯದಲ್ಲಿ ಬಂದಿರುವುದಿಲ್ಲವೋ ಅಂಥ ಹೊಸ ಶಬ್ದಗಳ ಅರ್ಥ ವಿವರಿಸುವುದು ಅದರ ಸಾಂಸ್ಕೃತಿಕ ಛಾಯೆಯನ್ನು ವಿವರಿಸುವುದು ಅಗತ್ಯ ಎಂದೆನಿಸುತ್ತದೆ.

ದಲಿತರು ವಿದ್ಯಾವಂತರಾಗಿ ನೆಲೆ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಒಂದೆಡೆಯಾದರೆ, ಅದನ್ನು ಸಹಿಸದೆ ಅವರವರಲ್ಲಿ ಒಡಕು ಮೂಡಿಸಿ ಕೀಳರಿಮೆ ಸೃಷ್ಟಿಸುವ ಹುನ್ನಾರಗಳು ಮತ್ತೊಂದೆಡೆ. ಈ ಮಧ್ಯೆ ಯಾವುದೇ ದಲಿತ ಆತ್ಮಕಥೆ ಓದಿದಾಗ ಅಲ್ಲಿ ಸವರ್ಣೀಯರ ಬಾವಿಯಿಂದ ನೀರನ್ನೆತ್ತಿ ಕುಡಿಯಲು ಬಿಡದಿರುವ ದಾರುಣ ಪ್ರಸಂಗವೊಂದು ದಾಖಲಾಗಿರುತ್ತದೆ. ಅಸ್ಪೃಶ್ಯತೆಯ ನೋವಿನೊಂದಿಗೆ ಬಡತನದಲ್ಲಿ ನರಳಿ ಊರ ಚಾಕರಿ ಮಾಡುತ್ತ ದಿನಗಳೆಯುವುದು ಎಷ್ಟೊಂದು ಹಿಂಸೆ, ದಲಿತ ಸಮಾಜದ ಅವಸ್ಥೆಯನ್ನು ದಗಡು ಮಾರುತಿ ಪವಾರವಾಗಿ ಗುರುತಿಸುತ್ತಲೇ ಬಾಲ್ಯ ಕಳೆದು ಶಾಲೆಗೆ ಹೋಗುವ ಸೌಭಾಗ್ಯ ದೊರೆತು ವಿದ್ಯಾವಂತರಾಗಿ 'ಬಲುತ' ಬರೆಯುವ ದಯಾಪವಾರರಾಗಿ ರೂಪುಗೊಂಡದ್ದು ಈ ಕೃತಿಯ ಹೂರಣ. ಇಲ್ಲಿ ಅಪಾರ ನೋವು ಸಂಕಟಗಳಿವೆ. ಇದು ಇವರ ಬಾಲ್ಯದಿಂದಲೇ ಪ್ರಾರಂಭಗೊಂಡ ಕಥನವಾದರೂ ಮುಂದೆ ವಿಸ್ತರಿಸಿಕೊಳ್ಳತ್ತದೆ. ಸಮಾಜದಲ್ಲಿ ವ್ಯವಹರಿಸಬೇಕಾದ ಎಲ್ಲಾ ತಾಣಗಳಿಗೂ ಹಬ್ಬಿಕೊಂಡಿದೆ. ಪುಸ್ತಕದಲ್ಲಿ ಬಂದ ಲೈಂಗಿಕ ಅಥವಾ ಶೃಂಗಾರಿಕ ಸಂದರ್ಭ ಹಲವರಿಗೆ ಅಸಮಾಧಾನ ಉಂಟುಮಾಡಿತು. ಜ್ಞಾನೇಶ್ವರನಂತೆ ರಸವತ್ತಾಗಿ ಬರೆಯಿರಿ, 'ಬಲುತ' ಚಿಕ್ಕಮಕ್ಕಳ ಕೈಗೆ ಕೊಡುವುದು ಹೇಗೆ. ಅವರ ಮೇಲೆ ಎಂಥ ಪರಿಣಾಮ ಬೀರಬಹುದು ಎಂಬ ಬಾಲಿಶ ಪ್ರಶ್ನೆಯನ್ನು ಹಾಕಲಾಯಿತು. ಬಿ.ಎ ಕಲಿಯುತ್ತಿರುವ ಮೇಲ್ವರ್ಗದ ಹುಡುಗಿ ಪತ್ರದಲ್ಲಿ ಹೀಗೆ ಬರೆಯುತ್ತಾಳೆ "ತುಂಬಾ ಚಿಂತನೆಗೆ ಹಚ್ಚುವ ಪುಸ್ತಕ. ಇದರಿಂದ ನನ್ನ ಸ್ವಭಾವ, ಯೋಚನೆ ಬದಲಾಗಬಹುದು. ನನ್ನದು ಸಂಸ್ಕಾರ ರೂಪುಗೊಳ್ಳುವ ವಯಸ್ಸು. ಸಾಕಷ್ಟು ಅನುಭವ ಪಡೆಯಲಿಕ್ಕಿದೆ. ಸರಿಯಾದ ಕಾಲಕ್ಕೆ ಈ ಪುಸ್ತಕ ಕೈಗೆ ಸಿಕ್ಕಿತು. ಸ್ವಂತ ಬದಲಾಗಲು ಖಂಡಿತ ಪ್ರಯತ್ನಿಸಯತ್ತೇನೆ"[12] ಈ ಪತ್ರ ಎಲ್ಲವನ್ನು ಹೇಳಿಬಿಡುತ್ತದೆ.

'ಬಲುತ' ದಲ್ಲಿ ನಾಯಕ ಥಿಯರಿಯಿಲ್ಲ. ಮಹಾಭಾರತದಿಂದ ಹಿಡಿದು ಇಂದಿನವರೆಗೂ 'ನಾಯಕತ್ವ' ಬಗೆಗೆ ಓದುವುದೇ ವಾಚಕರಿಗೆ ರೂಢಿಯಾಗಿದೆ. ಪುರೋಗಾಮಿ ಮತ್ತೆ ದಲಿತರ ಸಾಹಿತ್ಯದಲ್ಲೂ ಈ ನಾಯಕ ಕಲ್ಪನೆಯನ್ನೆ ವೈಭವೀಕರಿಸಲಾಗುತ್ತದೆ. ಬಲುತ ಹಲವು ಪಾತ್ರಗಳಲ್ಲಿ ನಾಯ್ಕ-ನಾಯಕಿಯ ಗುಣವಿದೆ. ಎಲ್ಲೆಡೆ ನಿರಾಕರಣೆಯಿದೆ. ಪ್ರತಿಯೊಂದು ಪ್ರಸಂಗ ಪರಾಜಯದ ಕಡೆಗೆವಾಲುತ್ತದೆ. ಈ ನಿರಾಕರಣೆಯ ಹಿಂದೇ ಏನಾದರೂ ವಿದೇಯಕ ವಿಚಾರವಿದೆ ಎಂಬ ಅರಿವು ಬಂದರೆ ಸಾಕಷ್ಟು ವಿಚಾರಗಳನ್ನು ಈ ಕಥನದಿಂದ ಗ್ರಹಿಸಬಹುದೆಂದು ಲೇಖಕರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಶರಣಕುಮಾರ ಲಿಂಬಾಳೆಯವರ 'ಅಕ್ಕರಮಾಶಿ' ಎಂಬುದು ಒಂದು ಮರಾಠಿ ಆತ್ಮಕಥನ. ಅದನ್ನು ದು.ನಿಂ. ಬೆಳಗಲಿ ಎಂಬುವರು 'ಅಕ್ರಮ ಸಂತಾನ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಶರಣಕುಮಾರ ಲಿಂಬಾಳೆ ಕನ್ನಡ ಸಂಸ್ಕೃತಿಗೆ ಹತ್ತಿರದವರು. ಅವರ ಗ್ರಾಮ 'ಹನೂರ' ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆ

ತಾಲ್ಲೂಕಿನಲ್ಲಿಯ ಕನ್ನಡ ಪ್ರಾಧಾನ್ಯ ಪಡೆದ ಊರು. ಖ್ಯಾತ ಕವಿಗಳಾದ ಚೆನ್ನವೀರ ಕಣವಿ ಅವರು "ಇಡೀ ಪುಸ್ತಕವನ್ನೇ ಕನ್ನಡಕ್ಕೆ ಅನುವಾದ ಮಾಡಿರಿ ಎಂದು ಸೂಚಿಸಿದಾಗ ಅದರಂತೆ ಕಾರ್ಯಪ್ರವೃತ್ತನಾದೆ"[13] ಎಂದು ಲೇಖಕರು ಹೇಳುತ್ತಾರೆ. ಕನ್ನಡದಲ್ಲಿ ಅಕ್ರಮ ಸಂತಾನ ಎಂದು ನಾಮಕರಣ ಮಾಡಿದವರು ಸುದ್ದಿ ಸಂಗಾತಿ ಸಂಪಾದಕರು. ಅಕ್ರಮ ಸಂತಾನದ ಮಾನಸಿಕ ತುಮುಲವನ್ನು ಸಿಟ್ಟು, ಸೆಡವನ್ನು ವ್ಯಕ್ತಪಡಿಸುವ ಲೇಖಕರ ನುಡಿಗಳು ಓದುಗರ ಮನಸ್ಸನ್ನು ಸ್ಪರ್ಶಿಸದೆ ಇರುವುದಿಲ್ಲ. ಅಸಹಾಯಕ ಸ್ಥಿತಿಯಲ್ಲಿ ವೇಶ್ಯಾವೃತ್ತಿ ಕೈಗೊಂಡ ಓರ್ವ ಅಸ್ಪೃಶ್ಯ ಮಹಿಳೆ ಹಾಗೂ ಲಿಂಗಾಯತ ಗೌಡನ ಅನೀತಿ ಸಂತಾನವಾಗಿ ಹುಟ್ಟಿಬಂದ ಶರಣಕುಮಾರವರ ಮಾನಸಿಕ ಕುದಿತದ ಜ್ವಾಲೆಯಲ್ಲಿ ಮೂಡಿಬಂದ ಬೆಂಕಿಯ ಕಿಡಿಯಂಥ ಶಬ್ದಗಳು ಓದುಗರನ್ನು ಬೆರಗಾಗುವಂತೆ ಮಾಡುತ್ತವೆ.

ಇತ್ತೀಚೆಗೆ ದಲಿತ ಆತ್ಮಕಥೆಗಳಂತೂ ಇಡೀ ಭಾರತೀಯ ಭಾಷೆಗಳಲ್ಲಿಯೇ ಅಪೂರ್ವ ರೀತಿಯಲ್ಲಿ ಮೂಡಿಬಂದಿವೆ. ತಮ್ಮ ನೋವುಗಳನ್ನು ತಮ್ಮ ಮೇಲಾದ ದೌರ್ಜನ್ಯ, ಅನ್ಯಾಯ, ಶೋಷಣೆಗಳ ಜೊತೆಯಲ್ಲಿಯೇ ತಮ್ಮ ಅಪರಾಧಿಕ ವಿವರಗಳನ್ನು ಅಸಹಾಯಕ ಸ್ಥಿತಿಗಳಲ್ಲಿಯ ತಮ್ಮ ದೋಷಗಳನ್ನು ಕೂಡ ಮುಕ್ತವಾಗಿ ವಿವರಿಸುವ ಮರಾಠಿ ದಲಿತ ಲೇಖಕರು ಆತ್ಮಕಥೆಗಳ ಮೂಲಕ ಬಂಡಾಯವನ್ನಲ್ಲ ಯುದ್ಧವನ್ನೇ ಸಾರಿದ್ದಾರೆ. ಎಲ್ಲಾ ಬಗೆಯ ಪರಿಶಿಷ್ಟ ಜಾತಿಯ ಜನಾಂಗದ ವಿಶೇಷವಾಗಿ ತರುಣ ಲೇಖಕರು ತಮ್ಮ ಆಕ್ರೋಶವನ್ನು ಆತ್ಮಕಥೆಗಳ ಮೂಲಕ ಹೊರಗೆಡಹಿದ್ದಾರೆ. ಆತ್ಮಕಥೆಗಳೆಂದರೆ ಆಯಾ ವ್ಯಕ್ತಿಗಳ ಹುಟ್ಟು, ಬೆಳವಣಿಗೆ, ಸಾಧನೆ, ಅಹಿತಕರ ಅಂಶ ಬಿಟ್ಟು ಮೆರಯುವ ಅಂಶಗಳೊಂದಿಗೆ ಬರೆದ ಸಾಹಿತ್ಯ ಎಂಬ ಭಾವನೆಯನ್ನು ಸುಳ್ಳು ಮಾಡಿ ಇಂದಿನ ಸಾಮಾಜಿಕ ಅಸಮತೋಲನದ ಸತ್ಯದರ್ಶನ ಮಾಡಿಸಿದ್ದಾರೆ.

ಶರಣಕುಮಾರ ಲಿಂಬಾಳೆ ಅವರ 'ಅಕ್ಕರಮಾಶಿ' (ಅಕ್ರಮ ಸಂತಾನ) ಗೆ ಕೂಡ ಮಹರಾಷ್ಟ್ರ ರಾಜ್ಯ ಪ್ರಶಸ್ತಿಯ ಜೊತೆ ಇನ್ನೊಂದು ಪ್ರತಿಷ್ಠಿತ ಬಾ.ಸಿ ಮರ್ಡೆಕರ ಪ್ರಶಸ್ತಿ ಕೂಡ ದೊರೆತಿದೆ. ಈಗಾಗಲೆ, ಇದನ್ನೂ ಹಿಂದಿಯಲ್ಲಿ ಡಾ॥ ಸೂರ್ಯನಾರಾಯಣ ರಣಸಭೆ ಅವರು ಅನುವಾದಿಸಿದ್ದು ಇಂಗ್ಲೀಷಿನಲ್ಲಿಯೂ ಭಾಷಾಂತರವಾಗುತ್ತಲಿದೆ.

'ಅಕ್ರಮ ಸಂತಾನ' ಹೃದಯ ವಿಹ್ವಲಗೊಳಿಸುವ ಆತ್ಮಕಥೆ ತಂದೆ ಯಾರೆಂದು ಗೊತ್ತಿದ್ದು ಆತನನ್ನು ಅಪ್ಪ ಎಂದು ಕರೆಯಲಾಗದ ಸ್ಥಿತಿಯಲ್ಲಿ ಅಸಹಾಯಕ ಬದುಕು ತನ್ನದಾಗಿಸಿಕೊಂಡ ಅಸ್ಪೃಶ್ಯ ಬಾಲಕನ ಕಥೆ ಸಾಮಾಜಿಕ ಮೌಲ್ಯಗಳನ್ನು ಪ್ರಶ್ನಿಸುತ್ತಲೇ ಆತ್ಮಾವಲೋಕನ ಮಾಡಿಕೊಳ್ಳುವ ಅಪರೂಪದ ಕೃತಿ. ಈ ಸಾಹಿತ್ಯಕ್ಕೆ ಕರ್ನಾಟಕದ ಗಡಿಭಾಗದಲ್ಲಿ (ಸೊಲ್ಲಾಪುರ ಜಿಲ್ಲೆ ಅಕ್ಕಲ ಕೋಟೆ ತಾಲ್ಲೂಕಿನ ಒಂದು ಹಳ್ಳಿ) ಹುಟ್ಟಿ ಬೆಳೆದ ಶರಣಕುಮಾರ ಲಿಂಬಾಳೆ ಅವರ ಅರ್ಪಣೆ, ಈ ಅನನ್ಯ ಆತ್ಮಕಥೆ ಅಕ್ರಮ ಸಂತಾನವಾದ ಶರಣಕುಮಾರ ಅವರ ನೋವು, ಸಿಟ್ಟು, ಸಂತಾಪ, ಆಕ್ರೋಶ, ಹತಾಶೆ, ಅಸಹಾಯಕತೆ, ಶೋಷಣೆ, ಅವಮಾನದ ಸೇಡು ಇಷ್ಟಕ್ಕೆ ನಿಂತಿಲ್ಲ. ಮುಂದಿನ ಅನುಬಾವಗಳನ್ನು ಅವರು 'ಬಾರಾಮಾಶಿ' ಹಾಗೂ 'ರಾಣಿಮಾಶಿ' ಗಳಲ್ಲಿಯೂ ತೋಡಿಕೊಂಡಿದ್ದಾರೆ. ಶರಣಕುಮಾರರ ಪ್ರಾಮಾಣಿಕ ಹಾಗೂ ಪಾಮಜಲವಾದ ಬಿಚ್ಚುನುಡಿಗಳು ಈ ಕೃತಿಯ ಬೆಲೆಯನ್ನು ಹೆಚ್ಚಿಸಿವೆ.

ಬದುಕು ಸತ್ಯವಾಗಿದ್ದರೂ, ಎಲ್ಲವನ್ನು ನಿರ್ಭಿಡೆಯಿಂದ ಹೇಳಿದ್ದರೂ, ತಾನೊಬ್ಬ ವೇಶ್ಯೆಯ ಮಗ ಎಂಬ ಅಳುಕು ಇನ್ನೂ ಇದೆ. ಈ ಕೀಳರಿಮೆ ಸದಾಕಾಲ ಅವರನ್ನು (ಲೇಖಕರನ್ನು) ಸತಾಯಿಸುತ್ತಲಿದ್ದರೂ ಅದನ್ನು

ಮೆಟ್ಟಿ ಮೇಲೇರಿ ಬಂದಿದ್ದು ಕೂಡ ಅವರ ಎದೆಗಾರಿಕೆ, ಮೆಚ್ಚಬೇಕಾದ ಅಂಶ. ಲಿಂಬಾಳೆಯವರ ಸಹೋದರಿಯರು ಕೂಡ ಕೆಲವು ಪ್ರಸಂಗಗಳನ್ನು ಅಲ್ಲಗಳೆಯುತ್ತಾರೆ ಕಾರಣ ತಮ್ಮ ಗಂಡನ ಮನೆಗಳಲ್ಲಿ ತಮಗೆ ಅವಮಾನ ತೊಂದರೆ ಆಗಬಾರದೆಂಬ ಭಯ ಅವರಿಗೆ.

"ಬರೆಯುವುದಿದ್ದರೆ ನಿನ್ನ ಸ್ವಂತದ್ದನ್ನಷ್ಟೇ ಬರೆಯಬೇಕಾಗಿತ್ತು ಊರ ಭಾನಗಡಿಗಳನ್ನೇಕೆ ಬರೆದಿರುವಿ"?[14] ಎಂದು ಕೇಳಿದವರೂ ಇದ್ದಾರೆ. ಲೇಖಕರ ಸಹೋದರಿಯ ಅತ್ತೆಯೊಬ್ಬಳು ತನ್ನ ಪ್ರಸಂಗ ತಿಳಿದು ಸಂತಾಪಗೊಂಡಿದ್ದಳಂತೆ. ಇಷ್ಟೆಲ್ಲ ವೈಯಕ್ತಿಕ ನೋವುಗಳಿದ್ದರೂ ಈ ಕೃತಿಯನ್ನು ಮೆಚ್ಚಿಕೊಂಡ ನೂರಾರು ಓದುಗರಿಂದ ಬಂದ ಮೆಚ್ಚುಗೆ ಆ ಅವಮಾನದ ಗಾಯಗಳನ್ನೆಲ್ಲ ಮಾಯಿಸುತ್ತದೆ ಎಂಬುದು ಲೇಖಕರ ಮಾತು. ಇಲ್ಲಿ ಲೇಖಕರು ಎಷ್ಟೇ ನೋವಿದ್ದರೂ ಬದಲಾವಣೆಯನ್ನು ಕಂಡುಕೊಂಡು ಆತ್ಮಚರಿತ್ರೆಯನ್ನು ಬರೆದದ್ದನು ಗಮನಿಸಬಹುದು.

ಡಾ॥ ಅಂಬೇಡ್ಕರ್‌ರವರು ದಲಿತರು ನಮ್ಮ ಸಮಾಜದಲ್ಲಿ ಇದ್ದ ಚತುರ್ವರ್ಣದ ಹೆಸರಿನಲ್ಲಿ ಅಮಾನವೀಯತೆಯಿಂದ, ಯುಗಾಂತರಗಳಿಂದ ತುಳಿಯಲ್ಪಟ್ಟಿದ್ದು ಭಾರತದ ಸಂಸ್ಕೃತಿಯನ್ನೇ ಸಂಪೂರ್ಣವಾಗಿ ಬದಲಾಯಿಸಿ ಭಾರತವನ್ನು ಒಂದು ಆದರ್ಶ ದೇಶವನ್ನಾಗಿ ಮಾಡಲು ಪ್ರಯತ್ನಿಸಿದವರು. ಸಂವಿಧಾನಾತ್ಮಕವಾಗಿ ದಲಿತರು ಹಕ್ಕುಗಳನ್ನು ಪಡೆಯಲು ಕಾರಣ ಕರ್ತರಾದರು. ಅಸ್ಪೃಶ್ಯ ಎಂಬ ಪದ ಬಳಸುವುದೇ ಒಂದು ಅಪರಾಧ ಎಂಬ ಕಾನೂನನ್ನು ಮಾಡಿದರು. ಮಾನವತಾವಾದ ಜಾತೀಯತೆಯ ಹೆಸರಿನಿಂದ ನಡೆಯುತ್ತಿತ್ತು. ಅನ್ಯಾಯ ಕಂದಾಚಾರವನ್ನು ತೊಲಗಿಸಲು ಹೋರಾಡಿದವರು ಡಾ॥ ಅಂಬೇಡ್ಕರ್‌ರವರು. ಜಾತೀಯತೆಯೊಂದೇ ಅಲ್ಲದೆ ಸ್ವತಂತ್ರ ಅಧಿಕಾರ ಶಿಕ್ಷಣ ನ್ಯಾಯಸಮ್ಮತವಾದ ಕಾನೂನಿಂದ ಸಿಗಬೇಕಾದ ಸೌಲಭ್ಯಗಳನ್ನು ದಲಿತರಿಗೆ ಒದಗಿಸಲು ಗಾಂಧೀಜಿಯಂತಹ ಮಹಾನ್ ವ್ಯಕ್ತಿಯನ್ನೇ ಎದುರು ಹಾಕಿಕೊಳ್ಳಲು ಹೆದರಲಿಲ್ಲ. ಸ್ವಾತಂತ್ರ್ಯ ನಂತರವೂ ದಲಿತರಿಗೆ ಯಾವುದೇ ಸ್ವತಂತ್ರ ಇಲ್ಲದೆ ಹೋದರೆ ಸ್ವತಂತ್ರ ಸಿಕ್ಕಿಯೂ ಪ್ರಯೋಜನವಿಲ್ಲ, ಅದಕ್ಕಾಗಿ ಬ್ರಿಟಿಷರಿಂದಲೇ ಸಂವಿಧಾನದಿಂದಲೇ ಸ್ವತಂತ್ರ ಪಡೆಯುವುದಾಗಿ ಪಣತೊಟ್ಟು ಸಮಾಜವನ್ನು ಬದಲಾಯಿಸಲು ತಮ್ಮ ಅಧಿಕಾರ ಜ್ಞಾನವನ್ನೆಲ್ಲ ಉಪಯೋಗಿಸಿದ ಇವರು ಆದರ್ಶ ಸಮಾಜವಾದಿಗಳು. ಡಾ॥ ಬಿ.ಆರ್ ಅಂಬೇಡ್ಕರ್ ಈ ದೇಶ ಕಂಡ ಮಹಾನ್ ಚಿಂತಕ, ಮಾನವತಾವಾದಿ. ತಾವು ಕಂಡು ಅನುಭವಿಸಿದ ಸಮುದಾಯದ ನಿತ್ಯನೋವುಗಳನ್ನು ಅರಿತು ತಮ್ಮ ಬದುಕಿನುದ್ದಕ್ಕೂ ದಲಿತರ ಮುಕ್ತಿಗಾಗಿ ಹೋರಾಡಿದ ಧೀಮಂತ ನಾಯಕ. ಇಂತಹ ನಾಯಕನ ಜೀವನ ಚರಿತ್ರೆ ಕೂಡ ಬದುಕಿನ ಪ್ರತಿ ಹಂತದಲ್ಲೂ ನಾನಾ ತಿರುವುಗಳನ್ನು ಕಂಡು ಕೊಂಡಿದೆ ಜೊತೆಗೆ ನೊಂದ ಅಸಹಾಯಕ ದಲಿತರ ಬದುಕು ಬದಲಾವಣೆಯನ್ನು ಕಂಡುಕೊಳ್ಳಲು ಪರೋಕ್ಷವಾಗಿ ಪ್ರತ್ಯಕ್ಷವಾಗಿ ಕಾರಣವಾಗಿದ್ದು ಡಾ॥ ಸಿದ್ಧಲಿಂಗಯ್ಯನವರ ಜೀವನವೂ ಸಹ ಇದರಿಂದ ಪ್ರೇರಣೆಯನ್ನು ಪಡೆದಿದೆ. ಪ್ರಭಾವಕ್ಕೊಳಗಾಗಿದೆ ಅದ್ದರಿಂದಲೇ ಈ ಆತ್ಮಕಥನ ಮೇಲೆ ವಿವರಿಸಿದ ಜೀವನದ ಅತ್ಮಕಥನಗಳನ್ನು ಹೋಲುತ್ತದೆ ಎಂಬುದನ್ನು ಈ ಮೇಲಿನ ಎಲ್ಲಾ ಸಂಕ್ಷಿಪ್ತ ಆವೃತ್ತಿಯ ಕಥನಗಳನ್ನು ನೋಡುವ ಮೂಲಕ ಗ್ರಂಥಾಲಯಗಳಿಗೆ ಹೋಗಿ ಪುಸ್ತಕಕೊಂಡು ಓದಿ ಕೆಲವು ಆಯ್ದು ವಿಚಾರಗಳನ್ನು ಪ್ರಸ್ತುತ

ಜನತೆಗೆ ಆತ್ಮಕಥನಗಳು ಕತ್ತಲಿಂದ ಬೆಳಕಿನೆಡೆಗೆ ದಾರೀದೀಪದಂತೆ ಬದಲಾಗುತ್ತಿರುವ ಸ್ವರೂಪವನ್ನು ತಿಳಿಸುವುದೇ ಈ ಅಧ್ಯಾಯದ ಗುರಿ.

ಮೊದಲು ವಿವರಿಸಿದ ಆತ್ಮಕಥನಗಳಲ್ಲಿನ ಸಾಮಾನ್ಯವಾದ ಅಂಶವೆಂದರೆ ಅದು ಬಹುಪಾಲು ಕೇವಲ ಆ ವ್ಯಕ್ತಿಯೊಬ್ಬರ ಆತ್ಮಕಥನ ಮಾತ್ರ. ಆದರೆ ಈ ದಲಿತ ನೆಲೆಯಿಂದ ಬಂದವರ ಆತ್ಮಕಥನಗಳು ಕೇವಲ ಅವರೊಬ್ಬರದಾಗಿರದೆ ಇಡೀ ಸಮುದಾಯದ ಆತ್ಮಕಥೆಯಾಗಿದೆ. ಅಷ್ಟೇ ಅಲ್ಲ ಇಡೀ ಭಾರತದ ಒಟ್ಟು ದಲಿತ ಸಮುದಾಯದ ಬದುಕಿನ ಚಿತ್ರಣ, ಅದರ ವೈರುಧ್ಯಗಳು, ಅತಂತ್ರಸ್ಥಿತಿ, ಅದಕ್ಕೆ ಕಾರಣವಾದ ಪಟ್ಟಭದ್ರರ ಹಿಡಿತ ಇವುಗಳನ್ನು ಕುರಿತ ವಿವರವನ್ನೇ ತೆರೆದಿಡುತ್ತವೆ. ಶ್ರೀಯುತ ಸಿದ್ಧಲಿಂಗಯ್ಯನವರ ಆತ್ಮಕಥೆಯೂ ಇದರಿಂದ ಹೊರತಾಗಿಲ್ಲ. ಆದರೆ ಹೆಸರೇ ಸೂಚಿಸುವಂತೆ 'ಊರು ಕೇರಿ' ಅಂದರೆ ದಲಿತರ ಕೇರಿ ಮತ್ತು ಆ ಊರಿನ ಆ ಕೇರಿಯ ಜನರ ಮೇಲಿನ ಒಟ್ಟಾರೆ ಹಿಡಿತ. ಅಲ್ಲಿಯ ತಲ್ಲಣಗಳು, ಶಿಕ್ಷಣದ ಕೊರತೆ, ಇದರಿಂದಾದ ಮೌಢ್ಯ, ಬಡತನ ಕಾರಾಣವಾಗಿ ಅವರು ಬದುಕನ್ನು ಕಟ್ಟಿಕೊಳ್ಳಲು ಮಾಡುವ ಪರದಾಟಗಳು, ಅಲ್ಲಿನ ಸೋಲು, ಇತರೆ ವ್ಯಸನಗಳು, ಇವುಗಳ ವಿವರವನ್ನೆ ತೆರೆದಿಡುತ್ತದೆ. ಈ ವೈರುಧ್ಯಗಳ ನಡುವೆಯೂ ಶಿಕ್ಷಣವನ್ನು ಕೊಡಿಸಲೆಬೇಕೆಂಬ ಆ ಕಟುವಾದ ನಿರ್ಧಾರ ಮತ್ತು ಇದನ್ನು ತನ್ನದೇ ನೆಲೆಯಲ್ಲಿ ಸಾರ್ಥಕವಾಗಿ ಬಳಸಿಕೊಂಡ ಇವರ ಜಾಣ್ಮೆ ಅನುಕರಣೀಯವಾದದ್ದು.

ಕೊನೆ ಟಿಪ್ಪಣಿ

1. ಬೇಬಿತಾಯಿ ಕಾಂಬಳೆ : ಬದುಕು ನಮ್ಮದು, ನವಕರ್ನಾಟಕ ಪ್ರಕಾಶನ, ಬೆಂಗಳೂರು 2009. ಪುಟ 87
2. ಅದೇ ಪುಸ್ತಕ : ಪುಟ 88
3. ಅದೇ ಪುಸ್ತಕ : ಪುಟ 89
4. ಅದೇ ಪುಸ್ತಕ : ಪುಟ 96
5. ಲಕ್ಷ್ಮಣಗಾಯಕವಾಡ : ಉಚಲ್ಯಾ, ನವಕರ್ನಾಟಕ ಪ್ರಕಾಶನ, ಬೆಂಗಳೂರು 2011. ಪುಟ 67
6. ಅದೇ ಪುಸ್ತಕ : ಪುಟ 68
7. ಅದೇ ಪುಸ್ತಕ : ಪುಟ 117
8. ದಯಾ ಪವಾರ : ಬಲುತ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪
9. ಅದೇ ಪುಸ್ತಕ : ಪುಟ 05
10. ಅದೇ ಪುಸ್ತಕ : ಪುಟ 06
11. ಅದೇ ಪುಸ್ತಕ : ಪುಟ 11
12. ಅದೇ ಪುಸ್ತಕ : ಪುಟ 12
13. ಶರಣಕುಮಾರ ಲಿಂಬಾಳೆ : ಅಕ್ರಮ ಸಂತಾನ, ಅನುವಾದ ದು.ನಿಂ.ಬೆಳಗಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು 2013. ಪುಟ 03.
14. ಅದೇ ಪುಸ್ತಕ : ಪುಟ 06

ಅಧ್ಯಾಯ-೩

ಅಸ್ಮಿತೆಯ ಹುಡುಕಾಟವಾಗಿ ಊರುಕೇರಿ

ಪ್ರತಿಯೊಂದು ಸಮುದಾಯ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ. ಈ ವಿಶಿಷ್ಟ ಅಂಶಗಳೇ ಅಲ್ಲಿನ ಅಸ್ಮಿತೆಗಳಾಗಿ ಸದಾ ಉಳಿದುಬರುತ್ತವೆ. ದಲಿತ ಜಗತ್ತಿನಲ್ಲಿಯೂ ಕೂಡ ತನ್ನದೇ ಆದ ನಂಬಿಕೆಗಳಿದ್ದು ಇದನ್ನು ಆದರಿಸಿದ ಸಂಪ್ರದಾಯಗಳು ಇವೆ. ಇದು ಮೇಲ್ನೋಟಕ್ಕೆ ಶಿಕ್ಷಣದ ಕೊರತೆಯಿಂದ ಬಂದುದಾಗಿರಬಹುದು ಎಂದು ಭಾಸವಾಗುತ್ತದೆ. ಆದರೆ ಮಾನವ ಶಾಸ್ತ್ರದ ಹಿನ್ನೆಲೆಯಿಂದ ಗಮನಿಸಿದಾಗ ನಿಸರ್ಗಕ್ಕೆ ಇನ್ನೂ ಆಪ್ತವಾಗಿರುವ ಈ ಸಮುದಾಯದಲ್ಲಿ ಉಳಿದಿರಬಹುದಾದ ಈ ಆಚರಣೆಗಳು ವಿಶಿಷ್ಟವಾಗಿದ್ದು ಇವು ಆ ಸಮುದಾಯದ ಅಸ್ಮಿತೆಗಳಾಗುತ್ತವೆ.

ಪ್ರಸ್ತುತ ಸಿದ್ಧಲಿಂಗಯ್ಯನವರ ಆತ್ಮಕಥನದಲ್ಲಿ ಈ ದಲಿತ ಸಮುದಾಯದ ಇಂತಹ ಕೆಲವು ನಂಬಿಕೆ, ಆಚರಣೆಗಳು ದಾಖಲಾಗಿದ್ದು, ಇವುಗಳನ್ನು ಅಸ್ಮಿತೆಗಳೆಂದು ಗುರುತಿಸಬಹುದು ಹಾಗೆಯೇ ಮತ್ತೊಂದು ನೆಲೆಯಿಂದ ಗಮನಿಸಬೇಕಾದ ಅಂಶವೂ ಇದೆ. ಶೋಷಿತ ನೆಲೆಯಿಂದ ಬಂದ ಲೇಖಕರು ಮತ್ತು ಅವರ ಕೇರಿಯ ಜನ ಅನುಭವಿಸಿದ ಶೋಷಣೆ, ಅಪಮಾನ, ಪಟ್ಟಭದ್ರರ ಹಿಡಿತ ಮತ್ತು ಇವುಗಳ ಮಧ್ಯೆಯೇ ಬದುಕನ್ನು ಕಟ್ಟಿಕೊಂಡ ವಿಧಾನ ಇವು ಗುರ್ತಿಸಬೇಕಾದ ಅಂಶಗಳಾಗಿವೆ. ಈ ಕಾರಣದಿಂದಾಗಿ ವರ್ತಮಾನದ ದಲಿತ ಸಮುದಾಯಕ್ಕೆ ಈ ಆತ್ಮಕಥನ ಒಂದು ಅಸ್ಮಿತೆಯಾಗುವುದು ಎಂಬುದರಲ್ಲಿ ಸಂಶಯವಿಲ್ಲ. ಬದುಕಿನ ಪ್ರತಿಯೊಂದು ಹಂತವೂ ದಲಿತ ಸಮುದಾಯ ಸಾಗಿ ಬಂದ ಒಂದೊಂದು ಹೆಜ್ಜೆ ಗುರುತಾಗುವುದು ಇಲ್ಲಿನ ವಿಶೇಷ.

ಸಿದ್ಧಲಿಂಗಯ್ಯನವರು ದಲಿತ ಕವಿ ಎಂದೇ ಪ್ರಖ್ಯಾತರಾಗಿದ್ದಾರೆ. ಕವಿ ನಾಡೋಜರವರು ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಕವಿಗಳ ಸಾಲಿಗೆ ಸೇರಿದವರಾಗಿದ್ದು ಕನ್ನಡ ಸಾಹಿತ್ಯ ಪ್ರಪಂಚ ಗುರುತಿಸುವಂತಹ ವ್ಯಕ್ತಿಯಾಗಿದ್ದಾರೆ.

"ದಲಿತ ಚಳುವಳಿಗೆ ಬಹುದೊಡ್ಡ ಇತಿಹಾಸವಿದ್ದು, ಕ್ರಿ.ಪೂ. ಕಾಲದಿಂದಲೂ ಸಾಮಾಜಿಕ ಅಸಮಾನತೆಯ ವಿರುದ್ಧ ಸಮರ ನಡೆಯುತ್ತಲೇ ಇದೆ. ಪ್ರಥಮಾದಿಯಾಗಿ ಭಗವಾನ್ ಬುದ್ಧನಿಂದ ಆರಂಭಗೊಂಡು ಬಸವಣ್ಣ, ಪೆರಿಯಾರ್, ಮಹಾತ್ಮ ಜ್ಯೋತಿ ಬಾಪುಲೆ, ಡಾ. ಬಿ.ಆರ್. ಅಂಬೇಡ್ಕರ್‌ರನ್ನು ಒಳಗೊಂಡು ಇಂದಿನವರೆಗೂ ಪರಿವರ್ತನೆಯ ದಾರಿ ಹುಡುಕುತ್ತಾ ಅಸಮಾನತೆಯ ವಿರುದ್ಧ ಹೋರಾಟಗಳು ನಡೆಯುತ್ತಲೇ ಇವೆ"[1] ಎಂಬ ಬಿ. ಶಿವಕುಮಾರ್ ಲೇಖಕರ ಮಾತು ಅಕ್ಷರಶಃ ಸತ್ಯ. ಏಕೆಂದರೆ ಬುದ್ಧ, ಅಂಬೇಡ್ಕರ್‌ರಂತಹ ಮಹಾನ್ ವ್ಯಕ್ತಿಗಳ ತ್ಯಾಗ, ಬಲಿದಾನ, ವೈಚಾರಿಕೆ ಚಿಂತನೆಗಳಿಂದ ದಲಿತ ಸಮಾಜ ಇಂದು ಸಾಕಷ್ಟು ಬದಲಾವಣೆಗಳನ್ನು ಕಾಣುತ್ತಿದೆ. ಹಾಗೆಯೇ ಕವಿ. ಸಿದ್ಧಲಿಂಗಯ್ಯನವರ ದಲಿತ ಪರ ಹೋರಾಟವು ಈ ಕಾಲಮಾನದಲ್ಲಿ ಒಂದು ರೀತಿಯಲ್ಲಿ ಬದಲಾವಣೆಗೆ ಕಾರಣವಾಗುತ್ತಿದೆ.

'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಈ ತತ್ವ ಆಧರಿಸಿದ ಅಂಬೇಡ್ಕರ್‌ರ ಸಮಸಮಾಜ ಅಂಬೇಡ್ಕರ್‌ರ ಬಹುದೊಡ್ಡ ಕನಸು. ಇದರ ಅನುಷ್ಠಾನಕ್ಕೆ ಇದ್ದ ಅಡೆತಡೆಗಳಾದ ಅಸಹಕಾರ, ದೌರ್ಜನ್ಯಗಳ ವಿರುದ್ಧ ಹಲವಾರು ದಲಿತ ಬಂಡಾಯಗಾರರು ಹೋರಾಡಿ ಹಸಿವು ಮತ್ತು ಅಸ್ಪೃಶ್ಯತೆಯ ನಿವಾರಣೆಗೆ ಶ್ರಮಿಸಿದ್ದಾರೆ.

ಅಂತೆಯೇ ಅಸಮಾನತೆ, ಅಸಹಾಯಕತೆ, ಹಸಿವು ಮತ್ತು ಅಪಮಾನಗಳ ವಿಷಗರ್ಭದಿಂದ ಸಮಾನತೆಯ ಆಶಯದೊಂದಿಗೆ 70ರ ದಶಕದಲ್ಲಿ ಹುಟ್ಟಿದ ದಲಿತ ಚಳುವಳಿ ಸಾಹಿತ್ಯದಿಂದ ಪ್ರೇರಣೆ ಪಡೆದಿತ್ತು. ಈ ಸಾಂಸ್ಕೃತಿಕ ಚಳುವಳಿಯ ರೂವಾರಿಗಳಾದ ಹಾಗೂ ಚಳುವಳಿಯ ಕಾವಿನಲ್ಲಿ ಹುಟ್ಟಿ, ಚಳುವಳಿಯನ್ನು ತಮ್ಮ ಶಕ್ತಿಶಾಲಿ ಕಾವ್ಯ ಮತ್ತು ಪರಿಣಾಮಕಾರಿಯಾದ ಭಾಷಣಗಳ ಮೂಲಕ ಬೆಳೆಸಿದ ಹಾಗೂ ಅದರ ಒಂದು ಭಾಗವೇ ಎನಿಸಿದ ಇವರು. ಬಾಲ್ಯದಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ಡಾ. ಬಿ.ಆರ್.ಅಂಬೇಡ್ಕರ್‌ರವರ ವಿಚಾರಗಳನ್ನು ಅರಿಯುವ ಪ್ರಯತ್ನ ಮಾಡಿದ ಕೆಲವು ಪ್ರಮುಖರಲ್ಲಿ ಸಿದ್ಧಲಿಂಗಯ್ಯನವರು ಒಬ್ಬರಾಗಿದ್ದಾರೆ.

ಸಾರ್ವತ್ರಿಕವಾಗಿ ಜಾತಿಯ ಹೆಸರನ್ನೇ ಹೇಳಿಕೊಳ್ಳಲು ಹಿಂಜರಿಯುತ್ತಿದ್ದ ಕಾಲದಲ್ಲಿ 'ಹೊಲೆಮಾದಿಗರ ಹಾಡು' ಕವನ ಸಂಕಲನ ಪ್ರಕಟಿಸಿ ನೊಂದ ಜನರ ಧ್ವನಿಯಾದವರು. 'ಈ ಸಂಕಲನ ನನ್ನನ್ನು ಕವಿಯಾಗಿಸಿತು' ಎಂದು ಸ್ವತಃ ಸಿದ್ಧಲಿಂಗಯ್ಯನವರೇ ಹೇಳಿದ್ದಾರೆ. ಅಂತೆಯೇ ಡಾ. ಸಿದ್ಧಲಿಂಗಯ್ಯನವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ 30 ವರ್ಷಗಳ ಭೋಧನಾನುಭವ ಪಡೆದು ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಎಂ.ಎ. ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದು, ಇವರು 'ಗ್ರಾಮದೇವತೆಗಳು' ಎಂಬ ಪಿ.ಎಚ್.ಡಿ. ವಿಷಯದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಹಲವಾರು ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದು, ಕರ್ನಾಟಕ ಸರ್ಕಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಧ್ಯಕ್ಷರಾಗಿ 2006–2008ರವರೆಗೆ ಸೇವೆ ಸಲ್ಲಿಸಿದ್ದಾರೆ. ಮಹನೀಯರಾದ ಇಂತಹವರಿಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಸಂದಿವೆ.

ಅಂತೆಯೇ ಇವರು ಹಲವಾರು ಕೃತಿಗಳನ್ನು ಬರೆದಿದ್ದು, ಉತ್ತಮ ಸಾಹಿತಿ ಎನಿಸಿಕೊಂಡಿದ್ದಾರೆ. ದಲಿತ ಸಮುದಾಯದಿಂದ ಬಂದ ಇವರು ಅನೇಕ ರೀತಿಯ ನೋವಿನ ಅನುಭವಗಳನ್ನು ಜೀವನದಲ್ಲಿ ಅನುಭವಿಸಿದ್ದಾರೆ. ಅದರ ವಿವಿಧ ಮುಖಗಳನ್ನು ತಮ್ಮ ಆತ್ಮಕಥನವಾದ ಊರುಕೇರಿ ಭಾಗ 1 ಹಾಗೂ ಊರುಕೇರಿ ಭಾಗ 2ರಲ್ಲಿ ಪ್ರಾಮಾಣಿಕವಾಗಿ ವಿವರಿಸಿದ್ದಾರೆ. ಅವರು ಜೀವನದಲ್ಲಿ ಅನುಭವಿಸಿದ ನೋವು, ಹಿಂಸೆ, ಬಡತನ, ಅಸ್ಪೃಶ್ಯತೆಯನ್ನು ಒಳಗೊಂಡಂತೆ ಎಲ್ಲವನ್ನು ಬರೆದಿದ್ದಾರೆ.

ಊರುಕೇರಿ ಭಾಗ –1 ರಲ್ಲಿ 5 ಭಾಗಗಳನ್ನು ಮಾಡಿಕೊಂಡಿದ್ದು 90ಕ್ಕೂ ಹೆಚ್ಚು ಶೀರ್ಷಿಕೆಗಳನ್ನು ಒಳಗೊಂಡಿದೆ.

ಭಾಗ 1 ರಲ್ಲಿ 'ಐನೋರ ಹೊಲ' ಶೀರ್ಷಿಕೆಯೊಂದಿಗೆ ಶ್ರೀಯುತರು ತಮ್ಮ ಬಾಲ್ಯದ ಜೀವನದ ಅನುಭವವನ್ನು ಹೇಳಿಕೊಂಡಿದ್ದಾರೆ. ಈ ಊರುಕೇರಿ ಆತ್ಮಕಥನವು ಎಂದೋ ಆಗಿ ಹೋದ ಬಾಲ್ಯಜೀವನವನ್ನು, ಯೌವ್ವನದ ದಿನಗಳನ್ನು, ತುಂಟತನದ ಹಾಸ್ಯವನ್ನು ಚೇಷ್ಟೆಗಳನ್ನು ಇನ್ನೈಷ್ಟೋ ವರ್ಷಗಳ ನಂತರ ಬರವಣಿಗೆ ರೂಪದಲ್ಲಿ ಹೇಳಿರುವುದು ಓದಿದ ಎಲ್ಲಾ ಸಹೃದಯರಿಗೂ ತನ್ಮಯಗೊಳಿಸುವ ಕಥೆಯಂತೆ ಭಾಸವಾಗುತ್ತದೆ. ನನ್ನ

ಈ ನಿಬಂಧದಲ್ಲಿ ಆತ್ಮಕಥನದಲ್ಲಿನ ದಲಿತ ಜಗತ್ತಿನ ಅನೇಕ ವಿವರಗಳನ್ನು ಈ ಮೂಲಕ ಗ್ರಹಿಸಿ ಹಲವು ಅಸ್ಮಿತೆಗಳನ್ನು ಹೇಳುವ ಪ್ರಯತ್ನ ಮಾಡಿದ್ದೇನೆ. ಅಂತಹ ಕೆಲವು ಪ್ರಮುಖವಾದ ಘಟನೆಗಳನ್ನು ಊರುಕೇರಿ ಭಾಗ–1, ಭಾಗ–2 ರಲ್ಲಿ ಅಭ್ಯಸಿಸಿ ಶ್ರೀಯುತರ ಜೀವನದ ಅಪ್ಪಟ ಗ್ರಾಮೀಣ ಪ್ರತಿಭೆಯ ವಿವಿಧ ಆಯಾಮಗಳನ್ನು ಗುರುತಿಸಲು ಈ ಮೂಲಕ ಹೊರಟಿದ್ದೇನೆ. ಈ ಆತ್ಮಚರಿತ್ರೆಯಲ್ಲಿ ಅನುಕಂಪ, ಪಶ್ಚಾತ್ತಾಪದಂತಹ ವಿಚಾರಗಳು ಹೆಚ್ಚಿಲ್ಲದಿದ್ದರೂ ಅಗಾಧವಾದ ನೋವು, ನಿರಾಶೆ, ಹಿಂಸೆಯ ಚಿತ್ರಣ, ಮಾನಸಿಕ ಸಂಕಟಗಳೆಲ್ಲವನ್ನೂ ನುಂಗಿ, ನಗುವಿನ ಮುಖಗಳನ್ನು ತೆಗೆದಿಡುವ ಶ್ರೀಯುತರ ಜೀವನದ ತಿರುವುಗಳ ಭಾಗವೇ ಈ ಊರುಕೇರಿ. ಈ ಕೃತಿಯ ಭಾಗ–1ರಲ್ಲಿ ಬಾಲ್ಯದ ವಿವರಗಳನ್ನು ಓದಿದಾಗ (ಲೇಖಕನೊಬ್ಬನ) ಡಾ. ಸಿದ್ದಲಿಂಗಯ್ಯನವರ ಮುಗ್ಧತೆ ಅಲ್ಲಲ್ಲಿ ಕಂಡರೂ ಇವರು ಜೀವನದಲ್ಲಿ ವಿವರಿಸಿರುವ ಈ ಸಂದರ್ಭಗಳು ದಲಿತ ಸಮುದಾಯ ಅನುಭವಿಸಿದ ಬಡತನ, ಸಾಮಾಜಿಕ ಅಪಮಾನಗಳು ಇಂದಿಗೂ ನೋವಿನ ಅಸ್ಮಿತೆಗಳಾಗಿ ಉಳಿಯುತ್ತವೆ.

ಊರುಕೇರಿ ಭಾಗ–1ರಲ್ಲಿ ಆರಂಭದ ಶೀರ್ಷಿಕೆಯಲ್ಲೇ ತಾವು ಬೆಳೆದದ್ದು ದಲಿತರ ಕಾಲೋನಿಯಲ್ಲಿ. ಆ ಕೇರಿಯಲ್ಲಿ ಕೊನೆಯ ಮನೆ ಇವರದಾಗಿದ್ದು ಇವರ ಮನೆಗೂ ಕೊನೆಯಲ್ಲಿ ಇನ್ನೊಂದು ಮನೆಯಿದ್ದು ಛಾವಣಿ ಕುಸಿದು ಮೋಟುಗೋಡೆಯಿತ್ತು. ಇದರ ಮೇಲೆ ನಿಂತು ಬಾಲ್ಯದ ಗೆಳೆಯರ ಜೊತೆಗೂಡಿ ಅಪ್ಪ ಅವ್ವಂದಿರನ್ನು ಕೂಗುತ್ತಿದ್ದಾಗ ಒಂದು ನೋಟ ಕಾಣಿಸಿತು. ಸ್ವಲ್ಪ ದೂರದಲ್ಲೇ ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೂಡಿ ಇನ್ನಿಬ್ಬರು ಉಳುತ್ತಿದ್ದರು. ನೊಗ ಹೊತ್ತ ಅ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ, ಇನ್ನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡರೂ ನೊಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ತನ್ನ ಅಪ್ಪ ಎಂದು ಗೊತ್ತಾದ ಕ್ಷಣ ಇವರ ಮನಸ್ಸಿನಲ್ಲಾದ ಸಂಕಟ ಅಗಾಧವಾದದ್ದು. ಅಲ್ಲೇ ಇದ್ದ ಹೆಂಗಸರು "ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು"[2] ಎಂದದ್ದನ್ನು ಕಿವಿಯಿಂದ ಕೇಳಿದ ಮೇಲೆ ದುಃಖ ಮತ್ತಷ್ಟು ಇಮ್ಮಡಿಯಾಯಿತು. ಇಲ್ಲಿ ಚಿತ್ರಿಸಿರುವ ನೊಗ ಹೊತ್ತ ದೃಶ್ಯ ಕಾವ್ಯ ಪ್ರತಿಮೆಯಾಗಿ ನಮ್ಮ ಮನಸ್ಸಿಗೆ ದಾಖಲಾಗುತ್ತದೆ. ಶತಮಾನಗಳಿಂದ ಈ ಸಮುದಾಯ ಅನುಭವಿಸುತ್ತಿರುವ ನೋವು, ಹಿಂಸೆ ಈ ಮೇಲಿನ ಮಾತುಗಳಲ್ಲಿ ಹೆಪ್ಪುಗಟ್ಟಿದೆ. ಅಲ್ಲದೆ ದಲಿತರನ್ನು ಪ್ರಾಣಿಗಳಂತೆ ಬಳಸಿಕೊಳ್ಳುತ್ತಿದ್ದರೆನ್ನುವುದನ್ನು ಇಲ್ಲಿ ಕಂಡುಕೊಳ್ಳಲಾಗುತ್ತದೆ.

ಅಪ್ಪನಿಗೆ ಮೂರು ಕಡೆ ಚೂರು ಚೂರು ಭೂಮಿಯಿತ್ತು. ಮನೆಗೆ ಹತ್ತಿರವಾಗಿದ್ದ ಈ ಹೊಲವನ್ನು ಪಾಲಿಗೆ ಮಾಡುತ್ತಿದ್ದು, ಮಾಗಡಿ ಬ್ರಾಹ್ಮಣರು ಇದರ ಒಡೆಯರಾಗಿದ್ದರು. ಈ ಬ್ರಾಹ್ಮಣರ ಮನೆಯಲ್ಲಿ ಅಪ್ಪ, ಅವ್ವನ ಜೊತೆ ಹೋದಾಗ ಚಿತ್ರಾನ್ನ, ಪೂರಿ ಇತ್ಯಾದಿಗಳನ್ನು ಕೊಡುತ್ತಿದ್ದರಿಂದಾಗಿ ಒಡೆಯರನ್ನು ಮುಗ್ಧವಾಗಿ, ಪ್ರೀತಿಯಿಂದಲೇ ಆ ಭಾಗದಲ್ಲಿ ಸ್ಮರಿಸಿರುವುದನ್ನು ನೋಡಬಹುದು. ಇಲ್ಲಿ ಡಾ. ಸಿದ್ಧಲಿಂಗಯ್ಯನವರು ಆ ವಯಸ್ಸಿನಲ್ಲಿ ಬಡತನದಿಂದಾಗಿ ಗಂಜಿ ಕುಡಿದು ಜೀವನ ನಡೆಸುತ್ತಿದ್ದರಿಂದ ಅಂದು ಒಡೆಯರು ಕೊಟ್ಟಂತಹ ಚಿತ್ರಾನ್ನ, ಪೂರಿ, ವಿಶೇಷ ಖಾದ್ಯವಾಗಿತ್ತು ಗಂಜಿಯನ್ನು ತಿನ್ನುವ ಮುಗ್ಧ ಮಕ್ಕಳಿಗೆ ಇವರು ಕೊಡುವ ಬೇರೆ ತಿನಿಸುಗಳು, ಅದರಿಂದ ಸಿಗುವ ಸಂತೋಷ ಅಪಾರವಾದದ್ದು. ಆದ್ದರಿಂದಲೇ ಕೊಟ್ಟ ಒಡೆಯ ಇಲ್ಲಿ ಆರಾಧಿಸಲ್ಪಡುತ್ತಾನೆ. ಆದರೆ ಈ

ಖಾದ್ಯಗಳು ತಮ್ಮ ದುಡಿಮೆಯ ಫಲ ಎಂದು ತಿಳಿಯುವುದು ತಡವಾಗಿದೆ. ಅಲ್ಲದೇ ಬಾಲ್ಯದ ನೆನಪಿನಲ್ಲಿ ತಾವು ಕಂಡ ನಿಸರ್ಗದ ಚಿತ್ರಗಳನ್ನು ಅವರು ಕೊಟ್ಟಿದ್ದಾರೆ. ಮರಗಳು, ಸೈಜುಗಲ್ಲುಗಳು, ತಮ್ಮೂರಿನ ಪ್ರಾಣಿಗಳೆಲ್ಲವೂ ಅವರ ಜ್ಞಾಪಕ ಚಿತ್ರಶಾಲೆಯಲ್ಲಿದೆ.

ಶ್ರೀಮಂತರಿಗೆ ಹೊರಗಿನ ಜಗತ್ತಿನ ಹುಡುಕಾಟದಲ್ಲಿ ಹೆಚ್ಚು ಆಸಕ್ತಿ ಇದ್ದಿದ್ದರಿಂದೇನೋ ಹೊರಗೆ ಮಲಗುವುದರ ಸುಖದ ಕುರಿತು ಅವರು ಸ್ವಾರಸ್ಯಕರವಾಗಿ ಬರೆದಿದ್ದಾರೆ.

ಒಮ್ಮೆ ಬರಗಾಲ ಬಂದು ಅನ್ನಕ್ಕಾಗಿ ಜನ ಕಣ್ಣು ಬಿಡುವಂತಾಯಿತು. ಮಳೆ ಬರಲೆಂದು ಜನರು ಅಲ್ಲಲ್ಲಿ 'ಪರ'ವನ್ನು ಮಾಡತೊಡಗಿದಾಗ ಪರಕ್ಕೆ ಹೋದರೆ ಹೊಲೆಯರನ್ನು ಒಂದು ಮೂಲೆಯಲ್ಲಿ ಕೂರಿಸುತ್ತಿದ್ದರು. ಅಂದಿಗಾಗಲೇ ಇಬ್ಬರು ತಂಗಿಯರು ಶಿವಲಿಂಗಮ್ಮ, ಪುಟ್ಟಮ್ಮ ಹುಟ್ಟಿದ್ದರೆಂದು ಕವಿ ಹೇಳುತ್ತಾರೆ. ಇಲ್ಲಿ ಪುಟಗಳನ್ನು ತೆರೆಯುತ್ತಾ ಹೋದಂತೆ ದಲಿತರ ಬದುಕೆಲ್ಲ ಹೇಗೆ ಶತಶತಮಾನಗಳಿಂದ ಅಸಾದಾರಣೆಗೆ ಒಳಗಾಗಿತ್ತು. ಎನ್ನುವುದು ತಿಳಿಯುತ್ತದೆ.

ತಂದೆ ಸಾಲಗಾರರಾಗಿದ್ದರಿಂದ ಬದುಕು ನಡೆಸುವುದೇ ಕಷ್ಟವಾಗಿತ್ತು. ಒಮ್ಮೆ ಯಾವುದೋ ಊರಿನಲ್ಲಿ ತಂದೆ ಕೂಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ಎರಡು ಗುಂಪಿನ ನಡುವೆ ಹೊಡೆದಾಟವಾಗಿತ್ತು. ಪೊಲಿಸರು ಕೆಲವರ ಜೊತೆ ತಂದೆಯನ್ನು ಬಂಧಿಸಿ 'ಅಲ್ಲಿದ್ದುದ್ದಕ್ಕಾಗಿ ಸಾಕ್ಷಿ' ಎಂದು ಗುರ್ತಿಸಿದ್ದರು. ಇದನ್ನು ತಂದೆಯ ಬಾಯಲ್ಲಿ ಕೇಳಿದ್ದೇ ಉಳಿದವರೆಲ್ಲ ಗಾಬರಿಯಿಂದ ದುಃಖಿಸಿದರು. "ನಾವೆಂದೂ ಪೊಲೀಸ್ ಸ್ಟೇಷನ್ ಮೆಟ್ಟಲು ಹತ್ತಿದೋರಲ್ಲ. ನಿಮ್ಮಪ್ಪ ಈಗ ಹೋಗ್ತಾನಲ್ಲಪ್ಪಾ"[3] ಎಂದು ದೊಡ್ಡಪ್ಪ ಹೇಳಿದರು. ಇವರಿಗೂ ಅಳು ಉಕ್ಕಿ ಬಂತು. ಈ ಸನ್ನಿವೇಶ ದಲಿತರ ಜೀವನ ಕ್ರಮ ಹೇಗೆ ಅಸಹನೀಯವಾಗಿತ್ತು ಎಂಬುದನ್ನು ತಿಳಿಸಿಕೊಡುತ್ತದೆ. ಇಷ್ಟೇ ಅಲ್ಲದೆ ಪೋಲೀಸರೆಂದರೆ ದಲಿತರಿಗೆ ಭಯವಿತ್ತು ಎನ್ನುವುದನ್ನು ಇಲ್ಲಿ ಗಮನಿಸಬಹುದು. ಏಕೆಂದರೆ ಪಟ್ಟಭದ್ರ ಹಿಡಿತದ ಶಕ್ತಿಗಳು ಇರುವ ಶ್ರೀಮಂತರು ದಲಿತರನ್ನು ಸಾಕ್ಷಿಯನ್ನಾಗಿಸಿ ಮೋಸಗೊಳಿಸಲು ಯತ್ನಿಸುವರು ಎನ್ನುವ ಭಯ ದಲಿತರಲ್ಲಿ ಸಹಜವಾಗಿಯೇ ಇತ್ತು ಎಂಬ ಅಂಶವನ್ನು ಇಲ್ಲಿ ನೋಡಬಹುದು.

'ಅಭಿನಯ ಕಲೆಯಲ್ಲಿ ಮೊದಲ ಪಾಠ' ಶೀರ್ಷಿಕೆಯಲ್ಲಿ ಸಿದ್ಧಲಿಂಗಯ್ಯನವರ ಪ್ರತಿಭೆಯ ಸಾರ್ವಜನಿಕ ಪ್ರದರ್ಶನ ಮೊದಲು ಪ್ರಾಥಮಿಕ ಶಾಲೆಯಲ್ಲೇ ನಡೆಯುತ್ತದೆ. ಸರ್ಕಾರಿ ಶಾಲೆಯ ಇನ್ಸ್‌ಪೆಕ್ಟರ್ ತುಟಿ ತಿರುಚಿಕೊಂಡಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಬಾಲಕ ಸಿದ್ಧಲಿಂಗಯ್ಯನವರು ಅದೇ ರೀತಿ ಮಾಡಿ ತೋರಿಸಿದಾಗ ಮಾಸ್ತರು ಅಚ್ಚರಿಪಟ್ಟರು. ಮಾಸ್ತರು ಹುಡುಗರು ಕೊಟ್ಟ ಪ್ರೋತ್ಸಾಹದಿಂದ ಉತ್ತೇಜಿತರಾಗಿ ಮತ್ತೆ ಇನ್ಸ್‌ಪೆಕ್ಟರ್‌ರ ಮುಖಭಾವ, ನಡಿಗೆ, ಮಾತನ್ನು ಅನುಕರಿಸಿದರು. ಮಾಸ್ತರರಿಗೆ ನಗು ತಡೆಯಲಾರದೆ ಕಣ್ಣೀರು ಬಂತು. ಅಂತೆಯೇ ಮಾಗಡಿ ಪುರಸಭೆಗೆ ಚುನಾವಣೆಯಲ್ಲಿ ಗೆದ್ದಿದ್ದ ತಮ್ಮ ದೊಡ್ಡಪ್ಪ ಕುದುರೆ ಏರಿ ದಲಿತ ಕೇರಿಗೆ, ಮೆರವಣಿಗೆ ಬಂದದ್ದು ಸಹ ಶ್ರೀಯುತರು ದಾಖಲಿಸಿರುವ ತಮ್ಮ ಮೊದಲ ರಾಜಕೀಯ ನೆನಪು.

ಗಾಢನಿದ್ದೆ ಎಂದರೆ ಸಿದ್ಧಲಿಂಗಯ್ಯನವರಿಗೆ ಬಹಳ ಇಷ್ಟ. "ಯಾರಾದರೂ ಬೆಳ್ಳಂಬೆಳಗ್ಗೆ ಸುಖವಾದ ನಿದ್ದೆ ಬೇಕೋ. ಇಲ್ಲ ಹಣ ಬೇಕೋ ಎಂದು ಕೇಳಿದರೆ ನಾನು ಮೊದಲನೆಯದನ್ನೇ ಆಯ್ದುಕೊಳ್ಳುವೆ"[4] ಎಂದು

ಸಿದ್ಧಲಿಂಗಯ್ಯನವರೇ ಹೇಳುತ್ತಾರೆ. ಈ ಹೇಳಿಕೆಯನ್ನು ರಾಮಚಂದ್ರ ಗುಹಾ ಎನ್ನುವ ಪ್ರಸಿದ್ಧ ಲೇಖಕರು ಡಾ. ಸಿದ್ಧಲಿಂಗಯ್ಯನವರ ಬಗೆಗಿನ ಅಭಿಮಾನದಿಂದ ಅವರ ಆತ್ಮಕಥೆಯಾದ ಊರುಕೇರಿಯನ್ನು ಅಭ್ಯಸಿಸಿ ತಾವು ಗ್ರಹಿಸಿದ್ದನ್ನು ಪ್ರಜಾವಾಣಿಯ ಲೇಖನದಲ್ಲಿ ಹೇಳಿದ್ದಾರೆ.

ಹಾಗೆಯೇ "ನನಗೆ ತಿಳಿದಿರುವಂತೆ ಸಿದ್ಧಲಿಂಗಯ್ಯನವರ ಆತ್ಮಕಥೆಯ ಮೊದಲ ಕಂತನ್ನು ಕೆಲವು ವರ್ಷಗಳ ಹಿಂದೆ ಸಾಹಿತ್ಯ ಅಕಾಡೆಮಿ ಪ್ರಕಟಿಸಿತ್ತು. ಈಗ 'ನವಯಾನ' ಎರಡೂ ಕಂತುಗಳನ್ನು ಒಗ್ಗೂಡಿಸಿ ಸಿದ್ಧಲಿಂಗಯ್ಯನವರ ಆತ್ಮಕಥೆಯನ್ನು ಪ್ರಕಟಿಸಿದೆ. ಎಸ್.ಆರ್. ರಾಮಕೃಷ್ಣರವರ ಕಸುಬುದಾರಿಕೆಯ ಅನುವಾದದಲ್ಲಿ ಕೃತಿ ಮೂಡಿಬಂದಿದೆ. ಇಂಗ್ಲೀಷ್ ಆವೃತ್ತಿಯ ಶೀರ್ಷಿಕೆ 'ಎ ವರ್ಡ್ ವಿತ್ ಯೂ, ವರ್ಲ್ಡ್' ಎಂದಿದೆ ಸಿದ್ಧಲಿಂಗಯ್ಯನವರ ಪದ್ಯವೊಂದರ ಸಾಲಿನಿಂದ ಅದನ್ನು ಹೆಕ್ಕಿಕೊಂಡಿದ್ದು ಡಿ.ಆರ್. ನಾಗರಾಜ್‌ರವರು ವರ್ಷಗಳ ಹಿಂದೆಯೇ ನನಗೆ ಹೇಳಿದಂತೆ ಇದು ಹೃದಯಸ್ಪರ್ಶಿಯಾದ, ತುಂಬಾ ತಮಾಷೆಯ ಸಂಗತಿಗಳಿರುವ ಪುಸ್ತಕ"[5] ಎಂದು ಪ್ರಜಾವಾಣಿ ಲೇಖನದಲ್ಲಿ ರಾಮಚಂದ್ರ ಗುಹಾ ಎಂಬ ಲೇಖಕರು ಬರೆದಿದ್ದಾರೆ.

ಬಾಲಕ ಸಿದ್ಧಲಿಂಗಯ್ಯನವರ ಬದುಕು ಬಾಲ್ಯದಲ್ಲೂ ಹಿಂಸೆಯಿಂದ ಮುಕ್ತವಾಗಿಯೇನೂ ಇರಲಿಲ್ಲ. ಗ್ರಾಮದೇವತೆಯ ಹಬ್ಬದಲ್ಲಿ ಊರಿನ ಜನರ ಬಗೆಬಗೆಯಾದ ಭಾವಗಳನ್ನು 'ಗ್ರಾಮದೇವತೆಗಳು' ಎಂಬ ಇವರ ಪಿ.ಎಚ್.ಡಿ. ಪುಸ್ತಕವೇ ಕಟ್ಟಿಕೊಡುತ್ತದೆ. ಒಂದು ಕಥೆಯಲ್ಲಿ ಯಜಮಾನ ಅಥವಾ ಪೂಜಾರಿ ಪದೇ ಪದೇ ಮೈಮೇಲೆ ಬರುವ ದೇವತೆಯನ್ನು ತರಾಟೆಗೆ ತೆಗೆದುಕೊಳ್ಳುವ ರೀತಿಯನ್ನು ಅವರು ನೆನಪಿಸಿಕೊಂಡು ಬರೆದಿರುವುದು ಹೀಗೆ :–

"ಯಜಮಾನ (ದೇವರನ್ನು ಕುರಿತು): ಇಷ್ಟು ದಿನ ಎಲ್ಲೋಗಿದ್ದೆ?'
ದೇವತೆ : ನಿಮ್ಮೂರು ಒಂದೇನಾ ನನಗೆ ಇರೋದು. ಮೂರು ಲೋಕಾನೂ ನೋಡ್ಕೋಬೇಕಲ್ಲ.
ಯಜಮಾನ : ನಾವೆಷ್ಟು ಕಷ್ಟಪಡತ್ತಾ ಇದ್ದೀವಿ ಗೊತ್ತಾ?
ದೇವತೆ : ನಾನೇನು ಸುಖವಾಗಿದ್ದೇನಾ?"[6]

ಈ ರೀತಿ ದೈವ ಮತ್ತು ಮನುಷ್ಯರ ನಡುವೆ ಸಂಭಾಷಣೆ ಮುಂದುವರಿಯುತ್ತಿತ್ತು. ಇಲ್ಲಿ ದಲಿತರ ಜಾಣ್ಮೆಗೆ, ಅನುಕೂಲತೆಗೆ ತಕ್ಕಂತೆ ಮೈಮೇಲೆ ಬರುವ ದೇವತೆಗಳು ಮೌಢ್ಯ, ಅಜ್ಞಾನ ಮರೆಮಾಚಿಕೊಳ್ಳುವ ಸಂದರ್ಭವನ್ನು ನಿಭಾಯಿಸಲಾಗಿದೆ. ಅಲ್ಲದೆ ಹಳ್ಳಿಯ ದಲಿತ ಜನರ ಮುಗ್ಧತೆ ಸಹಜವಾಗಿಯೇ ಇತ್ತು ಎನ್ನುವುದನ್ನು ಹಾಗೂ ದೈವ ಮತ್ತು ಮನುಷ್ಯ ಇಲ್ಲಿ ಬೇರೆ ಬೇರೆ ಅಲ್ಲ. ಇವರ ಸಾಮೀಪ್ಯ ಒಂದೇ ಬಗೆಯದು ಎನ್ನುವ ಅಸ್ಮಿತೆಯನ್ನು ಇಲ್ಲಿ ಅರ್ಥೈಸಬಹುದು.

ಸಿದ್ಧಲಿಂಗಯ್ಯನವರು ಮಾಗಡಿಯಲ್ಲಿದ್ದಾಗ ಪಕ್ಕದ ಊರಿನಲ್ಲಿ ಒಬ್ಬನ ಮೇಲೆ ಒಂದು ದೇವತೆ ಮೈದುಂಬುತ್ತಿತ್ತು. ಜನ ಅದನ್ನು ಕುರಿದೇವ್ರು ಎಂದು ಕರೆಯುತ್ತಿದ್ದರು. "ದೇವತೆ ಮೈದುಂಬಿದ ಕೂಡಲೇ 'ಕುರಿ ಕುರಿ' ಎಂದು ಆರ್ಭಟಿಸುತ್ತಿತ್ತು. ಭಕ್ತರು ಭಯದಿಂದ 'ಯಾವ ಕುರಿತಾಯಿ' ಎಂದು ಕೇಳುತ್ತಿದ್ದರು. ಆಗ ದೇವತೆ : 'ಯಾವುದಾದರೂ ಒಂದು ಕುರಿ' ಎನ್ನುತ್ತಿತ್ತು".[7] ಭಕ್ತರು ಓಡಿಹೋಗಿ ಸಿಕ್ಕಿದ ಕುರಿಯನ್ನು ಹಿಡಿದು ದೇವತೆಯ ಮುಂದೆ ನಿಲ್ಲಿಸುತ್ತಿದ್ದರು. ದೇವತೆ ಮೈಯಿಳಿದ ನಂತರ ಪೂಜಾರಿ ಮತ್ತು ಭಕ್ತರು ಕುರಿಕೊಯ್ದು ಚೆನ್ನಾಗಿ ಊಟ

ಮಾಡುತ್ತಿದ್ದರು. ಕುರಿ ಕಳೆದುಕೊಂಡವರು ಏನನ್ನೂ ಅನ್ನುವಂತೆಯೂ ಇಲ್ಲ, ಅನುಭವಿಸುವಂತೆಯೂ ಇಲ್ಲ. ಎದುರು ಮಾತನಾಡಿದರೆ ದೇವತೆ ಕೇಡು ಮಾಡೀತು ಎಂಬ ಭಯ. ಒಮ್ಮೆ ಶ್ರೀಯುತರ ಮಾವ ಅಲ್ಲಿಯೇ ಇದ್ದರು. ಭಕ್ತರು ಯಥಾಪ್ರಕಾರ ಹತ್ತಿರದಲ್ಲಿ ಸಿಕ್ಕಿದ ಕುರಿ ಹಿಡಿದು ತಂದರು. ಯಾಕೋ ದೇವತೆ 'ಈ ಕುರಿ ನನಗೆ ಬೇಡ, ಬೇರೆ ಕುರಿ ತನ್ನಿ' ಎಂದಿತು. ದೇವತೆ ಹೀಗೆ ಹೇಳಿದ್ದು ಅದೇ ಮೊದಲ ಸಲ. ಜನ ಚಕಿತಗೊಂಡರು. ತಮ್ಮಿಂದ ತಪ್ಪೇನಾದರೂ ಆಗಿರಬಹುದೆಂದು 'ಯಾಕೆ ಬೇಡ ತಾಯಿ?' ಎಂದು ದೈನ್ಯದಿಂದ ಕೇಳಿದರು. ಸ್ವೀಕರಿಸುವಂತೆ ಪರಿಪರಿಯಾಗಿ ಬೇಡಿದರು. ದೇವತೆ ಯಾವುದಕ್ಕೂ ಜಗ್ಗಲಿಲ್ಲ. 'ಈ ಕುರಿ ಬೇಡ ಅಂದರೆ ಬೇಡ' ಎಂದು ಕಡ್ಡಿ ಎರಡು ತುಂಡು ಮಾಡಿದಂತೆ ಹೇಳಿತು. ಸಮಸ್ಯೆ ಬಗೆಹರಿಯಲಿಲ್ಲ. ಮಾವ ಊರಿನವರನ್ನು ಈ ಕುರಿ ಯಾರದು? ಎಂದು ಕೇಳಿದರು. ಒಬ್ಬ ವ್ಯಕ್ತಿ 'ಇದು ದೇವತೆ ಮೈದುಂಬಿದ ಪೂಜಾರಿಯದು' ಎಂದ..

ಓ ಇದು ಪೂಜಾರಿಯ ಕುರಿಯಾದ್ದರಿಂದ ಬೇಡ ಎನ್ನುತ್ತಿದ್ದಾನೆ ಎಂದು ಜನಕ್ಕೆ ಆಗ ಮನವರಿಕೆಯಾಯಿತು. ಇಲ್ಲಿ ದೇವರು ಮೈದುಂಬುವುದು ಕುರಿ ತಿನ್ನಲು ಮಾಡುವ ನಾಟಕ ಎಂದು ಎಲ್ಲರಿಗೂ ತಿಳಿಯಿತು. ಇಲ್ಲಿ ಆ ವ್ಯಕ್ತಿಯು ಊಟದ ಬಯಕೆಗಾಗಿ ದೇವತೆ ಬರುತ್ತದೆ ಎನ್ನುವ ನಾಟಕವಾಡುತ್ತಿದ್ದನು ಎನ್ನುವ ಅಂಶವನ್ನು ಗಮನಿಸಬಹುದು. ಹೀಗೆ ಮನುಷ್ಯ ಸ್ವಭಾವಗಳ ಚಿತ್ರಣ ಕಟ್ಟಿಕೊಟ್ಟಾಗ ನಾಗರೀಕತೆಯ ವಿಕಾಸದ ಹಂತದಲ್ಲಿ ಸಾಗಿ ಬಂದು ರೀತಿಯನ್ನು ಗುರುತಿಸಬಹುದು ಹಾಗೆಯೇ ಮಾನವ ಶಾಸ್ತ್ರದ ಹಿನ್ನಲೆಯಿಂದ ಮನುಷ್ಯರ ಈ ವರ್ತನೆಗಳನ್ನು ವಿಶ್ಲೇಷಿಸಬೇಕಾಗುತ್ತದೆ ಮತ್ತು ಈ ಘಟನೆಯಿಂದ ಜನರು ಹೇಗೆ ಮೌಢ್ಯತೆಗೊಳಗಾಗಿದ್ದರು ಎನ್ನುವದನ್ನು ಇಲ್ಲಿ ಗುರ್ತಿಸಲಾಗಿದೆ.

ಬೆಂಗಳೂರಿಗೆ ಬಂದ ಹೊಸತರಲ್ಲಿ ಡಾ. ಸಿದ್ಧಲಿಂಗಯ್ಯನವರು ಬಂದು ಉಳಿದದ್ದು ಶ್ರೀರಾಮಪುರದಲ್ಲಿ. ಆಗ ಶ್ರೀರಾಮಪುರ ಈಗಿನಂತಿರಲಿಲ್ಲ. ಆಗ ಅದೊಂದು ಸುಂದರ ಸ್ಥಳ. ಇವರಿದ್ದ ಕೇರಿಯಲ್ಲಿ ಮನೆಗಳ ಮುಂದೆ ಬಾಳೆ, ನುಗ್ಗೆ, ಪರಂಗಿ ಗಿಡಗಳನ್ನು ಬೆಳೆಸಿದ್ದರು. ಇಲ್ಲಿಗೆ ಬಂದ ಹೊಸದರಲ್ಲೇ ಅವರ ಬೀದಿಯಲ್ಲಿ ಒಂದು ವಿಚಿತ್ರ ಜಗಳ ನಡೆಯುತ್ತದೆ. ಈ ಎಲ್ಲಾ ಸಾಮಾಜಿಕ ಸಂಗತಿಗಳ ನಡುವೆ ಶ್ರೀಯುತರು ಬದುಕನ್ನು ಕಟ್ಟಿಕೊಂಡ ರೀತಿ ಎಷ್ಟು ಕಷ್ಟಕರವಾಗಿತ್ತು ಎನ್ನುವ ಅಂಶವನ್ನು ಇಲ್ಲಿ ಕಾಣಬಹುದು. ಇದರ ಜೊತೆಗೆ ಕೇಳದ–ಕಾಣದ ಸಂಗತಿಗಳು ನಂತರ ಆ ಕೇರಿಯಲ್ಲಿ ನಡೆಯತೊಡಗಿದವು. ಕಳ್ಳರು ಆ ಕೇರಿಯ ಒಬ್ಬ ಮನುಷ್ಯನಿಗೆ ರಾತ್ರಿಯ ವೇಳೆ ಚೆನ್ನಾಗಿ ಹೊಡೆದ ರೀತಿಗೆ ಆ ವ್ಯಕ್ತಿ ಏಳಲೂ ಶಕ್ತಿ ಇರಲಿಲ್ಲ. ಅವನಲ್ಲಿದ್ದ ಇದ್ದಬದ್ದ ಹಣವನ್ನು ಕಿತ್ತುಕೊಂಡು ಮೋರಿಗೆ ತಳ್ಳಿ, ಕಳ್ಳರು ಹೊರಟು ಹೋಗಿದ್ದರು.

ಇವರ ಕೇರಿಯ ಸುತ್ತಮುತ್ತ ಬಹಳ ರೌಡಿಗಳಿದ್ದರು. ಅವರು ಇದ್ದಕ್ಕಿದ್ದಂತೆ ಯಾರ ಮೇಲಾದರೂ ಎರಗಿ ಬೀಳುತ್ತಿದ್ದರು. ಸಣ್ಣಪುಟ್ಟ ಕಳ್ಳತನಗಳಲ್ಲಿ ಭಾಗವಹಿಸುತ್ತಿದ್ದರು. ಇದರ ಜೊತೆಗೆ ಶ್ರೀರಾಮಪುರದ ಇವರಿದ್ದ ಕೇರಿಯಲ್ಲೇ ಕಾಲರಾ ಕಾಣಿಸಿಕೊಂಡಿತು. ಜನಗಳು ಕಂಗಾಲಾದರು. ಮೇಗಳ ಹಟ್ಟಿಯ ಮನೆಯಲ್ಲಿ ಹೆಂಗಸೊಬ್ಬಳು ಒಂದು ದಿನ ಸಂಜೆ ಬಿಳಿ ಸೀರೆ ರವಿಕೆ ತೊಟ್ಟು ಹಣೆಯ ತುಂಬ ಕುಂಕುಮ ಇಟ್ಟುಕೊಂಡಿದ್ದಾಳೆಂದು ಸುದ್ದಿ ಹಬ್ಬಿತು. ಇವರ ಪರಿಚಯ ಅಲ್ಲಿದ್ದ ಇತರರಿಗೆ ಇರಲಿಲ್ಲವಾದ್ದರಿಂದ ಅವಳು ಮಾರಮ್ಮ ಇರಬೇಕೆಂದು ತೀರ್ಮಾನಿಸಿ ಮನೆಮನೆಗೂ ಚಂದಾ ಎತ್ತಿ ದೇವತೆಯ ಹಬ್ಬ ಮಾಡಿದರು. ಹಬ್ಬದ

ನಡುವೆ ದೇವತೆ ಒಬ್ಬನ ಮೈದುಂಬಿತು. ಆಗ ಜನ "ನಮಗೆ ಕಾಲರಾ ಯಾಕೆ ತಂದಿರುವೆ ತಾಯಿ ಎಂದು ಕೇಳಿದರೂ ದೇವತೆ ಮಾತಾಡಲಿಲ್ಲ. ಜನ ಮಾತನಾಡುವಂತೆ ಒತ್ತಾಯಿಸಿದರೂ ದೇವತೆಯ ಕಣ್ಣಲ್ಲಿ ಕಣ್ಣೀರು ಮಾತ್ರ ಬರುತ್ತಿತ್ತು. ಜನ ಕಲಿಕಾಲವೆಂದು ಸುಮ್ಮನಾದರು"[8]. ಹೀಗೆ ನಾನಾ ರೀತಿಯ ದೇವತೆಗಳ ಕಾಟಕ್ಕೂ ಜನ ಒಳಗಾಗಿದ್ದರು. ಇದರ ಸತ್ಯಾಸತ್ಯತೆಯನ್ನು ಪರಾಮರ್ಶಿಸಿದವರು ಯಾರೂ ಇಲ್ಲ. ಇದಕ್ಕೆ ಕಾರಣ ಶಿಕ್ಷಣದ ಕೊರತೆ, ಅಜ್ಞಾನ ಹಾಗೂ ಮುಗ್ಧತೆಯ ಅಂಶ. ಹಾಗಾಗಿ ಇಲ್ಲಿನ ಜನರಿಗೆ ಮೌಢ್ಯತೆ ಯಾವ ಪರಮಾವಧಿ ತಲುಪಿತ್ತು ಎಂಬುದನ್ನು ಈ ಘಟನೆ ಮೂಲಕ ಗುರ್ತಿಸಲಾಗಿದೆ.

ಅಂತೆಯೇ ಬೆಂಗಳೂರು ನಗರದಲ್ಲಿ ಹುಡುಗಾಟದ ದಿನಗಳು ಶೀರ್ಷಿಕೆಯಲ್ಲಿ ನಡೆದ ಘಟನೆ ಈ ರೀತಿ ಇದೆ.

ಬೆಂಗಳೂರಿನಲ್ಲಿ ಸಿದ್ಧಲಿಂಗಯ್ಯನವರು ವಾಸವಿದ್ದ ಕೇರಿಯಲ್ಲಿದ್ದ ಹುಡುಗರು ಬಹಳ ಚೂಟಿಯಾಗಿದ್ದರು. ಹಳ್ಳಿಯಿಂದ ಬಂದ ಇವರಿಗೆ ಗೊತ್ತಿಲ್ಲದ ಹಲವು ಸಂಗತಿಗಳು ಆ ಹುಡುಗರಿಗೆ ಗೊತ್ತಿದ್ದವು. ಆಷಾಢದಲ್ಲಿ ಹುಡುಗರು ಗಾಳಿಪಟ ಬಿಡುತ್ತಿದ್ದರು. ಒಳ್ಳೆ ಪಟ ಮಾಡಿ ಬಾಲಂಗೋಸಿ ಹಾಕಿ ದಾರ ಕಟ್ಟಿ ಬಿಟ್ಟರೆ ವಿಮಾನದಂತೆ, ರಾಕೆಟ್ಟಿನಂತೆ, ಮೇಲೆ ಹೋಗಿ ಹಾರಾಡುತ್ತಿತ್ತು. ಶ್ರೀಯುತರ ಮನೆಯ ಮುಂದೆ ಒಂದು ದೊಡ್ಡ ಮೋರಿ ಇತ್ತು. ಇವರು 'ನಮಗೆ ಆ ಮೋರಿಯೇ ಪವಿತ್ರ ಗಂಗಾ' ಎನ್ನುತ್ತಾರೆ. ಇದು ಮಳೆಗಾಲದಲ್ಲಿ ತುಂಬಿ ಹರಿಯುತ್ತಿತ್ತು. ನಾನಾ ಬಗೆಯ ವಸ್ತುಗಳು ತೇಲಿ ಬರುತ್ತಿದ್ದವು. ಬಣ್ಣದ ಕಾಗದ, ಹಾವು, ಮೀನು, ಮೊಟ್ಟೆ, ತೆಂಗಿನ ಗರಿ ಎಲ್ಲಾ ವಸ್ತುಗಳು ತೇಲಿಬರುತ್ತಿದ್ದವು. ನೀರು ಕಡಿಮೆಯಾದಾಗ ಕೊಚ್ಚೆ ಹರಿಯುವ ದೊಡ್ಡ ಚರಂಡಿಯಾಗುತ್ತಿತ್ತು. ಅದರಿಂದ ಕೆಟ್ಟ ವಾಸನೆ ಬಂದರೂ ಮೋರಿಯ ಮೇಲಿನ ಮಮತೆ ನಮಗೆ ಕಡಿಮೆಯಾಗಿರಲಿಲ್ಲ ಎಂದು ಶ್ರೀಯುತರು ಹೇಳುತ್ತಾ ತಮ್ಮ ಬಾಲ್ಯದ ದಿನಗಳ ನೆನಪನ್ನು ಮಾಡಿಕೊಳ್ಳುತ್ತಾರೆ. ಆ ಮಣ್ಣಿನಲ್ಲಿ ಪುಟ್ಟ ಪುಟ್ಟ ತಾಮ್ರ, ಹಿತ್ತಳೆಯ ಚೂರು ಸಿಗುತ್ತಿದ್ದವು. ಅದನ್ನು ಸಂಗ್ರಹಿಸಿ ಪಾಕಂಪಪ್ಪಿನವರಿಗೆ ಕೊಟ್ಟು ಪಾಕಂಪಪ್ಪನ್ನು ತಿನ್ನುತ್ತಿದ್ದೆವು. ಹಾಗೆ ಆ ಮೋರಿಯಲ್ಲಿ ಇನ್ನು ಅಮೂಲ್ಯವಾದ ವಸ್ತುಗಳು ಸಿಗಬಹುದೆಂಬ ಭಾವನೆಯಿಂದ ಆ ಮೋರಿ ಒಳಗಿಳಿದು ಬಹುದೂರ ಸಾಗುತ್ತಿದ್ದೆವು. ಪೂರ್ವಕ್ಕೆ ಹೋದರೆ ಮೆಜೆಸ್ಟಿಕ್, ಪಶ್ಚಿಮಕ್ಕೆ ಹೋದರೆ ನವರಂಗ್ ಟಾಕೀಸ್ ಸಿಗುತ್ತಿತ್ತು. ಆ ಟಾಕೀಸನ್ನೇ ಒಂದು ರೌಂಡ್ ಹೊಡೆದು ಕಟ್ಟಡವನ್ನೇ ಕುತೂಹಲದಿಂದ ನೋಡುತ್ತಿದ್ದೆವು. ಇವನ್ನೆಲ್ಲಾ ಗಮನಿಸಿದ ಇವರ ತಂದೆಯು ಮಗ ಪೋಲಿ ಹುಡುಗರ ಜೊತೆ ಸೇರಿ ಹಾಳಾಗುತ್ತಾನೆಂದು ಭಾವಿಸಿ, ಸರಿದಾರಿಗೆ ತರಲು ಒಂದು ಉಪಾಯ ಮಾಡಿದರು. ರಾತ್ರಿ ಶಾಲೆಗೆ ಸೇರಿಸಿದರು. "ಬೆಂಗಳೂರಿನಲ್ಲಿ ಹಗಲು ಶಾಲೆಯನ್ನು ಸೇರುವ ಮೊದಲೇ ನಾನು ರಾತ್ರಿ ಶಾಲೆಯನ್ನು ಸೇರುವಂತಾಯಿತು"[9]. ಎಂದು ತಮ್ಮ ಹುಡುಗಾಟದ ದಿನಗಳ ನೆನಪು ಮಾಡಿಕೊಳ್ಳುತ್ತಾರೆ. ಇಲ್ಲಿ ಶ್ರೀಯುತರ ತಂದೆಗೆ ಇದ್ದಂತಹ ಬದ್ಧತೆ, ಮಗನನ್ನು ಅಕ್ಷರಸ್ಥನನ್ನಾಗಿ ಮಾಡಬೇಕು ಎನ್ನುವ ಹಂಬಲ ಎಷ್ಟು ಪ್ರಾಮಾಣಿಕವಾಗಿತ್ತು ಎನ್ನುವ ಅಂಶವನ್ನು ಇಲ್ಲಿ ಮನಗಾಣಬಹುದು. ದಲಿತರಿಗೂ ಕನಸುಗಳಿವೆ ಮತ್ತು ಮಕ್ಕಳಿಗೆ ಬದುಕನ್ನು ಕಟ್ಟಿಕೊಡುವ ಆಸೆ ಇದೆ ಎನ್ನುವುದು ಸಹ ಇಲ್ಲಿ ಅರಿವಾಗುತ್ತದೆ. ಮುಂದುವರಿದು ವಿದ್ಯಾಭ್ಯಾಸದ ಬಗ್ಗೆ ಹೇಳಿಕೊಳ್ಳುತ್ತಾರೆ.

ಶ್ರೀಯುತರು 1, 2ನೇ ತರಗತಿಯನ್ನು ಮಾಗಡಿ ಮಂಚನಬಲೆಯಲ್ಲಿ ಮುಗಿಸಿದ್ದರು. ಬೆಂಗಳೂರಿಗೆ ಬಂದ ನಂತರ ಶ್ರೀರಾಮಪುರದ ಹತ್ತಿರವೇ ಇದ್ದ ಒಂದು ಸರ್ಕಾರಿ ಪ್ರಾಥಮಿಕ ಶಾಲೆಗೆ ನೇರವಾಗಿ 3ನೇ ತರಗತಿಗೆ ಸೇರಿದರು. ಇವರ ತಂದೆ ಬೆಂಗಳೂರಿನಲ್ಲಿ ರಾಜಾಮಿಲ್ಲಿನಲ್ಲಿ ಬದಲಿ ಕೆಲಸ ಮಾಡುತ್ತಿದ್ದರು. ರಾಜಾಮಿಲ್ಲಿನ ಗೇಟಿಗೆ ಹೋಗಿ ನಿಂತಾಗ ಯಾರಾದರೂ ಖಾಯಂ ಕೆಲಸಗಾರರು ಗೈರು ಹಾಜರಾಗಿದ್ದರೆ ಮಿಲ್ಲಿನವರು ಹೊರಗೆ ಕಾಯುತ್ತಿದ್ದ ಬದಲಿ ಕೆಲಸದವರನ್ನು ಕೆಲಸಕ್ಕೆ ಕರೆಯುತ್ತಿದ್ದರು. ಹೀಗೆ ಕೆಲಸ ಮಾಡಿದ ಒಂದು ದಿನ ಕಾರ್ಡಿನಲ್ಲಿ ಟಿಕ್ ಮಾಡುತ್ತಿದ್ದರು. ನನ್ನ ತಂದೆಗೆ ತಿಂಗಳಿನಲ್ಲಿ ಕೆಲವು ದಿನವಾದರೂ ಕೆಲಸ ಸಿಗುತ್ತಿದ್ದುದರಿಂದ ಜೀವನಕ್ಕೆ ಸ್ವಲ್ಪ ಅನುಕೂಲವಾಗಿತ್ತು. ಆದರೆ ಒಮ್ಮೆ ರಾಜಾಮಿಲ್ಲಿನಲ್ಲಿ ಕಾರ್ಮಿಕರ ಚಳುವಳಿ ನಡೆದು ಮಿಲ್ಲನ್ನು ಮಾಲೀಕರು ವರ್ಷಗಟ್ಟಲೆ ಮುಚ್ಚಿದ್ದರಿಂದ ಊಟಕ್ಕೆ ತೊಂದರೆಯಾಯಿತು. ನಂತರ "ತಂದೆ ಅಕ್ಕಪಕ್ಕದ ಸೌದೆ ಡಿಪೋಗಳಲ್ಲಿ ನಿತ್ಯವೂ ಸೌದೆ ಒಡೆಯುತ್ತಿದ್ದರು. ಆಗ ಬಹುಪಾಲು ಜನ ಅಡುಗೆ, ಸ್ನಾನ ಪ್ರತಿಯೊಂದಕ್ಕೆ ಸೌದೆಯನ್ನೇ ಬಳಸುತ್ತಿದ್ದರಿಂದ ಡಿಪೋಗೆ ಸೌದೆ ಕೊಳ್ಳಲು ಬಂದೇ ಬರುತ್ತಿದ್ದರು. ತಂದೆ ದಿಮ್ಮಿಗಳನ್ನು ಹೊಳಕೆ ಮಾಡಿ ಆ ಸೀಳುಗಳನ್ನು ಹೊರೆಕಟ್ಟಿ ಅವರ ಮನೆಗೆ ಹೊತ್ತುಕೊಂಡು ಹೋಗಿ ತಲುಪಿಸುತ್ತಿದ್ದರು. ಈ ಕೆಲಸಕ್ಕೆ 1 ಕಿಲೋ ಸೌದೆಗೆ 10 ಪೈಸೆ ಸಿಗುತ್ತಿತ್ತು. ನಮ್ಮ ಕುಟುಂಬ ನಡೆಯಲು ಇದೇ ಜೀವನಾಧಾರ"[10].

ತಂದೆ ಇಷ್ಟು ಕಷ್ಟಪಟ್ಟು ಬಡತನದಲ್ಲಿ ಬಳಲುತ್ತಿದ್ದರೂ ಜೀವನ ಸಾಗಿಸುತ್ತಿದ್ದ ರೀತಿ ಸಿದ್ಧಲಿಂಗಯ್ಯನವರ ಮನಸ್ಸಿಗೆ ನೋವು ತರುತ್ತಿತ್ತು. ಜೊತೆಗೆ ಇವರ ಕುಟುಂಬವರ್ಗದವರೆಲ್ಲರ ಸಹಕಾರ, ಪ್ರೋತ್ಸಾಹ, ಶ್ರೀಯುತರು ಓದಲು ಪ್ರೇರೇಪಿಸುವಂತಿದ್ದವು. ಹೀಗೆ ಬಡತನ, ಹಸಿವಿನಲ್ಲೇ ಬೆಳೆದ ಶ್ರೀಯುತರಿಗೆ ಸಹಜವಾಗಿಯೇ ಇದರಿಂದ ಹೇಗಾದರೂ ಮಾಡಿ ಹೊರಬರಬೇಕೆಂದು ತಾವು ಕೂಡ ಬಾಲ್ಯದಿಂದಲೇ ಶಿಕ್ಷಣದ ಜೊತೆಗೆ ದುಡಿಮೆಯ ಸಂಸ್ಕೃತಿಯನ್ನು ಗೌರವಿಸಿದರು. ಮುಂದೆ ಸಿದ್ಧಲಿಂಗಯ್ಯನವರು ಚೆನ್ನಾಗಿ ಓದಿಕೊಳ್ಳಲು ಸತತ ಅಭ್ಯಾಸ ಮಾಡತೊಡಗಿದನು. ಮುಂದೆ ಬೆಂಗಳೂರಿನ ದಲಿತರ ಹಾಸ್ಟೆಲ್‌ನಲ್ಲಿ ಸೇರಿದರು. ಹೀಗೆ ಅಲ್ಲಿ ನಡೆಯುವ ಘಟನಾವಳಿಗಳನ್ನು ಪುಸ್ತಕದ ಅನೇಕ ಅಧ್ಯಾಯಗಳು ಒಳಗೊಂಡಿರುವುದನ್ನು–ಇವರ ಆತ್ಮಕಥನ ಅಭ್ಯಸಿಸಿದಾಗ ತಿಳಿದುಬರುತ್ತದೆ.

ಹಲವಾರು ವರ್ಷಗಳ ಕಾಲ ಹಾಸ್ಟೆಲ್‌ನಲ್ಲೇ ವಾಸ ಮಾಡಿದಾಗ ಅಲ್ಲಿನ ಪರಿಸ್ಥಿತಿಯೂ ಕೆಟ್ಟದಾಗಿತ್ತು. ತಮ್ಮ ಕೋಣೆಯನ್ನು 40 ವಿದ್ಯಾರ್ಥಿಗಳ ಜೊತೆಗೆ ಅವರು ಹಂಚಿಕೊಂಡಿದ್ದರು. ಎಷ್ಟೇ ನೋವು, ಬಡತನ ಹಸಿವಿದ್ದರೂ ನಗುತ್ತಾ ಇರುವುದನ್ನು ಕಲಿತಿದ್ದರು. ಕುಟುಂಬ ನಿರ್ವಹಣೆಗಾಗಿ ಅವರ ತಾಯಿಯು ಶ್ರೀರಾಮಪುರದ ದಲಿತ ವಿದ್ಯಾರ್ಥಿನಿಲಯದಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. "ಈ ಹಾಸ್ಟೆಲ್ ಹೆಸರು 'ಆರ್. ಗೋಪಾಲಸ್ವಾಮಿ ಅಯ್ಯರ್' ವಿದ್ಯಾರ್ಥಿನಿಲಯ. ಒಟ್ಟು 300 ವಿದ್ಯಾರ್ಥಿಗಳಿದ್ದರು. ಡಿ. ವೆಂಕಟಯ್ಯ ಇದರ ಮೇಲ್ವಿಚಾರಕರು. ಇಲ್ಲಿಯೇ ಶ್ರೀಯುತರು ಸೇರಿಕೊಂಡರು"[11]. ಹಾಸ್ಟೆಲ್‌ನ ಹಿಂದೆ ಇವರು ಓದುತ್ತಿದ್ದ ಮಾಧ್ಯಮಿಕ ಶಾಲೆಯಿತ್ತು.

ಓದುವ ಜೊತೆಗೆ ಈ ವಿದ್ಯಾರ್ಥಿ ದೆಸೆಯಲ್ಲೇ ಭಾಷಣ ಮಾಡುವುದನ್ನು ಕಲಿಯಲು ತಮ್ಮ ಇನ್ನೊಬ್ಬ ದೊಡ್ಡಪ್ಪ ಗಂಗಮಾಳಗಯ್ಯ ಸಹಾಯ ಹಸ್ತ ನೀಡಿದರು. ಇವರು ವಿದ್ಯಾವಂತರಾಗಿದ್ದರು. ಇವರನ್ನು ಕಂಡರೆ ಬಂಧುಗಳಿಗೆಲ್ಲ ಭಯ, ಗೌರವವಿತ್ತು. ಡಾ. ಸಿದ್ಧಲಿಂಗಯ್ಯನವರು ಮಾತ್ರ ಅತ್ತೆಯ ಮನೆಗೆ ಹೋದಾಗ

ದೊಡ್ಡಪ್ಪನವರ ಎದುರಿಗೇ ಕೂರುತ್ತಿದ್ದರು. ಇವರು ಚೂಟಿಯಾಗಿ ಮಾತಾಡುವುದನ್ನು ನೋಡಿ ದೊಡ್ಡಪ್ಪ ಶ್ರೀಯುತರಿಗೆ ಭಾಷಣ ಮಾಡುವುದನ್ನು ಹೇಳಿಕೊಟ್ಟರು. ಹಂಡೆ, ಗುಂಡಿ, ಬಿಂದಿಗೆ, ತಣಿಗೆಗಳನ್ನೇ ಸಭಿಕರೆಂದು ಭಾವಿಸಿ "ಮಾನ್ಯ ಹಂಡೆಯವರೇ, ಮಾನ್ಯ ಗುಂಡಿಯವರೇ, ಮಾನ್ಯ ಬಿಂದಿಗೆಯವರೇ"[12] ಎಂದು ಅಭ್ಯಾಸ ಮಾಡಲು ಹೇಳಿದರು. ಇದನ್ನು ಹೀಗೆ ಅಭ್ಯಾಸ ಮಾಡಿದರೆ ಮುಂದೆ ವೇದಿಕೆಯಲ್ಲಿ ಭಾಷಣ ಮಾಡುವ ಕಲೆ ಬರುತ್ತದೆ ಎನ್ನುವ ಕಾರಣಕ್ಕೆ ದೊಡ್ಡಪ್ಪ ಈ ರೀತಿಯಾಗಿ ಮನೆಯ ಪಾತ್ರೆಗಳನ್ನೇ ಉದ್ದೇಶಿಸಿ ಮಾತಾಡಲು ಹೇಳಿಕೊಟ್ಟರು ಎಂಬುದನ್ನು ಇಲ್ಲಿ ಮನಗಾಣಬಹುದು. ಎಷ್ಟು ಮಂದಿಗೆ ಈ ತರಹದ ತರಬೇತಿ ಸಿಗುತ್ತದೆ, ಈ ಅವಶ್ಯಕತೆ ಇದೆ, ಇರುವ ವ್ಯವಸ್ಥೆಯನ್ನು ಬಳಸಿಕೊಂಡು ಮಕ್ಕಳಿಗೆ ಈ ತರಬೇತಿ ಹೇಗೆ ಮಾದರಿಯಾಗಿ ನಿಲ್ಲುತ್ತದೆ ಎನ್ನುವ ಅಸ್ಮಿತೆಯನ್ನು ಇಲ್ಲಿ ಕಾಣಬಹುದು.

ಆರ್. ಗೋಪಾಲಸ್ವಾಮಿ ಅಯ್ಯರ್ ದಲಿತ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಲ್ಲಿ ಹಲವರು ರಾಜ್ಯದ ನಾನಾ ಊರುಗಳಿಂದ ಬಂದವರಾಗಿದ್ದರು. ಕೊಳ್ಳೆಗಾಲ, ಮಾಂಬಳ್ಳಿ, ಮಳವಳ್ಳಿ ಹೀಗೆ ಬೆಂಗಳೂರಿನ ಗ್ರಾಮಾಂತರ ಜಿಲ್ಲೆಯಿಂದ ಬಂದಿದ್ದರು. ಈ ವಿದ್ಯಾರ್ಥಿನಿಲಯದ ಕಟ್ಟಡ ಬಹಳ ದೊಡ್ಡದಾಗಿತ್ತು. ಇದರ ಮುಂದೆ 4 ಎಕರೆ ಮೈದಾನವಿತ್ತು. ರಸ್ತೆಯ ಬದಿಗೆ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಪೋಲೀಸ್ ಸ್ಟೇಷನ್ ಇತ್ತು. ರಾತ್ರಿ ಹೊತ್ತು ಪೋಲೀಸ್ ಸ್ಟೇಷನ್ನಿನಿಂದ ವಿಕಾರದ ಧ್ವನಿಗಳು ಕೇಳಿಬರುತ್ತಿದ್ದವು. ಇವು ಬಂಧಿತರಿಗೆ ಪೋಲೀಸರ ಹೊಡೆತದ ಫಲ .

ಜೊತೆಗೆ ಈ ವಿದ್ಯಾರ್ಥಿನಿಲಯದಲ್ಲಿ ರಾಷ್ಟ್ರೀಯ ದಿನಾಚರಣೆಗಳನ್ನು ಆಚರಿಸುತ್ತಿದ್ದರು. ಸಮಾರಂಭದಲ್ಲಿ ಎಸ್. ನಿಜಲಿಂಗಪ್ಪ, ಬಿ. ರಾಚಯ್ಯ, ನಾಗಪ್ಪ ಆಳ್ವ ಮುಂತಾದ ಮುಖಂಡರು ಮಕ್ಕಳನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದರು. ಆರ್.ಭರಣಯ್ಯ, ಕೆ.ಭೀಮಯ್ಯ, ಸಿದ್ದಾರ್ಥ ಅರಕೇರಿಯವರ ಭಾಷಣಗಳನ್ನು ಕೇಳಿ ಸಿದ್ಧಲಿಂಗಯ್ಯನವರು ಸೇರಿದಂತೆ ಜೊತೆಯಲ್ಲಿದ್ದ ಗೆಳೆಯರೆಲ್ಲರೂ ಪುಳಕಿತರಾಗುತ್ತಿದ್ದರು. ಇಲ್ಲಿ ಶ್ರೀಯುತರು ಭಾಷಣ ಮಾಡುವ ವೈಖರಿಯನ್ನು ಕಲಿಯಲು ಇಂಥ ಮಹಾತ್ಮರ ಭಾಷಣಗಳು ಹೇಗೆ ಪೂರಕವಾದವು ಎಂಬ ಅಂಶವನ್ನು ಇಲ್ಲಿ ಗುರ್ತಿಸಬಹುದು. ದಲಿತ ವಿದ್ಯಾರ್ಥಿಗಳಿಗೆ ಹೀಗೆ ಆಸರೆಯಾಗಿ ನಿಂತ ಇವರು ಆ ಜಗತ್ತಿನಲ್ಲಿ ಮಾಸದ ನೆನಪಾಗಿ ಉಳಿದಿದ್ದಾರೆ ಎನ್ನುವ ಅಂಶಗಳನ್ನು ಇಲ್ಲಿ ಗ್ರಹಿಸಲಾಗಿದೆ.

ಅಂತೆಯೇ ಈ ಗೋಪಾಲಸ್ವಾಮಿ ವಿದ್ಯಾರ್ಥಿನಿಲಯದ ದಲಿತ ವಿದ್ಯಾರ್ಥಿಗಳಿಗೆ ಶ್ರೀನಿವಾಸಯ್ಯ ಎನ್ನುವ ಗುರುಗಳು ಸಹ ಬೋಧನೆ ಮಾಡುತ್ತಿದ್ದರು. ಗಣಿತ ಮತ್ತು ವಿಜ್ಞಾನದಲ್ಲಿ ಪರಿಣಿತರಾದ ಇವರು ಮಕ್ಕಳಿಗೆ ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಯಲ್ಲೂ ಬೋಧಿಸುತ್ತಿದ್ದರು. ಏಕೆಂದರೆ ದಲಿತ ವಿದ್ಯಾರ್ಥಿಗಳು ಇಂಗ್ಲಿಷ್‌ನಲ್ಲಿ ಅಷ್ಟು ಅಭ್ಯಾಸವನ್ನು ಮಾಡಿರಲಿಲ್ಲ. ಕಾರಣ ಬಡತನ, ಆರ್ಥಿಕ ಸಮಸ್ಯೆ, ಕುಟುಂಬದ ಪರಿಸ್ಥಿತಿ. ಶ್ರೀಯುತರು ಸೇರಿದಂತೆ ಅನೇಕ ವಿದ್ಯಾರ್ಥಿಗಳು ಇವರಿಂದ ಶಿಕ್ಷಣವನ್ನು ಪಡೆದಿದ್ದಾರೆ. ಶ್ರೀನಿವಾಸಯ್ಯ ಗುರುಗಳು ಬಾಡಿಗೆ ಮನೆಯಲ್ಲಿ ವಾಸವಾಗಿದ್ದು ಮನೆಗೆ ಬಂದ ವಿದ್ಯಾರ್ಥಿಗಳಿಗೂ ಬೋಧಿಸುತ್ತಿದ್ದರು. ಇವರಿಂದ ಅಂದಿನ ಕಾಲಕ್ಕೆ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಐಎಎಸ್, ಐಪಿಎಸ್ ಅಧಿಕಾರಿಗಳು ಆಗಿರುವುದು ಗಮನಾರ್ಹ ಸಂಗತಿ.

ಒಮ್ಮೆ ವಿದ್ಯಾರ್ಥಿನಿಲಯದ ಸಮಾರಂಭಕ್ಕೆ ಆರ್. ಭರಣಯ್ಯ ಅತಿಥಿಯಾಗಿ ಬಂದಿದ್ದರು. ಆರ್. ಭರಣಯ್ಯನವರು ಅಮೆರಿಕಕ್ಕೆ ಹೋಗುವ ಸಂದರ್ಭದಲ್ಲಿ ಒಂದು ಸಮಾರಂಭ ಏರ್ಪಡಿಸಲಾಗಿತ್ತು. ಅನೇಕ ಹಿರಿಯರು ಮಾತನಾಡಿದರು. ಭಾಷಣಕಾರರೊಬ್ಬರು ಭರಣಯ್ಯನವರನ್ನು ಭರಣೀ ಮಳೆಗೆ ಹೋಲಿಸಿದರು. ಭರಣಯ್ಯನವರ ಸರದಿ ಬಂದಗ ಅವರು ತಮ್ಮ ಭಾಷಣದಲ್ಲಿ ಭರಣಿ ಮಳೆಯ ಪ್ರಸ್ತಾಪ ಮಾಡಿ ಕಣ್ಣೀರು ಸುರಿಸಲಾರಂಭಿಸಿದರು. ಇಲ್ಲಿ ಭರಣಯ್ಯನವರ ಭಾವುಕತೆಯ ವ್ಯಕ್ತಿತ್ವವನ್ನು ಅರಿಯಬಹುದು. ಅವರು ಬಹಳ ಸೌಜನ್ಯವಂತರಾಗಿದ್ದರು. ಉನ್ನತ ಐ.ಎ.ಎಸ್. ಅಧಿಕಾರಿಯಾಗಿದ್ದರೂ ವಿನಯ, ಕರುಣೆ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಬೆಂಗಳೂರಿನ ಸಮೀಪದ ರಾಮೋಹಳ್ಳಿಯಲ್ಲಿದ್ದ ಹಾಸ್ಟೆಲ್‌ನಲ್ಲಿ ಆರ್ ಭರಣಯ್ಯನವರು ವಿದ್ಯಾರ್ಥಿಯಾಗಿದ್ದರು. ಇವರು ಕುಂಟುಗಾಲಿನವರು. ಒಮ್ಮೆ ಗಾಂಧೀಜಿ "ಈ ಹಾಸ್ಟೆಲ್‌ಗೆ ಭೇಟಿಕೊಟ್ಟು ಭರಣಯ್ಯನವರಿಂದ 'ಸಂಸ್ಕೃತ ಶ್ಲೋಕ' ಹೇಳಿಸಿದರು. ಬೆನ್ನು ತಟ್ಟಿ ಪ್ರೋತ್ಸಾಹಿಸಿದರು".[13] ಇಲ್ಲಿ ದಲಿತ ವಿದ್ಯಾರ್ಥಿಯಾಗಿದ್ದ ಭರಣಯ್ಯನವರ ಪಾಂಡಿತ್ಯವನ್ನು ಅಭ್ಯಸಿಸಿದಾಗ ದಲಿತ ವಿದ್ಯಾರ್ಥಿಗೂ ಕೂಡ ತನ್ನದೇ ಆದ ಸ್ವಂತ ಪ್ರತಿಭೆಯಿದೆ ಎನ್ನುವ ಅಂಶವನ್ನು ಇಲ್ಲಿ ಮನಗಾಣಬಹುದು. ಆದರೆ ಈ ಪ್ರತಿಭೆ ಇದೆ ಎನ್ನುವ ಅಂಶವನ್ನು ಇಲ್ಲಿ ಮನಗಾಣಬಹುದು ಆದರೆ ಈ ಪ್ರತಿಭೆ ಅನಾವರಣಗೊಳ್ಳಬೇಕಾದರೆ ದಲಿತ ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು. ಶಿಕ್ಷಣ ದೊರಕಿಸಿಕೊಡಬೇಕು. ಸರ್ಕಾರದ ಬೆಂಬಲ ಕೂಡ ಸಿಗಬೇಕು ಎನ್ನುವ ಅರಿವು ಇಲ್ಲಿ ಗಮನಾರ್ಹವಾಗಿದೆ.

ಅಂತೆಯೇ ಮತ್ತೊಬ್ಬರು ಬಿ. ರಾಚಯ್ಯನವರು ಒಮ್ಮೆ ಆಫ್ರಿಕಾಗೆ ಹೋಗಬೇಕಾಗಿತ್ತು. ಅವರಿಗೆ ಹಾಸ್ಟೆಲಿನಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿದ್ದರು. ಆಗ ಅನೇಕ ಮುಖಂಡರು ಅಧಿಕಾರಿಗಳು ಅವರ ಗುಣಗಾನ ಮಾಡಿದರು. ಬಿ.ರಾಚಯ್ಯನವರೂ ಭರಣಯ್ಯನವರಂತೆಯೇ ಸಮಾಧಾನದ ವ್ಯಕ್ತಿತ್ವ ಅವರ ಧ್ವನಿ ಜೇನುಧ್ವನಿ. ಮಾತಾಡಲು ನಿಂತರೆ ನಿಧಾನವಾಗಿ ಯೋಚಿಸಿ ಮಾತನಾಡುತ್ತಿದ್ದರು. "ಇಂಥ ಒಂದು ಸಮಾರಂಭಕ್ಕೆ ಆಗ ಶಾಸಕರಾಗಿದ್ದ ಸಿದ್ದಾರ್ಥ ಅರಕೇರಿಯವರು ಆವೇಶದಿಂದ ಭಾಷಣ ಮಾಡಿ ನಮ್ಮನ್ನೆಲ್ಲ ಪ್ರಭಾವಗೊಳಿಸಿದರು"[14]. ಎಂದು ಸಿದ್ಧಲಿಂಗಯ್ಯನವರು ತಮಗಾದ ಪ್ರೇರಣೆಯ ಬಗ್ಗೆ ಆತ್ಮಕಥೆಯಲ್ಲಿ ಹೇಳಿಕೊಳ್ಳುತ್ತಾರೆ ಎನ್ನುವ ಅಸ್ಮಿತೆಯನ್ನು ಇಲ್ಲಿ ಕಾಣಬಹುದು.

ಅಂತೆಯೇ ಬಿ.ರಾಚಯ್ಯನವರು ಡಾ. ಅಂಬೇಡ್ಕರ್‌ರವರನ್ನು ಕುರಿತು ಭಾವಪೂರ್ಣವಾಗಿ ಮಾತನಾಡಿದರು. ವಿದ್ಯಾರ್ಥಿನಿಲಯದ ಮುಖ್ಯಸ್ಥರಾದ ಡಿ. ವೆಂಕಟಯ್ಯನವರು ಭಾಷಣ ಮಾಡುವಾಗ ದಲಿತವರ್ಗದ ದುಸ್ಥಿತಿಯ ಬಗ್ಗೆ, ವಿದ್ಯಾರ್ಥಿಗಳ ಕಷ್ಟಸ್ಥಿತಿಯ ಬಗ್ಗೆ ಮನಕರಗುವಂತೆ ಹೇಳಿದರು. ವಿದ್ಯಾರ್ಥಿನಿಲಯದ ಗ್ರಾಂಟಿಗೆ ಸಂಬಂಧಪಟ್ಟಂತೆ ಸರ್ಕಾರದ ಅರ್ಥಸಚಿವರನ್ನು ನೋಡಲು ಹೋಗಿ, ಸಚಿವರು ಅರ್ಜಿಯನ್ನು ಮುಟ್ಟದಿದ್ದಾಗ ಡಿ. ವೆಂಕಟಯ್ಯ ಸಚಿವರನ್ನು ಕುರಿತು ದೈನ್ಯದಿಂದ "ಸ್ವಾಮಿ ನಾನೇನೋ ಅಸ್ಪೃಶ್ಯ. ನಿಮ್ಮ ಪಾಲಿಗೆ ನನ್ನ ಅರ್ಜಿಯೂ ಅಸ್ಪೃಶ್ಯವಾಯಿತೇ?"[15] ಎಂದರು. ಇದರಿಂದ ಮನಕರಗಿದ ಅರ್ಥಸಚಿವ ಘೋರ್ಪಡೆಯವರು ತಕ್ಷಣ ಇವರ ಅರ್ಜಿಯನ್ನು ತೆಗೆದುಕೊಂಡು ಅನುದಾನವನ್ನು ಬಿಡುಗಡೆ ಮಾಡಿದರು. ಡಿ. ವೆಂಕಟಯ್ಯ, ಗೋಪಾಲಸ್ವಾಮಿ ಅಯ್ಯರ್‌ರವರ ಶಿಷ್ಯರು. ಇವರು ದಲಿತವರ್ಗದವರಿಗೆ ಮಾಡಿದ ಸೇವೆ ದೊಡ್ಡದು. ಮೈಸೂರು

ರಾಜ್ಯದಲ್ಲಿ, ಹೊಲಗದ್ದೆಗಳಲ್ಲಿ ಜೀತ ಮಾಡುತ್ತಿದ್ದ ದಲಿತ ಬಾಲಕರನ್ನು ಅವರವರ ಊರಿಗೇ ಹೋಗಿ ಪಾಲಕರನ್ನು ಒಪ್ಪಿಸಿ, ಜೀತ ಬಿಡಿಸಿ ಶಾಲೆಗೆ ಸೇರಿಸುತ್ತಿದ್ದರು. ಹಾಸ್ಟೆಲ್‌ಗಳಿಗೆ ಸೇರಿಸಿ ಉಚಿತ ಊಟ, ಬಟ್ಟೆ, ಪುಸ್ತಕ, ಸೋಪು, ಎಣ್ಣೆ, ಪೆನ್ನು, ಪೆನ್ಸಿಲ್‌ಗಳನ್ನು ಕೊಡಿಸುತ್ತಿದ್ದರು. ಎಂದು ಸಿದ್ಧಲಿಂಗಯ್ಯ ಹೇಳುತ್ತಾ ದಲಿತಪರ ಹಿರಿಯರ ಕಾಳಜಿಯನ್ನು ಆತ್ಮಕಥನದಲ್ಲಿ ಅರ್ಥೈಸಿದ್ದಾರೆ.

ಈ ಅಂಶಗಳನ್ನು ಗಮನಿಸಿದಾಗ ಆರ್. ಗೋಪಾಲಸ್ವಾಮಿ ಅಯ್ಯರ್, ಬಿ. ರಾಚಯ್ಯ, ಆರ್. ಭರಣಯ್ಯ, ಡಿ. ವೆಂಕಟಯ್ಯ, ಎಲ್ಲರೂ ಸಹ ದಲಿತ ವರ್ಗದವರನ್ನು ಮುಂದೆ ತರಲು ಸದಾ ಹಂಬಲಿಸುತ್ತಿದ್ದರು. ಇದರಿಂದಾಗಿ ದಲಿತರ ಶಿಕ್ಷಣದ ಬಗ್ಗೆ ಎಷ್ಟು ಆಸಕ್ತಿಯಿತ್ತು ಎಂಬ ತಿಳುವಳಿಕೆಯನ್ನು ಇಲ್ಲಿ ಗಮನಿಸಬಹುದ. ಇದು ಇಲ್ಲಿ ಮುಂದಿನ ಪೀಳಿಗೆಗೆ ದಾರಿದೀಪ. ಈ ಹಿನ್ನಲೆಯಾಗಿ ಇಂತಹ ಮನೋವೃತ್ತಿಯನ್ನು ಈಗಿನವರು ಬಳಕೆ ಮಾಡಿಕೊಳ್ಳಬೇಕಾಗಿದೆ. ಒಂದು ಸಮುದಾಯ ತನ್ನ ನೋವಿನ ನೆಲೆಗಳಿಂದ ಹೊರಬರಬೇಕಾದರೆ ಅದಕ್ಕೆ ಒಂದಿಷ್ಟು ಆಸರೆಯ ಅಗತ್ಯವೂ ಇರುತ್ತದೆ. ಇಲ್ಲಿ ಸಿದ್ಧಲಿಂಗಯ್ಯರವರಿಗೆ ಮತ್ತು ಅದೇ ಸಂದರ್ಭದಲ್ಲಿ ಹಿಂದೆ ತಿಳಿಸಿದ ಅನೇಕರು ಆಸರೆಯಾಗಿದ್ದಾರೆ. ಅದೇ ಸಮುದಾಯದವರಾಗಿರಬಹುದು ಇಲ್ಲವೇ ಇತರ ಸಮುದಾಯದ ದಲಿತ ಪರಿ ಕಾಳಜಿ ಇರುವವರಾಗಿರಬಹುದು. ಇಂತಹ ಸಹಾಯ ಇಂದಿನ ದಲಿತ ಜಗತ್ತಿಗೆ ಅನಿವಾರ್ಯ ಆದ್ದರಿಂದ ಹಿಂದಿನ ಈ ಸಂಗತಿಗಳು ಇಂದಿಗೆ ಅಸ್ಮಿತೆಗಳಾಗುತ್ತವೆ.

ಮುಂದುವರಿದಂತೆ ಶ್ರೀರಾಮಪುರದಲ್ಲಿ ಬಹಳ ವಾಚನಾಲಯಗಳಿದ್ದವು. ಕನ್ನಡ ಸಂಘಗಳು ಅಲ್ಲಲ್ಲಿ ವಾಚನಾಲಯಗಳನ್ನು ಪ್ರಾರಂಭಿಸಿ ಕನ್ನಡಪತ್ರಿಕೆಗಳು ಮ್ಯಾಗ್‌ಜಿನ್‌ಗಳನ್ನು ತರಿಸುತ್ತಿದ್ದರು. ಡಾ. ಸಿದ್ಧಲಿಂಗಯ್ಯನವರು ಅಲ್ಲಿಗೆ ಹೋಗುತ್ತಿದ್ದರು. ಅಲ್ಲಿ ಬಸವರಾಜ ಕಟ್ಟೀಮನಿಯವರ 'ಸ್ವಾತಂತ್ರ್ಯದೆಡೆಗೆ' ಕಾದಂಬರಿ ಓದಿದರು. ಕವಿತೆಯ ರಚನೆಗೆ ಈ ಗ್ರಂಥಾಲಯ ನೆರವಾಯಿತು. ಇದೇ ಸಮಯದಲ್ಲಿ ಹಾಸ್ಟೆಲಿನಲ್ಲಿ ತಮ್ಮ ಕೊಠಡಿಯಲ್ಲಿದ್ದ ಬಸವಣ್ಣ ಎಂಬ ವಿದ್ಯಾರ್ಥಿ ನನಗೆ 'ಅವತಾರ ಪುರುಷ ಅಂಬೇಡ್ಕರ್' ಎಂಬ ಚಿಕ್ಕ ಪುಸ್ತಕ ಕೊಟ್ಟನು. "ಹೀಗೆ ಓದುತ್ತಲೇ ಅಭ್ಯಾಸಕ್ಕೆ ತೊಡಗಿ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಹೋಗಿ ಸಿಕ್ಕ ಸಿಕ್ಕ ಪುಸ್ತಕಗಳನ್ನು ಓದತೊಡಗಿದೆನು. ಇದೇ ಸಂದರ್ಭದಲ್ಲಿ ಹೆಚ್ಚಾಗಿ ಕವಿತೆಗಳನ್ನು ಬರೆದನು' ಎಂದು ಸ್ವತಃ ಶ್ರೀಯುತರೇ ವಿವರಿಸುತ್ತಾರೆ"[16]. ಇಲ್ಲಿ ಶ್ರೀಯುತರಿಗೆ ಕವಿತೆಯನ್ನು ಬರೆಯಲು ಗ್ರಂಥಾಲಯ, ವಾಚನಾಲಯದಲ್ಲಿ ದೊರೆತ ಪುಸ್ತಕಗಳು ನೆರವಾಗಿವೆ ಎಂಬ ಅಂಶಗಳನ್ನು ಇಲ್ಲಿ ಗ್ರಹಿಸಲಾಗಿದೆ.

ಮುಂದುವರಿದು ವಿದ್ಯಾರ್ಥಿನಿಲಯದಲ್ಲಿ ಊಟ ಸರಿಯಾಗಿರಲಿಲ್ಲ. ಜೋಳದ ಮುದ್ದೆಯನ್ನು ತಿಂದು ಹುಡುಗರಿಗೆ ರಕ್ತಭೇದಿಯಾಗುತ್ತಿತ್ತು. ಇದನ್ನು ಕುರಿತು ಶ್ರೀಯುತರು ಬರೆದ ಪದ್ಯ ಹೀಗಿದೆ.

"ಕೊಡುವರು ನಮಗೆ ಜೋಳ

ಕಡಿಮೆ ಹಾಕುವರು ಕಾಳ

ಆಗುತ್ತದೆ ಅನೇಕರಿಗೆ ರಕ್ತ ಭೇದಿ

ಆದರೂ ಕೊಡಲೊಲ್ಲರು ರಾಗಿ ಗೋಧಿ"[17]

ಇದನ್ನು ಮೆಚ್ಚಿದ ಗೆಳೆಯರು ಸಾಮೂಹಿಕವಾಗಿ ಪ್ರಾರ್ಥನೆಯಲ್ಲಿ ಹಾಡತೊಡಗಿದರು. ಇಂತಹ ಕೆಲವು ಘಟನೆಗಳು ಶ್ರೀಯುತರ ಅನೇಕ ಹಾಡುಗಳನ್ನು ಬರೆಯಲು ಸ್ಫೂರ್ತಿಯಾಗಿದ್ದವು ಎನ್ನುವುದನ್ನು ಇಲ್ಲಿ ಮನಗಾಣಬಹುದು. ಹೀಗೆಯೇ ಅವರ ಕವಿತೆಗಳ ರಚನೆಯು ರಭಸದಲ್ಲಿ ಮುಂದೆ ಸಾಗಿತು.

ಶ್ರೀರಾಮಪುರದ ಮನೆ ಚಿಕ್ಕದಾಗಿತ್ತು. ಆ ಮನೆಯಲ್ಲಿ ನಾಲ್ಕೈದು ಜನ ಮಲಗುವುದಿರಲಿ ಬಿಡುಬೀಸಾಗಿ ಕುಳಿತುಕೊಳ್ಳುವುದೇ ಕಷ್ಟವಾಗಿತ್ತು. ಹಾಗಾಗಿ ಸಿದ್ಧಲಿಂಗಯ್ಯ ಮನೆಯ ಹೊರಗೆ ಇರುತ್ತಿದ್ದುದು ಹೆಚ್ಚು. ಇವರ ಮನೆಯ ಮುಂದಣದಾರಿಯಲ್ಲಿ ಉತ್ತರ ದಿಕ್ಕಿಗೆ ಹೋದರೆ ಸ್ವಲ್ಪ ದೂರದಲ್ಲೇ ಸ್ಮಶಾನ ಎದುರಾಯಿತು. ಅಲ್ಲಿಗೆ ಹೋದಾಗ ಅಲ್ಲಿ ಬಹಳ ಎತ್ತರವಾದ ಹಳೆಯ ಕಾಲದ ಮರಗಳಿದ್ದವು. ಬಣ್ಣ ಬಣ್ಣದ ಹೂಗಳನ್ನು ಅಲ್ಲಿ ಬೆಳೆದಿದ್ದರು. ಗೋರಿಗಳನ್ನು ನೋಡುವುದರಲ್ಲಿ ಒಂದು ಆಕರ್ಷಣೆ ಕಂಡುಬಂದು ಸಿದ್ಧಲಿಂಗಯ್ಯನವರಿಗೆ ಈ ಸ್ಮಶಾನ ಬಹಳ ಇಷ್ಟವಾಯಿತು. ಪ್ರತಿನಿತ್ಯವೂ ಸಂಜೆ ಸ್ಮಶಾನಕ್ಕೆ ಹೋಗತೊಡಗಿದರು. ಒಂದು ಗೋರಿಯ ಮೇಲೆ ಕೂತರು. ಪದ್ಯದ ಸಾಲುಗಳು ತಾನೇ ತಾನಾಗಿ ಹೊಳೆಯತೊಡಗಿದವು. ಅವನ್ನೆಲ್ಲ ಗುರ್ತು ಹಾಕಿಕೊಂಡರು. ಹೀಗೆ ಸ್ಮಶಾನವನ್ನು ಅನುಭವಿಸುತ್ತಾ ಕವಿತೆಯ ರಚನೆಯಲ್ಲಿ ಹೇಗೆ ತೊಡಗಿದರು ಎನ್ನುವುದು ಈ ಮೇಲಿನ ಹೇಳಿಕೆಯಿಂದ ಅರಿವಾಗುತ್ತದೆ.

ಮುಂದೆ ವಿದ್ಯಾಭ್ಯಾಸ ಮುಂದುವರೆಸಲೆಂದು ಸರ್ಕಾರಿ ಆರ್ಟ್ಸ್ ಕಾಲೇಜಿಗೆ ಸೇರಿದರು. ಮಹಾತ್ಮಗಾಂಧಿ ರಸ್ತೆಯಲ್ಲಿರುವ ದಲಿತ ವಿದ್ಯಾರ್ಥಿ ನಿಲಯದಲ್ಲಿ ಉಳಿದುಕೊಂಡರು. ಇವರ ಬಳಿ ಒಂದು ಮುರುಕಲು ಟ್ರಂಕ್ ಮತ್ತು ಹರಕಲು ಚಾಪೆಯಿತ್ತು. ಇವನ್ನು ಮನೆಯಿಂದ ಹೊತ್ತುಕೊಂಡು ಕಾಲ್ನಡಿಗೆಯಲ್ಲಿ ವಿದ್ಯಾರ್ಥಿ ನಿಲಯ ತಲುಪಿದರು. ಬೆಳಗಿನ ಜಾವ ಮೂರೂವರೆ ಗಂಟೆಗೆ ಎದ್ದು ಟ್ರಂಕನ್ನು ತಲೆಯ ಮೇಲೆ ಹೊತ್ತುಕೊಂಡು ಚಾಪೆಯನ್ನು ಕೈಯಲ್ಲಿ ಹಿಡಿದು ನಡೆದರು. ಇಲ್ಲಿ ಸಿದ್ಧಲಿಂಗಯ್ಯ ರಾತ್ರಿ ಹೊತ್ತು ನಡೆಯಲು ಕಾರಣ ಅವರ ಬಡತನ. ಬಡತನದ ಪ್ರದರ್ಶನ ಬೆಳಿಗ್ಗೆ ಜನರ ಮುಂದೆ ತೋರಿಸಿಕೊಳ್ಳಲು ಇಷ್ಟವಿಲ್ಲದೆ ತಮ್ಮ ನೋವನ್ನು ತಾವೇ ಅನುಭವಿಸಿದ ರೀತಿಯನ್ನು ಇಲ್ಲಿ ಗುರ್ತಿಸಬಹುದು.

ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ ಒಳ್ಳೆಯ ಅಧ್ಯಾಪಕರುಗಳಿದ್ದರು. ಜಿ.ಎಸ್. ಸಿದ್ಧಲಿಂಗಯ್ಯ ಮತ್ತು ಸಾ.ಶಿ.ಮರುಳಯ್ಯ ಬಹಳ ಚೆನ್ನಾಗಿ ಪಾಠ ಮಾಡುತ್ತಿದ್ದರು. "ಈ ಅವಧಿಯಲ್ಲೇ 'ಧರೆಯದೇವಿ' ಎಂಬ ಪದ್ಯವನ್ನು ಬರೆದು ಜಿ.ಎಸ್. ಸಿದ್ಧಲಿಂಗಯ್ಯನವರಿಗೆ ತೋರಿಸಿದರು. ಅವರು ಬಹಳ ಸಂತೋಷಪಟ್ಟು ಕಾಲೇಜಿನ ಮ್ಯಾಗ್‌ಜಿನ್‌ನಲ್ಲಿ ಪ್ರಕಟಿಸಿದರು. ಈ ಹುಮ್ಮಸ್ಸಿನಲ್ಲೇ ಡಾ. ಜಿ.ಎಸ್. ಶಿವರುದ್ರಪ್ಪನವರಿಗೆ ಪದ್ಯಗಳನ್ನು ತೋರಿಸಿದಾಗ ಅವರು ಇವರ ಎಲ್ಲ ಕವಿತೆಗಳನ್ನು ಪ್ರೋತ್ಸಾಹಿಸಿದರು. ಇಷ್ಟೇ ಅಲ್ಲದೆ ಸಿದ್ಧಾರ್ಥ ಅರಕೇರಿಯವರು ಪ್ರಕಟಿಸುತ್ತಿದ್ದ 'ಮಾರ್ಗದರ್ಶಿ' ಎಂಬ ಪತ್ರಿಕೆಯಲ್ಲಿ ಇವರ ಪದ್ಯಗಳು ಪ್ರಕಟವಾದವು"[18]. ಇಲ್ಲಿ ಸಿದ್ಧಲಿಂಗಯ್ಯನವರ ಕವಿತೆಗಳ ರಚನೆ ಹೇಗೆ ರಭಸದಲ್ಲಿ ಸಾಗುತ್ತಿದ್ದವು ಎಂಬ ಅಂಶವನ್ನು ಗಮನಿಸಲಾಗಿದೆ.

ಸಿದ್ಧಲಿಂಗಯ್ಯ ಒಂದು ದಿನ ಕಬ್ಬನ್‌ಪಾರ್ಕ್‌ನಲ್ಲಿ ಹೋಗುತ್ತಿದ್ದಾಗ ಗಂಜಿಗಟ್ಟಿ ಎಂಬ 'ಪೀಪಲ್' ಇಂಗ್ಲೀಷ್ ಪತ್ರಿಕೆಯ ಸಂಪಾದಕರು ಪರಿಚಿತರಾದರು. ಇವರು ಕನ್ನಡಿಗರಾಗಿದ್ದರು. ಇವರಿಗೆ ನಮಸ್ಕರಿಸಿ ತಮ್ಮ ಕವಿತೆಗಳನ್ನು

ತೋರಿಸುವ ಬಯಕೆ ವ್ಯಕ್ತಪಡಿಸಿದಾಗ ಗಂಜಿಗಟ್ಟಿಯವರು ಸಂತೋಷದಿಂದ ಒಪ್ಪಿದರು. ತಾನು ಸಹ ಶ್ರೀರಾಮಪುರದಲ್ಲಿ ಹರಿಜನ ಸೇವಕ ಸಂಘದ ಕಟ್ಟಡದಲ್ಲಿ ವಾಸವಾಗಿರುವುದಾಗಿ ಹೇಳಿ ಬೆಳಗ್ಗೆ 7 ಗಂಟೆಯ ಒಳಗೆ ಅಲ್ಲಿಗೆ ಪದ್ಯದ ಸಮೇತ ಬರಬೇಕೆಂದು ಹೇಳಿದರು. ಅವರು ಹೇಳಿದ್ದ ಸ್ಥಳಕ್ಕೆ ಮೂರನೇ ದಿನ ಸಿದ್ಧಲಿಂಗಯ್ಯ ಹಾಜರಾದರು. ಅಲ್ಲಿಂದ ಸ್ವಲ್ಪ ದೂರದಲ್ಲೇ ಇದ್ದ ಹೋಟೆಲಿಗೆ ಕರೆದೊಯ್ದು ಮಸಾಲೆದೋಸೆ ಆರ್ಡರ್ ಮಾಡಿ ಇವರ ಕವಿತೆಗಳ ಕಡೆ ಗಮನಹರಿಸಿದರು. ಓದಿದ ನಂತರ "ನೀನೊಬ್ಬ ಕ್ರಾಂತಿಕಾರಿ ಕವಿ"[19] ಎಂದು ಹುರಿದುಂಬಿಸಿದರು. ನಂತರ ಗಂಜಿಗಟ್ಟಿಯವರು ಪೀಪಲ್ ಪತ್ರಿಕೆಗೆ ಜಾಹೀರಾತು ಸಂಗ್ರಹಿಸುವ ಕೆಲಸವನ್ನು ಸಿದ್ಧಲಿಂಗಯ್ಯನವರಿಗೆ ವಹಿಸಿದರು. ಇಲ್ಲಿ ಸಿದ್ಧಲಿಂಗಯ್ಯನವರ ಕವಿತೆಗಳು ಬಂಡಾಯದ ಸ್ವರೂಪದಲ್ಲಿದ್ದು ಹೇಗೆ ಗಂಜಿಗಟ್ಟಿಯವರ ಮನಸ್ಸನ್ನು ಮುಟ್ಟಿತು ಎನ್ನುವ ರೀತಿಯನ್ನು ಗ್ರಹಿಸಲಾಗಿದೆ.

ಮುಂದುವರೆದು ಕಾಲೇಜಿನಲ್ಲಿ ಚರ್ಚಾಸ್ಪರ್ಧೆ ಇತ್ತು. ಇಬ್ಬರನ್ನು ಆಯ್ಕೆ ಮಾಡಬೇಕಿತ್ತು. ಎಲ್ಲರ ಜೊತೆ ಈ ಸ್ಪರ್ಧೆಯಲ್ಲಿ ಇವರೂ ಭಾಗವಹಿಸಿದರು. ಚರ್ಚಾ ವಿಷಯ ಮಾತಾಡುವಾಗ ತಮ್ಮ ಪದ್ಯದ ಕೆಲವು ತುಣುಕುಗಳನ್ನು ರಾಷ್ಟ್ರಕವಿ ಕುವೆಂಪು ಹೆಸರಿನಲ್ಲಿ ಉದಾಹರಣೆ ಕೊಟ್ಟು ಮಾತನಾಡಿದರು. "ದೇವಾಲಯಗಳು ಮಾಟದ ಮನೆಗಳು, ಧರ್ಮದ ಗುರುಗಳು, ಮಾಂತ್ರಿಕರು, ಕ್ಷೇತ್ರಗಳೆಲ್ಲವೂ ರೋಗಗಳ ನೆಲೆ, ಮುಗ್ಧರು, ಮೂಢರು, ಯಾತ್ರಿಕರು"[20] ಇವೇ ಆ ಸಾಲುಗಳು. ಭಾಷಣ ಮತ್ತು ಪದ್ಯದಿಂದ ಉತ್ತೇಜಿತರಾದಂತಹ ಅಲ್ಲಿದ್ದ ತೀರ್ಪುಗಾರರು ಸಿದ್ಧಲಿಂಗಯ್ಯರನ್ನೇ ಆಯ್ಕೆ ಮಾಡಿದರು. ಆದರೆ ಆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಒಬ್ಬ ವ್ಯಕ್ತಿ ಸಿದ್ಧಲಿಂಗಯ್ಯನವರನ್ನು ಕುರಿತು 'ನೀವು ಕುವೆಂಪು ಹೆಸರಿನಲ್ಲಿ ಉದಾಹರಿಸಿದ ಸಾಲುಗಳನ್ನು ಕುವೆಂಪು ಎಲ್ಲೂ ಬರೆದಿಲ್ಲ. ಅವು ಯಾರ ಸಾಲುಗಳೆಂದು ನಿಜ ಹೇಳಿ' ಎಂದರು.

ಆಗ ಅವು ನನ್ನ ಸಾಲುಗಳು ಎಂದು ಸಿದ್ಧಲಿಂಗಯ್ಯನವರೇ ಒಪ್ಪಿಕೊಳ್ಳುತ್ತಾರೆ. ಆ ವ್ಯಕ್ತಿ ಇವರ ಎಲ್ಲಾ ಕವಿತೆಗಳನ್ನು ನೋಡುವ ಕುತೂಹಲದಿಂದ ಕವಿತೆಗಳನ್ನು ತರಿಸಿ ಓದಿದರು. ಸಂತೋಷ ವ್ಯಕ್ತಪಡಿಸಿದರು. ಆ ವ್ಯಕ್ತಿ ಅವರ ಕಾಲೇಜಿನಲ್ಲೇ ತಮಗಿಂತ ಒಂದು ತರಗತಿ ಮುಂದಿದ್ದರು. ಇವರೇ ಡಿ.ಆರ್. ನಾಗರಾಜ್. ಇವರ ಗೆಳೆತನ ಸಿದ್ಧಲಿಂಗಯ್ಯನವರ ಬದುಕಿಗೆ ಹೊಸ ತಿರುವು ನೀಡಿತೆಂದು ಸಿದ್ಧಲಿಂಗಯ್ಯನವರೇ ಹೇಳುತ್ತಾರೆ. ಈ ಮೇಲಿನ ಅಂಶಗಳಿಂದ ಸಿದ್ಧಲಿಂಗಯ್ಯ ಭಾಷಣದಲ್ಲೂ ಚತುರರಾಗಿದ್ದರು ಎಂಬುದನ್ನು ಕಾಣಬಹುದು.

ಮುಂದೆ ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿನ ವಿಶ್ವವಿದ್ಯಾಲಯದಲ್ಲಿ ಸೇರಿದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ಕಲಿಕೆ ಗಳಿಕೆ' ಯೋಜನೆಯಿತ್ತು. ಈ ಯೋಜನೆಯಡಿಯಲ್ಲಿ ಸಂಜೆ 5 ರಿಂದ ರಾತ್ರಿ 9ರ ತನಕ ಸಾಬೂನು ಕಾರ್ಖಾನೆಯಲ್ಲಿ ದುಡಿಯುತ್ತಿದ್ದರು. ಇದರಿಂದ ವಿದ್ಯಾಭ್ಯಾಸದ ಖರ್ಚನ್ನು ತಾವೇ ನಿಭಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಂತೆಯೇ ಕಾಲೇಜಿನಲ್ಲಿ ಕರ್ನಾಟಕ ಸಂಘವಿತ್ತು. ಅದರ ಸಹ ಕಾರ್ಯದರ್ಶಿ ಸ್ಥಾನಕ್ಕೆ ಸಿದ್ಧಲಿಂಗಯ್ಯ ಸ್ಪರ್ಧಿಸಿ ಜಯಗಳಿಸಿದರು. ಸಂಘಕ್ಕೆ ದೇಜಗೌ, ಮರಿಯಪ್ಪ ಭಟ್ಟ, ಜಿ. ವೆಂಕಟಸುಬ್ಬಯ್ಯ, ಜಿ.ಎಸ್. ಶಿವರುದ್ರಪ್ಪ ಮುಂತಾದ ಹಿರಿಯರನ್ನು ಆಹ್ವಾನಿಸಿ ಅವರೆಲ್ಲರ ಭಾಷಣದ ಪ್ರಯೋಜನವನ್ನು ಪಡೆದರು. ಮುಂದುವರಿದು ಗೆಳೆಯರೂ ಸೇರಿದಂತೆ ಸಿದ್ಧಲಿಂಗಯ್ಯ ವಿಚಾರವಾದಿ ಪರಿಷತ್ತನ್ನು ಸ್ಥಾಪಿಸಿದರು. ಇದರ ಆಶ್ರಯದಲ್ಲಿ ದಲಿತ ವಿದ್ಯಾರ್ಥಿಗಳ ಮೆರವಣಿಗೆಯನ್ನು ಸಂಘಟಿಸಿದ್ದರು.

ಬೆಂಗಳೂರಿನ ಎಲ್ಲಾ ದಲಿತ ವಿದ್ಯಾರ್ಥಿನಿಲಯಗಳಿಗೂ ಭೇಟಿಕೊಟ್ಟು ವಿದ್ಯಾರ್ಥಿಗಳ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಬೆಂಗಳೂರಿನಲ್ಲಿ ದಲಿತ ವಿದ್ಯಾರ್ಥಿಗಳು ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಎನ್ನುವುದು ಸಿದ್ಧಲಿಂಗಯ್ಯನವರಿಗೆ ಆಗ ಅರಿವಾಯಿತು. ದಲಿತರಿಗೆ ಸರಿಯಾದ ಊಟವಿರಲಿಲ್ಲ. ಸ್ನಾನಕ್ಕೆ, ಶೌಚಕ್ಕೆ ವ್ಯವಸ್ಥೆಯೂ ಇರಲಿಲ್ಲ. 200 ವಿದ್ಯಾರ್ಥಿಗಳಿಗೆ ಒಂದು ಶೌಚಗೃಹವಿತ್ತು. ಇಂಥ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು. ತಾವು ನಡೆಸಲಿರುವ ದಲಿತ ಪರ ಮೆರವಣಿಗೆಯ ಮಹತ್ವವನ್ನು ಮನವರಿಕೆ ಮಾಡಿದರು. ಇದರ ಫಲವಾಗಿ ಮೆರವಣಿಗೆಯ ದಿನ 3–4 ಸಾವಿರ ವಿದ್ಯಾರ್ಥಿಗಳು ಮೈಸೂರು ಬ್ಯಾಂಕಿನ ಬಳಿ ಜಮಾಯಿಸಿದರು. ಬೆಂಗಳೂರಿನಲ್ಲಿ ದಲಿತ ವಿದ್ಯಾರ್ಥಿಗಳು ಮಾಡಿದ ಮೊದಲ ಮೆರವಣಿಗೆ ಇದಾಗಿತ್ತು. ಈ ಬಹಿರಂಗ ಸಭೆ ನೋಡಿದ ಪೋಲೀಸ್ ಅಧಿಕಾರಿಗಳು ನಿಯೋಗಕ್ಕೆ ಮುಖ್ಯಮಂತ್ರಿ ದೇವರಾಜ ಅರಸುರವರೊಂದಿಗೆ ಭೇಟಿ ಏರ್ಪಡಿಸಿದರು. ವಿದ್ಯಾರ್ಥಿಗಳ ಸಲಹೆ ಮೇರೆಗೆ ಸಿದ್ಧಲಿಂಗಯ್ಯ ದಲಿತ ವಿದ್ಯಾರ್ಥಿಗಳ ಸಮಸ್ಯೆಯನ್ನು ದೇವರಾಜ ಅರಸರಿಗೆ ತಿಳಿಸಿದರು. ಮುಖ್ಯಮಂತ್ರಿಗಳು ಎಲ್ಲಾ ವಿವರಗಳನ್ನು ಕೇಳಿ ಆಗಾಗ ಬಂದು ಭೇಟಿ ಮಾಡಲು ಹೇಳಿದರು. ಇದರ ಪರಿಣಾಮ ದಲಿತ ವಿದ್ಯಾರ್ಥಿಗಳ ಒಂದೊಂದೇ ಸಮಸ್ಯೆಗಳು ಪರಿಹಾರ ಕಾಣತೊಡಗಿದವು. ಈ ಘಟನೆಯಿಂದ ಸಿದ್ಧಲಿಂಗಯ್ಯನವರ ದಲಿತಪರ ಕಾಳಜಿ ಬಹಳ ಶ್ರದ್ಧೆಯಿಂದ ಕೂಡಿತ್ತು ಎನ್ನುವ ಅಂಶವನ್ನು ಇಲ್ಲಿ ಗುರ್ತಿಸಬಹುದು.

ಮುಂದೆ ವಿಚಾರವಾದಿ ಸಮಾವೇಶವನ್ನು ಸಂಘಟಿಸಿದರು. ರಾಜ್ಯದ ನಾನಾ ಕಡೆಯಿಂದ ಪ್ರತಿನಿಧಿಗಳು ಬಂದಿದ್ದರು. ಸಭೆ ಸೆಂಟ್ರಲ್ ಕಾಲೇಜಿನ ಹಾಕಿ ಮೈದಾನದಲ್ಲಿ ನಡೆಯಿತು. "ಜಾತಿ ರಹಿತ ವರ್ಗ ರಹಿತ ಸಮಾಜದ ರಚನೆಗೆ ಹೋರಾಡುವುದು"[21] ಈ ಸಮಾವೇಶದ ಗುರಿಯಾಗಿತ್ತು. ಈ ಸಮಾವೇಶದಲ್ಲಿ ಜಾತಿ ವಿನಾಶ ಆಗಬೇಕು ಎಂದು ಸಿದ್ಧಲಿಂಗಯ್ಯ ಭಾಷಣ ಮಾಡಿದ್ದರು.

ಇದೇ ಸಂದರ್ಭದಲ್ಲಿ ಬಸವಲಿಂಗಪ್ಪ ಪ್ರಕರಣ ಜರುಗಿತು. ಇದನ್ನು ಬೂಸಾ ಪ್ರಕರಣ ಎಂದು ಕರೆದರು. ತಮ್ಮ ಹೇಳಿಕೆಗಳಿಂದ ಬಿ. ಬಸವಲಿಂಗಪ್ಪ ದೇವರಾಜ ಅರಸು ಸಂಪುಟದಲ್ಲಿ ವಿವಾದಾಸ್ಪದ ಮಂತ್ರಿಯಾಗಿದ್ದರು. ಒಂದು ಸಲ ಅವರು ಗಾಂಧೀಜಿಗೆ ಸತ್ಯದ ಅರ್ಥ ಗೊತ್ತಿರಲಿಲ್ಲ ಎಂದರು. ಇದರಿಂದ ಬಹಳ ಜನಕ್ಕೆ ಆಶ್ಚರ್ಯವಾಯಿತು. ಇನ್ನೊಮ್ಮೆ ದಲಿತರನ್ನು ಉದ್ದೇಶಿಸಿ ದೇವರ ಪಟಗಳನ್ನು ಚರಂಡಿಗೆ ಎಸೆಯಿರಿ ಎಂದರು. ಇದರಿಂದ ಸಂಪ್ರದಾಯವಾದಿಗಳಿಗೆ ಆಘಾತವಾಯಿತು. ಮತ್ತೊಮ್ಮೆ ಮಾತನಾಡಿ ಕನ್ನಡ ಸಾಹಿತ್ಯದಲ್ಲಿ ಬಹುಪಾಲು ಬೂಸಾ ಇದೆ ಎಂದು ಹೇಳಿದರು. ಅವರ ಈ ಮಾತು ಬೂಸಾ ಚಳುವಳಿಗೆ ನಾಂದಿಯಾಯಿತು ಎನ್ನುವ ಅಂಶವನ್ನು ಇಲ್ಲಿ ಕಾಣಬಹುದು. ಅಲ್ಲದೆ ಬಸವಲಿಂಗಪ್ಪನವರ ಬೆಂಬಲಿಗರು ತಮಿಳು–ಬಾಂಧವರು ಇವರು ಬಸವಲಿಂಗಪ್ಪ ಪರವಾಗಿ 'ಜಾತಿವಾದಿಗಳಿಗೆ ಜಯವಾಗಲಿ, ಜಾತಿವಾದಿಗಳಿಗೆ ಧಿಕ್ಕಾರ' ಎಂದು ಮೆರವಣಿಗೆ ಮಾಡಿದರು. ಇಲ್ಲಿ ಕನ್ನಡ ಅಕ್ಷರಗಳಿದ್ದವು. ಇದನ್ನು ಸಿದ್ಧಲಿಂಗಯ್ಯ ವಿರೋಧಿಸಿದರು. ಏಕೆಂದರೆ ಜಾತಿ ವಿನಾಶದ ಚಳುವಳಿ ಮಾಡುತ್ತಿರುವ ನಾವೇ ಜಾತಿವಾದ ಮಾಡಿದಂತಾಗುತ್ತದೆ ಎನ್ನುವ ಅಂಶವನ್ನು ಇವರು ಮನಗಂಡಿದ್ದರು ಎಂಬುದು ಇಲ್ಲಿ ಅರಿವಾಗುತ್ತದೆ.

ಹೀಗೆ ದಲಿತರ ಪರವಾಗಿ ಕಾಳಜಿಯನ್ನು ಹೊಂದಿದ್ದ ಇವರು ಚಳುವಳಿಗಳಲ್ಲಿ ಹೆಚ್ಚು ಭಾಗವಹಿಸುತ್ತಿದ್ದರಿಂದ ಕಾಲೇಜಿನಲ್ಲಿ ಅಟೆಂಡೆನ್ಸ್ ಹೆಚ್ಚು ಇರಲಿಲ್ಲ. ಈ ಸಮಯದಲ್ಲಿ ಮುಖ್ಯಮಂತ್ರಿ ದೇವರಾಜ ಅರಸು ಸಹಕಾರದಿಂದಾಗಿ ಪರೀಕ್ಷೆಗೆ ಕೂರುವ ಅವಕಾಶ ದೊರೆಯಿತು. ಮುಖ್ಯಮಂತ್ರಿಗಳಿಗೆ ಸಿದ್ಧಲಿಂಗಯ್ಯನವರ ಪ್ರಾಮಾಣಿಕತೆ ಮೆಚ್ಚುಗೆಯಾಗಿದ್ದು ಇದಕ್ಕೆ ಕಾರಣವಿರಬಹುದು.

ಒಂದು ದಿನ ಪುಂಡರ ಗುಂಪು ಇವರ ಮೇಲೆ ದಾಳಿ ಮಾಡಿತು ಲಲಿತಕಲಾ ಕಾರ್ಯದರ್ಶಿಯ ಸ್ಥಾನಕ್ಕೆ ರಾಜೀನಾಮೆ ಕೊಡಲು ಆ ಗುಂಪು ಒತ್ತಾಯಿಸಿತು. ಗುಂಪಿನವರು ಪ್ರಾಣಭೀತಿ ಹುಟ್ಟಿಸಿ ಸಿದ್ಧಲಿಂಗಯ್ಯನವರಿಂದ ರಾಜೀನಾಮೆ ಪತ್ರ ಪಡೆದರು. ಒಂದು ದಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ "ಬಿ.ಆರ್. ರಾಮಚಂದ್ರೇಗೌಡರು ಹಾಸ್ಟೇಲ್‌ನಲ್ಲಿದ್ದ ಸಿದ್ಧಲಿಂಗಯ್ಯನ ಕೊಠಡಿಗೆ ಬಂದು ಪರೀಕ್ಷೆಗೆ ತಪ್ಪಿಸಿಕೊಳ್ಳಬಾರದೆಂದು ತಾವು ರಕ್ಷಣೆ ಮಾಡುವುದಾಗಿ ಭರವಸೆ ಕೊಟ್ಟರು"[22]. ಈ ಬೆಂಬಲ ಅವರು ಪರೀಕ್ಷೆ ಬರೆಯಲು ಅನುವಾಯಿತು ಹೀಗೆ ಇವರು ಕಷ್ಟದಲ್ಲಿದ್ದಾಗ, ತೊಂದರೆಗೆ ಸಿಲುಕಿದಾಗ ಸುಭಾಷ್ ಭರಣಿ, ಕರೀಗೌಡ, ಕೆ. ಮರುಳಸಿದ್ಧಪ್ಪನವರು ಪ್ರೋತ್ಸಾಹದ ಮಾತುಗಳಿಂದ ಸಿದ್ಧಲಿಂಗಯ್ಯನವರನ್ನು ಉತ್ತೇಜಿಸಿದ್ದರು. ಇಲ್ಲಿ ದಲಿತರಷ್ಟೇ ಅಲ್ಲದೆ ಮಾನವೀಯತೆ, ಸಮಾನತೆ, ನೈತಿಕ ಮೌಲ್ಯಗಳನ್ನು ಹೊಂದಿದ್ದ ಸವರ್ಣೀಯರು ಸಿದ್ಧಲಿಂಗಯ್ಯನವರನ್ನು ಪ್ರೋತ್ಸಾಹಿಸಿದ್ದರು ಎನ್ನುವುದನ್ನು ಇಲ್ಲಿ ಗಮನಿಸಬಹುದು.

ಒಮ್ಮೆ ಬೆಂಗಳೂರಿನಿಂದ ಮೈಸೂರಿಗೆ ಭೇಟಿ ನೀಡಿ ಅಲ್ಲಿನ 'ಚಾಮುಂಡಿ ಹಾಸ್ಟೆಲ್‌ಗೆ' ಹೋಗಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಭಾಷಣ ಮುಗಿದ ಒಂದು ಗಂಟೆಯ ಹೊತ್ತಿಗೆ ಯಾರೋ ಕಿಡಿಗೇಡಿಗಳು ಹಾಸ್ಟೆಲಿಗೆ ಬೆಂಕಿ ಹಾಕಿಬಿಟ್ಟಿದ್ದರು. ಬೆಂಗಳೂರಿಗೆ ಹೊರಡುವಾಗ ದೇವನೂರ ಮಹಾದೇವರು ಬಂದು ತಮ್ಮ ದ್ಯಾವನೂರು ಕೃತಿಯನ್ನು ಕೊಟ್ಟರು. ಇಲ್ಲಿ ದೇವನೂರರಿಗಿದ್ದ ಮೇಲಿದ್ದ ತಮ್ಮ ಅಭಿಮಾನವನ್ನು ಸಿದ್ಧಲಿಂಗಯ್ಯನವರೇ ಆತ್ಮಕಥೆಯಲ್ಲಿ ಸರಳ ರೀತಿಯಲ್ಲಿ ತಿಳಿಸಿಕೊಟ್ಟಿದ್ದಾರೆ ಎನ್ನುವುದನ್ನು ಇಲ್ಲಿ ಅಭ್ಯಸಿಸಲಾಗಿದೆ.

ಈ ಅವಧಿಯಲ್ಲಿ ಶೂದ್ರ ಶೀನಿವಾಸ್ ಸಿದ್ಧಲಿಂಗಯ್ಯ ಉಳಿದಿದ್ದ ಹಾಸ್ಟೆಲಿಗೆ ಬರುತ್ತಿದ್ದರು. ಇವರ ಕವಿತೆಗಳನ್ನು ಶೂದ್ರ ಪತ್ರಿಕೆಯಲ್ಲಿ 'ಹೊಲಗೇರಿ ಸಿದ್ಧಲಿಂಗಯ್ಯ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಆಗ ಸಿದ್ಧಲಿಂಗಯ್ಯ ಹೆದರಿದಾಗ ಧೈರ್ಯದ ಮಾತುಗಳನ್ನು ಹೇಳಿದ್ದರು. ಹಾಗೆಯೇ ಯು.ಆರ್. ಅನಂತಮೂರ್ತಿಯವರು "ಅಂಬೇಡ್ಕರವರ ಒಂದು ಭಾಷಣವನ್ನು ಅನುವಾದ ಮಾಡಿಸಲು ಹೇಳಿದ್ದಾರೆ ಎಂದು ಪುಸ್ತಕ ಕೊಟ್ಟರು. ಆಗ ಸಿದ್ಧಲಿಂಗಯ್ಯನವರು ಅದರಲ್ಲಿದ್ದ 'ರಾಜಕೀಯ ಮಡಿವಂತಿಕೆ ಬೇಡ' ಎಂಬ ಅಂಬೇಡ್ಕರ್ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದರು"[23]. ಈ ಲೇಖನವನ್ನು ಶೂದ್ರಪತ್ರಿಕೆಯಲ್ಲಿ ಅಚ್ಚು ಮಾಡಿಸಿದರು.

ಮುಂದೆ ಕನ್ನಡ ಎಂ.ಎ. ಓದುತ್ತಿದ್ದಾಗ ಜಿ.ಎಸ್. ಶಿವರುದ್ರಪ್ಪನವರ ಶಿಷ್ಯತ್ವ ದೊರಕಿತು. ಈ ಸಂದರ್ಭದಲ್ಲಿ ಬಂಡಿಶೇಷಮ್ಮ ಹಾಸ್ಟೆಲಿನಲ್ಲಿ ಪಿ. ಲಂಕೇಶ್ ಭಾಷಣವಿತ್ತು. ಸಿದ್ಧಲಿಂಗಯ್ಯನವರಿಗೆ ಲಂಕೇಶರ ಮಾತಿನ ಶೈಲಿ ಬಹಳವಾಗಿ ಆಕರ್ಷಿಸಿತು. ಏಕೆಂದರೆ ಅವರ ಭಾಷಣದಲ್ಲಿ ಅನೇಕ ಒಳನೋಟಗಳಿದ್ದವು. ಅಂದರೆ ಇಲ್ಲಿ

ಕೆಳಜಾತಿಗಳ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹುರುಪು ತುಂಬುವಂತೆ ಲಂಕೇಶ್ ಮಾತನಾಡಿದ್ದರು ಎಂಬ ಅಂಶವು ಸಿದ್ಧಲಿಂಗಯ್ಯನವರ ಮನ ಕಲಕಿತು ಎಂಬುದನ್ನು ಇಲ್ಲಿ ಅಧ್ಯಯನದ ಮುಖೇನ ತಿಳಿಯಲಾಗಿದೆ.

ಮುಂದುವರಿದು ಕಮ್ಯೂನಿಸ್ಟ್ ಪಕ್ಷದವರು ತುರ್ತು ಪರಿಸ್ಥಿತಿಗೆ ಬೆಂಬಲ ಕೊಟ್ಟಿದ್ದರಿಂದ ಸಿದ್ಧಲಿಂಗಯ್ಯನವರ ಮನಸ್ಸು ಮಾರ್ಕ್‌ವಾದಿ ಪಕ್ಷದ ಕಡೆಗೆ ಹರಿಯಿತು. ಒಂದು ದಿನ ಮೈಸೂರು ಬ್ಯಾಂಕಿನಿಂದ ಕಬ್ಬನ್‌ಪಾರ್ಕ್‌ನ ಕಡೆಗೆ ಕೃಷಿ ಕೂಲಿಕಾರರು ಮೆರವಣಿಗೆ ಹೋಗುತ್ತಿರುವುದನ್ನು ನೋಡಿದರು. ಅಲ್ಲಿದ್ದವರು ಮಾಸಲು ಬಟ್ಟೆಯ ಬರಿಗಾಲ ರೈತರು. "ಇಂದಿರಾಗಾಂಧಿ ಸೋಷಲಿಸಂ ಸಂಜಯ್‌ಗಾಂಧಿ ಕಾರ್ ಫ್ಯಾಕ್ಟ್ರಿ"[24] ಎಂದು ಅವರು ಘೋಷಣೆ ಕೂಗುತ್ತಿದ್ದರು. ಜನ ಮತ್ತು ಅವರ ಘೋಷಣೆ ಮಾರ್ಕ್ಸ್‌ವಾದಿ ಪಕ್ಷಕ್ಕೆ ಸಿದ್ಧಲಿಂಗಯ್ಯ ಹತ್ತಿರವಾಗಲೂ ಈ ಸನ್ನಿವೇಶವೇ ಕಾರಣವಾಯಿತು ಎನ್ನುವ ಅಂಶವನ್ನು ಇಲ್ಲಿ ಗಮನಿಸಲಾಗಿದೆ.

ಅಂತೆಯೇ ಮುಂದೆ ದಲಿತರ ನೋವನ್ನು ಸ್ವತಃ ಅನುಭವಿಸಿ, ಪ್ರತ್ಯಕ್ಷವಾಗಿ ಹೊರವಲಯದಲ್ಲಿ ನೋಡಿದ ಬಡತನ, ಅನಕ್ಷರತೆಯನ್ನು ಹೋಗಲಾಡಿಸುವ ಸಲುವಾಗಿ, ದಲಿತರು ಕೂಡ ವಿದ್ಯಾವಂತರಾಗಿ ಪ್ರತಿಭೆಯಿಂದ ಮುಂದೆ ಬರಲಿ ಎನ್ನುವ ಉದ್ದೇಶದಿಂದ ಹಲವಾರು ಕವಿತೆಗಳನ್ನು ಬರೆಯಲು ಮುಂದಾದರು. ಈ ಅವಧಿಯಲ್ಲಿ ಇವರ ಮೊದಲ ಕೃತಿ 'ಹೊಲೆ ಮಾದಿಗರ ಹಾಡು' ಪ್ರಕಟವಾಯಿತು. ಕಿ.ರಂ. ನಾಗರಾಜ್, ಕಾಳೇಗೌಡ ನಾಗವಾರ, ಡಿ.ಆರ್. ನಾಗರಾಜ್ ಇವರೆಲ್ಲ ಸೇರಿ ಈ ಕೃತಿಯನ್ನು ಪ್ರಕಟಿಸಿದರು. ಮಲ್ಲೇಶ್ವರಂನಲ್ಲಿರುವ ಕೂರ್ಗ್ ಪ್ರಿಂಟರ್ಸ್‌ನಲ್ಲಿ ಮುದ್ರಣವಾದಾಗ ಕಿ.ರಂ. ನಾಗರಾಜ್ ದಿನವೂ ಸೈಕಲಿನಲ್ಲಿ ಬಂದು ಪ್ರೂಫ್ ನೋಡುತ್ತಿದ್ದರು. 'ಹೊಲೆಮಾದಿಗರ ಹಾಡು' ದಾವಣಗೆರೆಯಲ್ಲಿ ನಡೆದ ಪ್ರಗತಿಪಥ ಸಮ್ಮೇಳನದಲ್ಲಿ ಬಿಡುಗಡೆಯಾಯಿತು. ಆಗ ನಿರಂಜನ, ಅನುಪಮ ನಿರಂಜನ, ಬಸವರಾಜ ಕಟ್ಟೀಮನಿ ಪುಸ್ತಕ ಓದಿ ಸಂತೋಷಪಟ್ಟಿದ್ದರು. ಸ್ನೇಹಿತರ ಈ ಮುತುವರ್ಜಿಯಿಂದ "ಈ ಕೃತಿಯ 1000 ಪ್ರತಿಗಳು ಒಂದೇ ವಾರದಲ್ಲಿ ಖರ್ಚಾದವು. ಇಲ್ಲಿಯವರೆಗೆ ಈ ಕೃತಿ 10 ಮುದ್ರಣ ಕಂಡಿದೆ. ಸುಮಾರು 20 ಸಾವಿರ ಕೃತಿಗಳು ಖರ್ಚಾಗಿವೆ"[25]. ಇಲ್ಲಿ ಸಿದ್ಧಲಿಂಗಯ್ಯನವರ ಈ ಕೃತಿ ಹೇಗೆ ಸಹೃದಯರನ್ನು ಆಕರ್ಷಿಸಿತ್ತು ಎನ್ನುವುದನ್ನು ಗಮನಿಸಬಹುದು.

ಸಿದ್ಧಲಿಂಗಯ್ಯ ಡಿ.ಎಲ್. ನರಸಿಂಹಾಚಾರ್ ಚಿನ್ನದ ಪದಕದೊಂದಿಗೆ ಪ್ರಥಮ ಶ್ರೇಣಿಯಲ್ಲಿ ಪದವಿ ಪಡೆದಿದ್ದರು. ಒಂದು ದಿನ ಸೆಂಟ್ರಲ್ ಕಾಲೇಜಿನ ಕಲ್ಲಿನ ಮೇಲೆ ಸಿದ್ಧಲಿಂಗಯ್ಯ ಕುಳಿತಿದ್ದರು. ಕಾಳೇಗೌಡ ನಾಗವಾರ ಮತ್ತು ಡಿ.ಆರ್. ನಾಗರಾಜು ಹುಡುಕುತ್ತ ಬಂದು ಜಿ.ಎಸ್. ಶಿವರುದ್ರಪ್ಪನವರನ್ನು ಕೂಡಲೇ ನೋಡಬೇಕಂತೆ ಎಂದರು. ಮಾರನೆಯ ದಿನ ಮನೆಗೆ ಹೋದಾಗ ಜಿ.ಎಸ್.ಎಸ್.ರವರು "ಕನ್ನಡ ವಿಭಾಗದಲ್ಲಿ ಸಂಶೋಧಕ ಸಹಾಯಕನ ಹುದ್ದೆ ಖಾಲಿ ಇರುವುದಾಗಿಯೂ, ಅದಕ್ಕೆ ಒಂದು ಅರ್ಜಿ ಕೊಡಿ"[26] ಎಂದರು. ಅಲ್ಲಿಯೇ ಅರ್ಜಿ ಬರೆಸಿ ತೆಗೆದುಕೊಂಡರು. ಆ ಸಮಯದಲ್ಲಿ ಡಾ. ಹೆಚ್. ನರಸಿಂಹಯ್ಯ ಉಪಕುಲಪತಿಗಳಾಗಿದ್ದರು. ಈ ಹುದ್ದೆಗೆ ನೇಮಕಾತಿ ಪತ್ರ ಹೊರಡಿಸಿ ಕನ್ನಡ ವಿಭಾಗದಲ್ಲಿ ಸಂಶೋಧಕ ಸಹಾಯಕ ಹುದ್ದೆಗೆ ನೇಮಕ ಮಾಡಿಕೊಂಡರು. ಹೀಗೆ ಬಡತನ, ಹಿಂಸೆ, ನೋವುಗಳಿಂದ ನಲುಗಿದ್ದರೂ ಪ್ರತಿಭೆಯಿಂದ ಹಂತ ಹಂತವಾಗಿ ಅವರು ಬೆಳೆದ ರೀತಿಯನ್ನು ಗ್ರಂಥಗಳ ಅಧ್ಯಯನದ ಮುಖೇನ ಇಲ್ಲಿ

ಗ್ರಹಿಸಲಾಗಿದೆ. ಹೀಗೆ ದಲಿತ ಜಗತ್ತು ಸಾಗಿ ಬಂದ ಈ ದಾರಿಯ ಎಲ್ಲಾ ವಿವರಗಳು ಆ ಲೋಕದ ಅಸ್ಮಿತೆಗಳಾಗುತ್ತವೆ.

ಈ ಆತ್ಮಕಥನವಾದ ಊರುಕೇರಿಯಲ್ಲಿ ಈ ಊರು ಮತ್ತು ಕೇರಿ ಎಂಬ ಪದವೇ ಸೂಚಿಸುವಂತೆ ಗ್ರಾಮೀಣ ಪ್ರದೇಶದಲ್ಲಿನ ದಲಿತರ ಕೇರಿ ಎಷ್ಟು ಅವಮಾನೀಯ ಸ್ಥಿತಿಯಲ್ಲಿತ್ತು ಹಾಗೂ ಸವರ್ಣೀಯ ಸಮಾಜದ ಹಿಂಸೆ ದಲಿತರಿಗೆ ಹೀಗೆ ಆತಂಕಕಾರಿಯಾಗಿತ್ತು ಎಂಬ ಅಂಶಗಳನ್ನು ಈ ಅಧ್ಯಾಯದಲ್ಲಿ ಗುರ್ತಿಸುವ ಪ್ರಯತ್ನದ ಮೂಲಕ ಹಲವಾರು ಅಂಶಗಳನ್ನು ಮುಖ್ಯವಾಹಿನಿಗೆ ತಂದಿದ್ದೇನೆ. "ಬಡತನ ಮತ್ತು ಪ್ರತಿಭೆಗಳ ನಡುವಣದ ಸಂಬಂಧ ಈ 'ಊರು ಕೇರಿ'ಯ ಒಂದು ಮುಖ್ಯ ವಸ್ತು"[27]. ಇಂದಿನ ದಲಿತ ಸಮುದಾಯದ ಮಕ್ಕಳಿಗೆ ಬದ್ಧತೆಯಿದ್ದರೆ ತಾವು ಹೇಗೆ ಮುಖ್ಯವಾಹಿನಿಗೆ ಬರಲು ಸಾಧ್ಯವಿದೆ ಎಂಬುದನ್ನು ಇಲ್ಲಿ ಮನಗಾಣಬೇಕಿದೆ.

ಊರುಕೇರಿ ಭಾಗ-2ರಲ್ಲಿ 'ಹೊಲೆಮಾದಿಗರ ಹಾಡು' ಶೀರ್ಷಿಕೆಯಲ್ಲಿ ಚಂದ್ರಶೇಖರ ಪಾಟೀಲರು ಸಂಕ್ರಮಣ ಪತ್ರಿಕೆಯಲ್ಲಿ ಸಿದ್ಧಲಿಂಗಯ್ಯನವರ ಬಗ್ಗೆ "ಹೊಲೆ ಮಾದಿಗರ ಹಾಡಿನ ಕವಿ"[27] ಎಂದು ಕರೆದಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಇವರ ಕವಿತೆಗಳನ್ನು 'ಬೆಂಕಿ ಉಗುಳುವ ಕಾವ್ಯ' ಎಂದು ದೇಶ ಕುಲಕರ್ಣಿ ಬರೆದರು. ಸಾವಿರಾರು ಪ್ರತಿಗಳು ಹೊರಬಂದವು. ಈ ಸಂದರ್ಭದಲ್ಲೇ ಸಿದ್ಧಲಿಂಗಯ್ಯನವರಿಗೆ ಕವಿ ಎಂಬ ಹೆಸರು ಬರಲು ಕಾರಣವಾಯಿತು.

ಬೆಂಗಳೂರಿಗೆ ಹತ್ತಿರವಿರುವ ಒಂದು ಹಳ್ಳಿಯಲ್ಲಿ ದಲಿತ ಸಹೋದರರು ಒಂದು ಸಮಾರಂಭ ಏರ್ಪಡಿಸಿದ್ದರು. ರಾಜ್ಯದ ಕೆಲವು ಪ್ರಮುಖ ದಲಿತ ನಾಯಕರು ಅತಿಥಿಗಳಾಗಿದ್ದರು, ಅದರಲ್ಲಿ ಸಿದ್ಧಲಿಂಗಯ್ಯನವರು ಒಬ್ಬರಾಗಿದ್ದರು. ಶೋಷಿತ ವರ್ಗವನ್ನು ಜಾಗೃತಿಗೊಳಿಸುವುದೇ ಈ ಸಮಾರಂಭದ ಧ್ಯೇಯವಾಗಿತ್ತು. ಹಿರಿಯ ನಾಯಕರು ಸಭಿಕರನ್ನು ಅವಲೋಕಿಸಿ ಸಭೆಯಲ್ಲಿ ಯಾರೂ ಹೇಳದಿರುವ ವಿಷಯವನ್ನು ಹೇಳಿದರು. "ನೀವೆಲ್ಲಾ ಹೀಗೆ ಕುಳಿತರೆ ಆಗುವುದಿಲ್ಲ, ಎದ್ದೇಳಿ ಹಿಟ್ಟಿನ ದೊಣ್ಣೆ ಹಿಡಿದುಕೊಂಡು ಮುನ್ನುಗ್ಗಿ, ಅದೂ ಇಲ್ಲದಿದ್ದರೆ ಪೊರಕೆ ಹಿಡಿದು ನುಗ್ಗಿ, ಆ ಊರಿನ ದೇವಸ್ಥಾನಕ್ಕೆ ನುಗ್ಗಿ"[28] ಎಂದು ಆವೇಶದಿಂದ ಕರೆ ಕೊಟ್ಟರು. ಈ ಕರೆಯಿಂದ ಮಹಿಳೆಯರು ಆವೇಶಭರಿತರಾದರು, ಸ್ಫೂರ್ತಿಗೊಂಡರು. ಈ ಹಿರಿಯ ನಾಯಕರು ಮುಂದುವರಿಸಿ ಪುರುಷರನ್ನೇ ಹುರಿದುಂಬಿಸಿದರು. ಎಲ್ಲರೂ ದೇವಸ್ಥಾನದ ಒಳಹೊಕ್ಕರು. ಇದರ ಪರಿಣಾಮ ಪಕ್ಕದ ಹಳ್ಳಿಗಳ ಮೇಲ್ಜಾತಿಯ ನೂರಾರು ಜನ ಮಚ್ಚು, ಕತ್ತಿ, ಕೊಡಲಿಗಳೊಂದಿಗೆ ಬಂದು ದಲಿತರ ಮೇಲೆ ಬಿದ್ದರು. ಹೆಂಗಸರು, ಮಕ್ಕಳು ದಿಕ್ಕಾಪಾಲಾಗಿ ಓಡಿದರು. ಎಲ್ಲೆಲ್ಲೂ ಗೋಳಾಟ, ಚೀರಾಟ ತುಂಬಿತು. ಈ ಸಮಾರಂಭದಲ್ಲಿ ಭಾಷಣ ಮಾಡಿದವರು ತಮಗೆ ಸಿಕ್ಕ ವಾಹನ ಏರಿ ಪರಾರಿಯಾದರು. ಈ ಘರ್ಷಣೆ ಎರಡೂ ಗುಂಪಿನ ಬಡವರ ಹೊಡೆದಾಟದಂತೆ ಸಿದ್ಧಲಿಂಗಯ್ಯನವರಿಗೆ ಕಂಡಿತು. ಏಕೆಂದರೆ ಅಲ್ಲಿನ ಸವರ್ಣೀಯ ಮುಗ್ಧರು ಜಾತೀಯತೆಯ ಅಜ್ಞಾನದಿಂದ ದಾರಿ ತಪ್ಪಿದ್ದರು ಎನ್ನುವ ಅರಿವು ಸಿದ್ಧಲಿಂಗಯ್ಯನವರ ಮನಸ್ಸಿಗೆ ಬಂತು. ಆದರೂ ಈ ಸ್ಥಳದಲ್ಲಿ ನಿಂತಿರಲು ಧೈರ್ಯವಿಲ್ಲದೆ, ಪಲಾಯನ ಮಾಡಲೂ ಮನಸ್ಸು ಒಪ್ಪದೆ ಡೋಲಾಯಮಾನವಾಗಿತ್ತು. ಹೇಗೋ ಅತಿಥಿಯಾಗಿ ಕರೆತಂದಿದ್ದ ಗೆಳೆಯರು ಪ್ರಾಣರಕ್ಷಣೆಯ ದೃಷ್ಟಿಯಿಂದ ಹೊಲಗದ್ದೆಗಳಲ್ಲಿ ಪ್ರಯಾಣ ಮಾಡಿ ಬಸ್ ಮಾರ್ಗವನ್ನು ತಲುಪಿ ಆ ಹಳ್ಳಿಯಿಂದ ಬೆಂಗಳೂರಿಗೆ ತಲುಪಿಸಿದರು.

ಈ ಘಟನೆಯಿಂದ ಮನುಷ್ಯ ಇದ್ದಕ್ಕಿದ್ದಂತೆ ಮನುಷ್ಯತ್ವವನ್ನು ಮರೆತು ಜಾತೀಯತೆಯ ಹೆಸರಲ್ಲಿ ಹೇಗೆ ಮೃಗವಾಗುತ್ತಾನೆ ಎಂಬ ಚಿತ್ರಣವನ್ನು ಇಲ್ಲಿ ನೋಡಲಾಗಿದೆ.

ಒಮ್ಮೆ ಜ್ಞಾನಭಾರತಿಯ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸಂಶೋಧನಾ ಸಹಾಯಕರಾಗಿ ಶ್ರೀಯುತರು ಕೆಲಸ ಮಾಡುತ್ತಿದ್ದಾಗ ಅವರಿಗೆ ಒಂದು ದೂರವಾಣಿ ಕರೆ ಬಂದಿತ್ತು. ಆಗ ಡಾ. ಜಿ.ಎಸ್. ಶಿವರುದ್ರಪ್ಪನವರು ವಿಭಾಗದ ಮುಖ್ಯಸ್ಥರಾಗಿದ್ದರು. ಜಿ.ಎಸ್.ಎಸ್.ರವರನ್ನು ಕಂಡರೆ ಎಲ್ಲರಿಗೂ ಭಯ. ಭಯ-ಭಕ್ತಿಯಿದ್ದರೂ ಮುಖ್ಯಸ್ಥರ ಕೊಠಡಿಗೆ ಹೋಗಿ ದೂರವಾಣಿ ಕರೆಯಲ್ಲಿ ಮಾತನಾಡಿದರು. ಕರೆ ಬಂದದ್ದು ಡಾ. ಕೆ. ನರಸಿಂಹಯ್ಯನವರದಾಗಿತ್ತು. ಇವರು ಸಿದ್ಧಲಿಂಗಯ್ಯನವರಿಗೆ ಅಷ್ಟೊಂದು ಹತ್ತಿರವಲ್ಲದಿದ್ದರೂ ದೂರವಾಣಿ ಕರೆಯಲ್ಲಿ "ಸಿದ್ಧಲಿಂಗಯ್ಯನವರೇ ಈಗ ನನ್ನ ಮನೆಯಲ್ಲಿ ದಲಿತರ ಸಭೆ ನಡೆಯುತ್ತಿದೆ, ಎಲ್ಲರೂ ಬಂದಿದ್ದಾರೆ, ನೀವೇಕೆ ಬಂದಿಲ್ಲ?"[29] ಎಂದರು.

ಶ್ರೀಯುತರು ಆಶ್ಚರ್ಯದಿಂದಲೇ ಅವರ ಮನೆಗೆ ಹೋದರೂ ಅಲ್ಲಿ ಯಾವ ಸಭೆಯೂ ಇರಲಿಲ್ಲ. ಮಧ್ಯಾಹ್ನದ ಊಟ ಅಲ್ಲಿಯೇ ಮಾಡಿ ವಿಷಯವೇನೆಂದು ಕೇಳಲು ಡಾ. ಕೆ. ನರಸಿಂಹಯ್ಯನವರು ನೋವಿನಿಂದಲೇ 'ಜ್ಞಾನಭಾರತಿಯ ವಿಭಾಗದಲ್ಲಿ ಗೋಡೆಗಳ ಮೇಲೆ ತಮ್ಮ ಬಗ್ಗೆ ಕೆಟ್ಟದ್ದಾಗಿ ಬರೆದಿದ್ದಾರೆ ಹಾಗೆ ಬರೆಯುವುದನ್ನು ನಿಲ್ಲಿಸಬೇಕು' ಎಂದು ಹೇಳಿ ಇವರೇ ಸರಿಯಾದ ವ್ಯಕ್ತಿಯೆಂದು ಭಾವಿಸಿ, ಕೆಟ್ಟದ್ದಾಗಿ ಬರೆದವರನ್ನು ತಣ್ಣಗಾಗಿಸುವಂಥ ಒಂದು ಘೋಷಣೆ ಬೇಕೆಂದು ವಿನಂತಿಸಿದಾಗ ಶ್ರೀಯುತರು ಒಂದು ವಾಕ್ಯ ಹೇಳಿದರು "ಜ್ಞಾನಭಾರತಿಯಲ್ಲಿ ವಿಷ ಸರ್ಪಗಳಿವೆ ಎಚ್ಚರ! ಎಚ್ಚರ"[30] ಎಂಬುದೇ ಈ ಘೋಷಣೆ. ಇದನ್ನು ಕೇಳುತ್ತಲೇ ಡಾ. ಕೆ. ನರಸಿಂಹಯ್ಯನವರು ಸಂತೋಷಭರಿತರಾಗಿ 'ನೀವು ಸಾಹಿತಿಯಾದದ್ದಕ್ಕೆ ಸಾರ್ಥಕವಾಯಿತು' ಎಂದರು. ಬಾಬಾ ಸಾಹೇಬ್ ಅಂಬೇಡ್ಕರ್, ಭಗವಾನ್ ಬುದ್ಧರು ನಿಮಗೆ ಒಳ್ಳೆಯದು ಮಾಡಲಿ ಎಂದು ಹರಸಿದರು. ಮಾರನೆಯ ದಿನ ಆ ಘೋಷಣೆ ಅಲ್ಲಲ್ಲಿ ರಾರಾಜಿಸುತ್ತಿತ್ತು. ಡಾ. ನರಸಿಂಹಯ್ಯನವರೂ ಸಂಪ್ರದಾಯಬದ್ಧ ಧೋರಣೆಯನ್ನು ಹೊಂದಿದ್ದರು. ದಲಿತರ ಪರವಾಗಿ ಕಾಳಜಿ ಹೊಂದಿದವರಾಗಿದ್ದು ಶ್ರೀಯುತರನ್ನು ಪ್ರೋತ್ಸಾಹಿಸುತ್ತಿದ್ದರು.

ಈ ಮೇಲಿನ ಘಟನೆಯ ಅಂಶಗಳನ್ನು ಗಮನಿಸಿದಾಗ ಡಾ. ಸಿದ್ಧಲಿಂಗಯ್ಯನವರಿಗೆ ಚಿಕ್ಕಪುಟ್ಟ ಕೆಲಸಗಳೆಂಬ ಬೇಧ ಭಾವವಿರಲಿಲ್ಲ. ಅವರ ಕರೆಗೆ ಸ್ಪಂದಿಸಿದ ರೀತಿಯಲ್ಲಿ ಪ್ರಾಮಾಣಿಕತೆ ಇತ್ತು, ಇವರು ವಿಧೇಯತೆಗೆ, ಶ್ರದ್ಧೆಗೆ, ವಿನಯವಂತಿಕೆಗೆ ಹಾಗೂ ನಿಶ್ಚಿತ ಕಾರ್ಯಕ್ಕೆ ಎಷ್ಟು ಮಹತ್ವ ನೀಡುತ್ತಿದ್ದರೆಂಬುದು ಇಲ್ಲಿ ಅರಿವಾಗುತ್ತದೆ.

ಅಧಿಕಾರಿ–ಸೇವಕ, ಶ್ರೀಮಂತ–ಬಡವ, ಸವರ್ಣೀಯ–ದಲಿತ, ಪ್ರತಿಭಾವಂತ–ಸಾಮಾನ್ಯ, ಚಿಕ್ಕ ಸಂಘಟನೆ–ದೊಡ್ಡ ಸಂಘಟನೆ ಎಂಬ ತಾರತಮ್ಯ ಭೇದ ತೋರದೆ ಎಲ್ಲವನ್ನು, ಎಲ್ಲರನ್ನು ಸಮಾನವಾಗಿ ಕಾಣುವ ಡಾ. ಸಿದ್ಧಲಿಂಗಯ್ಯನವರ ಗುಣ ಪ್ರತಿಯೊಬ್ಬರಿಗೂ ಮಾದರಿಯಾಗುವಂತದ್ದು ಆಗಿದೆ.

ಮುಂದುವರಿದು ಸಿದ್ಧಲಿಂಗಯ್ಯನವರ ಊರುಕೇರಿ ಭಾಗ–2ರಲ್ಲಿರುವ ಅನೇಕ ಅಧ್ಯಾಯಗಳು ಬಸ್‌ಗಳು ಇಲ್ಲದಿದ್ದಾಗ ಬಸ್‌ಸ್ಟಾಂಡಿನಲ್ಲೇ ನಿದ್ದೆ ಮಾಡಿದ ರೀತಿ ದಲಿತರ ಮೆರವಣಿಗೆಗಳಲ್ಲಿ ಭಾಗವಹಿಸುವ ದಿನಗಳಲ್ಲಿ

ಸವರ್ಣೀಯರಿಂದ ಹಿಂಸೆಗೊಳಗಾದ ಅನುಭವ, ತಮ್ಮ ಆಪ್ತರ ಪರಿಚಯದ ನೆನಪಿನ ಅಂಗಳ, ದಲಿತರ ಮೇಲಾದ ದೌರ್ಜನ್ಯ, ಪೊಲೀಸರಿಂದಲೂ ನೆರವು ಸಿಗದೆ ನಲುಗಿ ಹೋಗಿದ್ದ ದಲಿತರ ಹಿಂಸೆ, ಹಲವಾರು ಸಾಹಿತಿಗಳ ಪ್ರಭಾವದಿಂದ ತಾವು ಕಲಿತ ಜೀವನಾನುಭವ, ಬಂಡಾಯದ ಚಿತ್ರಣ ಪಡಿಮೂಡಿರುವುದನ್ನು ಈ ಭಾಗದಲ್ಲಿ ಅಭ್ಯಸಿಸಿದ್ದೇನೆ. ಇವೆಲ್ಲಾ ಒಟ್ಟಾರೆ ದಲಿತ ಲೋಕ ಅನುಭವಿಸಿದ ಯಾತನೆ ಮತ್ತು ಇದರಿಂದ ಹೊರ ಬರಲು ಮಾಡಿದ ಪ್ರಯತ್ನಗಳಿಗೆ ಗುರುತುಗಳಾಗಿ ನಿಲ್ಲುತ್ತವೆ.

ಒಟ್ಟಾರೆ ಈ ಊರುಕೇರಿ ಆತ್ಮಕಥನದಲ್ಲಿ ದಲಿತರ ವ್ಯಕ್ತಿತ್ವವನ್ನು ಸಮಕಾಲೀನ ಸಾಂಸ್ಕೃತಿಕ ರಾಜಕಾರಣವೂ ವ್ಯಾಖ್ಯಾನಿಸಿರುವ ರೀತಿಯಲ್ಲಿ ಹುಡುಕಲು ಸಾಧ್ಯವಿದೆ. ಹಿಂಸೆ, ಆತಂಕ, ರೊಚ್ಚು, ರೋಷ ಭಾವಗಳು ಪ್ರಧಾನವಾಗಿರುವ ರೀತಿಯಲ್ಲಿ ಅಲ್ಲದೆ, ಸಿದ್ಧಲಿಂಗಯ್ಯನವರ ಆತ್ಮಕಥೆಯಲ್ಲಿ ದಲಿತ ಲೇಖಕರ ಕೃತಿಗಳಲ್ಲಿ ನಾವು ನಿರೀಕ್ಷಿಸಬಹುದಾದ ಅನೇಕ ಅಂಶಗಳು ಇವೆ. ಆದರೆ ಇಡೀ ಕೃತಿಯಲ್ಲಿ ಹೊಸದಾದ, ಅನಿರೀಕ್ಷಿತವಾದ ಒಂದು ಮುಖ್ಯಾಂಶವೂ ಇದೆ. ಅದೇ ಬಡತನ ಮತ್ತು ಹಿಂಸೆಯ ಬಗ್ಗೆ ಇದ್ದ ಭೀತಿ, ಕ್ರಮೇಣ ಗೈರುಹಾಜರಿಯಾದದ್ದು. ಈ ಕೃತಿಯ ವಸ್ತು ದಲಿತ ಕೃತಿಗಳಿಗೆ ಸಾಮಾನ್ಯವಾದದ್ದು, ಸಹಜವಾದದ್ದು. ಆದರೆ ಈ ವಸ್ತುವನ್ನು ನಿರ್ವಹಿಸುವ ಧ್ವನಿ ಭಿನ್ನವಾಗಿದೆ. ಜಾತಿ, ಅವಮಾನಗಳಿರದ ದಲಿತ ಕಥೆ ಸುಳ್ಳು. ಆದರೆ ಅವನ್ನೆಲ್ಲಾ ಪ್ರತಿಭೆಯ ಮೂಲಕ ಲೇಖಕ ಗೆಲ್ಲುತ್ತಾನೆ ಎಂಬ ಮಾತು ನಿಜ. ಹಾಗಾಗಿ ಈ ಆತ್ಮಕಥನ ಹೆಚ್ಚು ಬಾಲ್ಯ ಮತ್ತು ಕಾಲೇಜು ದಿನಗಳನ್ನು ಕುರಿತದ್ದು ಆಗಿದೆ ಎಂಬುದು ಕುತೂಹಲದ ವಿಷಯ. ವಯಸ್ಸು ಸಂವೇದನೆಗೆ ತೀವ್ರವಾಗಿ ಆತ್ಮಕಥನ ಬರೆಯುವುದು ಕಷ್ಟವಾಗುತ್ತದೆ. ಹೀಗಾಗಿ ಸಾಮಾಜಿಕ ಸಂಬಂಧಗಳ ತೆಳು ವರ್ಣನೆಗಳಿಗಾಗಿ ಅವು ಕೊನೆಯಾಗುತ್ತವೆ. ಕನ್ನಡದಲ್ಲಿ ಆತ್ಮಕಥನಗಳು ನಗರಗಳಲ್ಲಿ ಇದ್ದು ಇಲ್ಲದಂತೆ ಇವೆ. ಗ್ರಾಮೀಣ ಜೀವನದ ವಿವರಗಳು ಬಂದಷ್ಟು ಉತ್ಕಟವಾಗಿ ನಗರಗಳಲ್ಲಿ ಬರುವುದಿಲ್ಲ. ವಿಶೇಷವಾಗಿ ಆತ್ಮಕಥನಗಳಿಗೆ ಮೀಸಲಾದ ಸಮಸ್ಯೆ ಇದೇ ಎನ್ನುವುದನ್ನು ಇಲ್ಲಿ ಗಮನಿಸಬಹುದು.

ಈ ಆತ್ಮಕಥನದಲ್ಲಿ ನೋವಿದ್ದರೂ ಹಾಸ್ಯಪ್ರಜ್ಞೆಗಳನ್ನೊಳಗೊಂಡಿದ್ದು ಆತ್ಮಕಥೆಯಿಂದ ಆನಂದಾನುಭವವೂ, ಅದರಲ್ಲಿನ ಲೋಕಸ್ವರೂಪ ನಿರೂಪಣಾ ಸಾಹಿತ್ಯದಿಂದ ಜ್ಞಾನೋದಯವೂ, ನೊಂದ ಜನಾಂಗಕ್ಕೆ ಚಿಲುಮೆಯ ಶಕ್ತಿಯೂ ಆಗಿರುವ ಈ ಆತ್ಮಕಥೆ ಮುಂದಿನ ಜನಾಂಗಕ್ಕೆ ಬೆಳಕಾಗಲಿ ಎನ್ನುವ ಹಿನ್ನೆಲೆಯಲ್ಲಿ ಈ ಅಧ್ಯಾಯವನ್ನು ಕೈಗೊಂಡು ಅಸ್ಮಿತೆಯ ಹುಡುಕಾಟದ ಹಲವಾರು ಅಂಶಗಳನ್ನು ಇಲ್ಲಿ ಗುರ್ತಿಸಿ ಮುಖ್ಯ ವಾಹಿನಿಗೆ ತರಲಾಗಿದೆ

ಕೊನೆ ಟಿಪ್ಪಣಿ

1. ಡಾ. ಸಿದ್ಧಲಿಂಗಯ್ಯ : ಊರುಕೇರಿ ಭಾಗ-೧, ಆತ್ಮಕಥನ ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 2012 ಪುಟ 16.
2. ಅದೇ ಪುಸ್ತಕ : ಪುಟ 10
3. ಅದೇ ಪುಸ್ತಕ : ಪುಟ 15
4. ಪ್ರಜಾವಾಣಿ ಲೇಖನ : ದಿನಾಂಕ 13-06-2014 ಪುಟ 06
5. ಪ್ರಜಾವಾಣಿ ಲೇಖನ : ದಿನಾಂಕ 13-06-2014 ಪುಟ 06
6. ಡಾ. ಸಿದ್ಧಲಿಂಗಯ್ಯ : ಊರುಕೇರಿ ಭಾಗ-೧, ಆತ್ಮಕಥನ ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 2012 ಪುಟ 23
7. ಅದೇ ಪುಸ್ತಕ : ಪುಟ 26
8. ಅದೇ ಪುಸ್ತಕ : ಪುಟ 32
9. ಅದೇ ಪುಸ್ತಕ : ಪುಟ 36
10. ಅದೇ ಪುಸ್ತಕ : ಪುಟ 42
11. ಅದೇ ಪುಸ್ತಕ : ಪುಟ 46
12. ಅದೇ ಪುಸ್ತಕ : ಪುಟ 47
13. ಅದೇ ಪುಸ್ತಕ : ಪುಟ 66
14. ಅದೇ ಪುಸ್ತಕ : ಪುಟ 66
15. ಅದೇ ಪುಸ್ತಕ : ಪುಟ 67
16. ಅದೇ ಪುಸ್ತಕ : ಪುಟ 68
17. ಅದೇ ಪುಸ್ತಕ : ಪುಟ 68
18. ಅದೇ ಪುಸ್ತಕ : ಪುಟ 81
19. ಅದೇ ಪುಸ್ತಕ : ಪುಟ 82
20. ಅದೇ ಪುಸ್ತಕ : ಪುಟ 83
21. ಅದೇ ಪುಸ್ತಕ : ಪುಟ 98
22. ಅದೇ ಪುಸ್ತಕ : ಪುಟ 102
23. ಅದೇ ಪುಸ್ತಕ : ಪುಟ 103
24. ಅದೇ ಪುಸ್ತಕ : ಪುಟ 105
25. ಅದೇ ಪುಸ್ತಕ : ಪುಟ 112
26. ಅದೇ ಪುಸ್ತಕ : ಪುಟ 112
27. ಡಾ. ಸಿದ್ಧಲಿಂಗಯ್ಯ : ಊರುಕೇರಿ ಭಾಗ-೨, ಆತ್ಮಕಥನ ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು 2009 ಪುಟ 01.
28. ಅದೇ ಪುಸ್ತಕ : ಪುಟ 113
29. ಅದೇ ಪುಸ್ತಕ : ಪುಟ 167
30. ಅದೇ ಪುಸ್ತಕ : ಪುಟ 169

ಅಧ್ಯಾಯ-೪

ಹೊಸ ಸಮುದಾಯ ಮೀಮಾಂಸೆಯ ರಚನೆಯ ಪ್ರಯಾತ್ನ

ದಲಿತರು ಇಂದಿಗೂ ತಮ್ಮ ಮೇಲೆ ನಡೆಯುತ್ತಿರುವ ಮಾನಸಿಕ ಹಿಂಸೆ ಕೌರ್ಯಗಳಿಂದ ಸಂಪೂರ್ಣರಾಗಿ ಮುಕ್ತರಾಗಿಲ್ಲ. ಈಗಲೂ ನೋವಿನಿಂದ ಪರಿತಪಿಸುತ್ತಿದ್ದಾರೆ. ಶಿಕ್ಷಣ ನೀತಿ, ಸರ್ಕಾರದ ಕಾನೂನುಗಳ ಬಲದಿಂದ ಸ್ವಲ್ಪಮಟ್ಟಿಗಾದರೂ ಸಬಲೀಕರಣಗೊಳ್ಳಲು ದಲಿತರು ಇಂದು ಪ್ರಯತ್ನಿಸುತ್ತಿದ್ದಾರೆ. ಸಿದ್ಧಲಿಂಗಯ್ಯನವರ ಆತ್ಮಕಥನ ಈ ಬದಲಾವಣೆಯ ವಿವಿಧ ಹಂತಗಳನ್ನು ಪರಿಚಯಿಸುತ್ತಿದೆ. ಇದಕ್ಕೆ ಹಿನ್ನಲೆಯಾಗಿ ಭಾರತದಲ್ಲಿ ದಲಿತ ಸಮುದಾಯವು ಸಾಗಿ ಬಂದ ದಾರಿಯನ್ನು ಅವಲೋಕಿಸುವುದು ಅಗತ್ಯವಾಗಿದೆ. ಅತ್ಯಂತ ಕೆಳಸ್ತರದಲ್ಲಿದ್ದ ಈ ಸಮುದಾಯ ಬದಲಾವಣೆಯತ್ತ ಚಲಿಸುತ್ತಿದೆ. ಇಂತಹ ಸ್ಥಿತ್ಯಂತರಗಳನ್ನು ಗಮನಿಸಿದಾಗ ಇಂದು ಹೊಸದಾಗಿ ಸಬಲೀಕರಣಗೊಳ್ಳುತ್ತಿರುವ ಸಮುದಾಯವಾಗಿ ಈ ದಲಿತ ಜಗತ್ತು ಪರಿವರ್ತನೆಗೊಳ್ಳುತ್ತಿದೆ.

ಪ್ರಪಂಚದ ಪ್ರತಿ ಸಮಾಜದಲ್ಲಿಯೂ ಹಲವಾರು ಬಗೆಯ ಗುಂಪುಗಳನ್ನು ನಾವು ಕಾಣುತ್ತೇವೆ ಅದರಲ್ಲಿ ದಲಿತರು ಸವರ್ಣೀಯರು ಶ್ರೀಮಂತ-ಬಡವ, ಮುಂದುವರಿದ ಹಾಗೂ ಹಿಂದುಳಿದ ಕಪ್ಪುಜನ, ಬಿಳಿಜನ ಹೀಗೆ ಹಲವು ಬಗೆಯ ಗುಂಪುಗಳಿವೆ. ಪ್ರಪಂಚದ ಅತ್ಯಂತ ಅಭಿವೃದ್ದಿ ಪಡೆದ ಪ್ರಗತಿಶೀಲ ದೇಶಗಳಲ್ಲಿಯೂ ಇಂತಹದೇ ವಾತಾವರಣವನ್ನು ಕಾಣುತ್ತೇವೆ. ಬಣ್ಣದ ಕುಲದ ಆಧಾರದ ಮೇಲೆ ವರ್ಗೀಕರಣಗೊಂಡಿರುವ ಸಮಾಜವನ್ನು ಕಾಣುತ್ತೇವೆ. ಅಂತೆಯೇ ಸವರ್ಣೀಯರು ದಲಿತರನ್ನು ಜೀತದಾಳುಗಳಿಗಿಂತಲೂ ತುಚ್ಚವಾಗಿ ನೋಡುತ್ತಿದ್ದರು. ಇಂದಿಗೂ ಇದೇ ಪರಿಸ್ಥಿತಿ ಇದೆ. ಅವರ ಮೇಲೆ ದಬ್ಬಾಳಿಕೆ ಮಾಡುವುದು ಹೀಗೆ ಅವರ ಮೇಲೆ ಸಂಪೂರ್ಣ ಹತೋಟಿಯನ್ನಿಟ್ಟುಕೊಳ್ಳುತ್ತಿದ್ದರು ನಂತರದಲ್ಲಿ ಇಂತಹ ನರಕಸದೃಶ್ಯ ವಾತಾವರಣದಿಂದ ದಲಿತರನ್ನು ಮೇಲೆತ್ತುವ ಪ್ರಯತ್ನಗಳು ನಡೆದಿವೆ ಸುಪ್ರಸಿದ್ದ ದಲಿತ ಸಾಹಿತಿಗಳು ದಲಿತರಲ್ಲಿ ಅರಿವನ್ನುಂಟುಮಾಡಿ ತಮ್ಮ ಹೀನಸ್ಥಿತಿಗೆ ಕಾರಣರಾದವರ ವಿರುದ್ದ ಹೋರಾಡಲು ಪ್ರೇರೇಪಿಸಿ ಹೋರಾಟದ ಹಾದಿ ತೋರಿದರು ಅನೇಕ ಕಡೆ ದಲಿತರೇ ಸಂಘಟಿತರಾಗಿ ದಂಗೆ ಎದ್ದರು ದಲಿತ ಸಾಹಿತಿಗಳು ತಮ್ಮ ಭಾಷಣ ಬರವಣಿಗೆಗಳಿಂದ ಜನರಲ್ಲಿ ಧೈರ್ಯ ತುಂಬಿದರು ಮತ್ತು ಹೊಸ ಆಲೋಚನೆಗಳನ್ನು ಹುಟ್ಟು ಹಾಕಿದರು. ಇದನ್ನು ಪ್ರಸಿದ್ದ ವಿಚಾರವಂತ ಸಾಹಿತಿಗಳು ಸಹ ಬೆಂಬಲ ನೀಡಿ ಉತ್ತೇಜಿಸಿದರು. ಅಮೇರಿಕ ಇಂದು ಪ್ರಗತಿ ಶೀಲ ದೇಶಗಳಲ್ಲಿ ಪ್ರಧಾನ ಸ್ಥಾನವನ್ನು ಪಡೆದುಕೊಂಡಿದೆ. ಇಲ್ಲಿಯೂ ಸಹ ಸಂಪತ್ತು ಪ್ರಧಾನ ಸ್ಥಾನವನ್ನು ಪಡೆದುಕೊಂಡಿದೆ ಇಲ್ಲಿಯೂ ಸಹ ಸಂಪತ್ತು ಸಮೃದ್ದಿಯಾಗಿದ್ದರೂ ಸವರ್ಣೀಯ-ದಲಿತರಂತೆ, ಕಪ್ಪು ಜನ-ಬಿಳಿಯ ಜನರೆಂದು 2 ಗುಂಪುಗಳಿದ್ದು ಇವರ ನಡುವೆ ಭಿನ್ನಾಭಿಪ್ರಾಯಗಳಿವೆ. ಇವರಲ್ಲಿಯೂ ಆಗಾಗ್ಗೆ ಘರ್ಷಣೆಗಳಿವೆ ಎಂಬುದನ್ನು ಈ ಕೆಳಗಿನ ಅಂಶದಿಂದ ಮನಗಾಣಬಹುದು. ಕಪ್ಪುಜನಾಂಗದವರಾದ ನೀಗ್ರೋ ಜನರು ಆಫ್ರಿಕಾ ಖಂಡದಿಂದ ಅಮೇರಿಕಾಗೆ ಬಂದು ನೆಲೆಸಿದವರು. ಅವರನ್ನು ಗುಲಾಮರನ್ನಾಗಿ ಪಶುಗಳಿಗಿಂತಲೂ ಹೀನಾಯವಾಗಿ

ಕಾಣಲಾಗುತ್ತಿತ್ತು. ಅಮೇರಿಕಾದ ಅಧ್ಯಕ್ಷರಾಗಿದ್ದ ಅಬ್ರಾಹಂ ಲಿಂಕನ್ ಈ ನಿಗ್ರೋ ಗುಂಪಿನ ಸಮಾಜಕ್ಕೆ ಸೇರಿದವರು. ಇವರು ತನಗೆ ಅಧಿಕಾರ ಸಿಕ್ಕರೆ ಗುಲಾಮಗಿರಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದಾಗಿ ಶಪಥ ಮಾಡಿ ಹಾಗೆಯೇ ನಡೆದುಕೊಂಡರು.

ಈಗಿನ ದಿನಗಳಲ್ಲಿ ಕಪ್ಪು ಜನರು ನಿರ್ಭಯರಾಗಿ, ವಿದ್ಯಾವಂತರಾಗಿ ಎಲ್ಲಾ ಕ್ಷೇತ್ರಗಳಲ್ಲಿ ಪಾಲ್ಗೊಂಡಿದ್ದಾರೆ. ಕ್ರೀಡೆಯಲ್ಲಿ ಜಗತ್ತಿನಲ್ಲೇ ಪ್ರಸಿದ್ಧಿ ಪಡೆದಿದ್ದಾರೆ. ಇಂದಿನ ಅಧ್ಯಕ್ಷರಾದ ಬರಾಕ್ ಒಬಾಮ ಸಹ ಈ ಜನಾಂಗದವರೇ ಆಗಿದ್ದಾರೆ. ಈ ಕಪ್ಪು ಜನರ ಧೈರ್ಯ, ದೃಢಸಂಕಲ್ಪ ಕಪ್ಪು ಜನಾಂಗದ ಯಶಸ್ಸಿಗೆ ಕಾರಣವಾಯಿತು. ಆದರೆ ನಮ್ಮ ಭಾರತದ ಚಿತ್ರಣವೇ ಬೇರೆರೀತಿಯದು. ಇಲ್ಲಿ ಇಡೀ ಪ್ರಪಂಚದಲ್ಲಿ ಎಲ್ಲಿಯೂ ಕಂಡುಬರದ ತನ್ನದೇ ವಿಶಿಷ್ಟ ರೀತಿಯ ಜಾತೀ ವ್ಯವಸ್ಥೆ ಒಂದು ಸಾಮಾಜಿಕ ಕಳಂಕವಾಗಿದೆ. ದಲಿತರು ಬಡತನದಿಂದ ನರಳುವಂತೆ ಮಾಡಿದೆ ಕಾರಣ ಇಲ್ಲಿನ ಜಾತಿ ಪದ್ದತಿ. ವರ್ಣಾಶ್ರಮದಿಂದ ಜಾತಿಪದ್ದತಿಗೆ ಸ್ಥಿತ್ಯಂತರಗೊಂಡು ಅಭಿವೃದ್ದಿಗೆ, ಪರಿವರ್ತನೆಗೆ, ಮಾನವೀಯತೆಗೆ ಅಡ್ಡಿ ಬರುತ್ತಿದೆ. ಈ ಜಾತಿಪದ್ದತಿ "ಇದೊಂದು ಅಂಟು ಜಾಡ್ಯ, ಸಾಂಕ್ರಾಮಿಕ ರೋಗ, ವಿದ್ಯೆ ಹೆಚ್ಚಾದರೂ ಇಪ್ಪತ್ತೊಂದನೇ ತಾಂತ್ರಿಕ ಯುಗದಲ್ಲಿದ್ದರೂ ನಮ್ಮ ಮಾನಸಿಕ ರೋಗಕ್ಕೆ ಔಷಧಿ ಸಿಗುತ್ತಿಲ್ಲ"[1] ನಮ್ಮ ಪರಂಪರಾನುಗತ ಸಮಾಜ 4 ಪ್ರಮುಖ ಜಾತಿಗಳಾಗಿ ವಿಂಗಡಣೆಗೊಂಡಿತು. ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು ಮತ್ತು ಪರಿಶಿಷ್ಟ ಜಾತಿಯವರು. ಈ ಮದ್ಯೆ ಅನೇಕ ಜಾತಿ ಉಪಜಾತಿಗಳಿವೆ. ಇವರಲ್ಲಿ ಅತ್ಯಂತ ಚಿತ್ರಹಿಂಸೆಗೆ ಗುರಿಯಾದವರು ಪರಿಶಿಷ್ಟ ಜಾತಿಯವರು ಅನೇಕ ಶತಮಾನಗಳಿಂದಲೂ ಇವರು ಮಾನಸಿಕವಾಗಿ ದೈಹಿಕವಾಗಿ ಚಿತ್ರಹಿಂಸೆಗೆ ಗುರಿಯಾಗುತ್ತಿದ್ದಾರೆ.

ಸ್ವಾತಂತ್ರ್ಯಕ್ಕೆ ಮೊದಲು ಇವರ ಪರಿಸ್ಥಿತಿ ತುಂಬಾ ಹೀನಾಯವಾಗಿತ್ತು. ಸಾಮಾಜಿಕ ಸಂಪರ್ಕದ ಎಲ್ಲಾ ಕ್ಷೇತ್ರಗಳಲ್ಲಿ ಇವರನ್ನು ದೂರ ಇಡಲಾಗಿತ್ತು. ಪರಿಶಿಷ್ಟ ಜಾತಿಯವರ ಮಕ್ಕಳಿಗೆ ಶಾಲೆಗಳಲ್ಲಿ ಓದಲು ಅವಕಾಶಗಳೇ ಇರಲಿಲ್ಲ. "ಇವರಿಗೇಕೆ ಓದು ಇವರಿರುವುದು ನಮ್ಮ ಗುಲಾಮರಾಗಿ, ಜೀತದಾಳುಗಳಾಗಿ ಎಲ್ಲಾ ಕೆಲಸಗಳನ್ನು ಮಾಡಲು ಮಾತ್ರ"[2] ಎಂದು ಸವರ್ಣೀಯರು ಬಹಿರಂಗವಾಗಿ ಹೇಳುತ್ತಿದ್ದರು. ನಂತರದ ದಿನಗಳಲ್ಲಿ ಬಂಡಾಯ ಸಾಹಿತಿಗಳ ಧ್ವನಿ ಹೆಚ್ಚಾದಾಗ ಶಾಲೆಗಳಿಗೆ ಹೋಗುವ ಅವಕಾಶ ಸಿಕ್ಕರೂ ಸರಿಸಮಾನತೆ ಇರಲಿಲ್ಲ. ಈ ಮಕ್ಕಳು ತರಗತಿಯ ಕೊನೆಯಲ್ಲಿ ಬೇರೆ ಮಕ್ಕಳಿಂದ ದೂರ ಕುಳಿತುಕೊಳ್ಳಬೇಕಿತ್ತು. ಉಪಾಧ್ಯಾಯರು ಮತ್ತು ಮೇಲ್ಜಾತಿಯ ಮಕ್ಕಳು ಇವರನ್ನು ತುಚ್ಚ ಭಾವನೆಯಿಂದ ನೋಡುತ್ತಿದ್ದರು. ಅವರ ಸ್ಲೇಟುಗಳನ್ನು ಸಹ ಉಪಾಧ್ಯಾಯರು ನೇರವಾಗಿ ಮುಟ್ಟುತ್ತಿರಲಿಲ್ಲ, ಬೇರೆ ಮಕ್ಕಳ ಮೂಲಕ ಪಡೆಯುತ್ತಿದ್ದರು. ಇದಕ್ಕೆ ಕಾರಣ ಅಸ್ಪೃಶ್ಯತೆ. ದಲಿತರು ಹೋಟೆಲುಗಳಲ್ಲಿ ಪ್ರವೇಶ ಮಾಡುವ ಹಾಗಿಲ್ಲ, ಅವರ ಜೊತೆ ಕುಳಿತು ಚಹ ಕುಡಿಯುವ ಹಾಗಿರಲಿಲ್ಲ. ಹೋಟೆಲು ಹೊರಗೆ ನಿಂತು ಕುಡಿಯಬೇಕಿತ್ತು. ಕೆರೆ ಬಾವಿಗಳ ನೀರನ್ನು ಕುಡಿಯಬಾರದು, ಮುಟ್ಟಬಾರದು, ಮುಟ್ಟಿದರೆ ನೀರು ಅಪವಿತ್ರವಾಗುವುದು ಎಂದು ಮೇಲ್ಜಾತಿಯ ಜನ ಭಾವಿಸಿದ್ದರು. ಆಗ ಸವರ್ಣೀಯರು ಇಂತಹ ನೀರನ್ನು ಕುಡಿಯುತ್ತಿರಲಿಲ್ಲ. ಊರಿನ ಆಚೆ ಇವರ ವಾಸದ ಮನೆಗಳನ್ನು ಕಟ್ಟುವಾಗ ಸವರ್ಣೀಯರು ಉಪಯೋಗಿಸುವ ವಸ್ತುಗಳನ್ನು ಉಪಯೋಗಿಸುವಂತಿಲ್ಲ. ಸಾಮಾನ್ಯವಾಗಿ ಮಣ್ಣಿನ ಗೋಡೆ ಮತ್ತು ಒಣಗಿದ ಎಲೆಗಳ ಮೇಲ್ಚಾವಣಿ ಇರಬೇಕು ದಲಿತರು ಮುಂದೆ ಬರಬಾರದು ಕೇವಲ ಸವರ್ಣೀಯರ ಕೂಲಿಗಳಾಗಿರಬೇಕು,

ಸತ್ತ ಪಶುಗಳ ಚರ್ಮ ಸುಲಿಯುವುದು, ಹದಮಾಡುವುದು, ಕಕ್ಕಸಿನ ಮಲವನ್ನು ಬುಟ್ಟಿಯಲ್ಲಿ ತುಂಬಿ ತಲೆಯ ಮೇಲಿಟ್ಟು ಊರಾಚೆ ಹಳ್ಳದಲ್ಲಿ ಹಾಕುವುದು, ಕಸ ಗುಡಿಸುವುದು ಇವರ ಕೆಲಸವಾಗಿತ್ತು. ಹೊಲೆ ಮಾದಿಗರೆಂಬ ಪದಗಳಿಂದ ಇವರನ್ನು ಹೀನಾಯವಾಗಿ ಕರೆಯುತ್ತಿದ್ದರು. ಸವರ್ಣೀಯರ ಮೇಲೆ ಇವರ ನೆರಳು ಬೀಳಬಾರದು. ಬಿದ್ದರೆ ಅವರ ದೇಹ ಮಲಿನವಾಗುವುದೆಂದು ಭಾವಿಸುತ್ತಿದ್ದರು. ಕೆಲವು ಕಡೆ ಮಧ್ಯಾಹ್ನದ ವೇಳೆ ನಡುದಾರಿಯಲ್ಲಿ ನಡೆಯಬಾರದಾಗಿತ್ತು. ಅಗಸರು ಇವರ ಬಟ್ಟೆಯನ್ನು ಒಗೆಯುತ್ತಿರಲಿಲ್ಲ. ದಲಿತರ ಮನೆಗಳು ಕೊಳಕು ಪ್ರದೇಶ ದುರ್ವಾಸನೆಯಿಂದ ಕೂಡಿದ ಪ್ರದೇಶಗಳಲ್ಲಿ, ಇವರ ಗುಡಿಸಲುಗಳು ಇರುತ್ತಿದ್ದವು. ಸವರ್ಣೀಯರು ಮನೆಗಳಿಗೂ ದಲಿತರ ಮನೆಗಳಿಗೂ ಅಜಗಜಾಂತರ ವ್ಯತ್ಯಾಸಗಳಿರಬೇಕಿತ್ತು. ಸ್ವಲ್ಪ ಸುಧಾರಿಸಿದ ಮನೆಗಳನ್ನು ಕಟ್ಟಲು ಅವಕಾಶವಿರಲಿಲ್ಲ. ಸವರ್ಣೀಯರ ವಾಸಸ್ಥಳಗಳಲ್ಲಿ ದಲಿತರು ಪ್ರವೇಶಿಸಿದರೆ ದೊಡ್ಡ ಗಂಟೆಯ ಶಬ್ದಮಾಡಬೇಕಿತ್ತು. 'ಸಂಭೋಳಿ' ಎಂದು ಸಾರುತ್ತಾ ಇರಬೇತ್ತು. ಆಗ ಸವರ್ಣೀಯರು ಮನೆಯ ಆಚೆ ಬರುತ್ತಿರಲಿಲ್ಲ. ಪುರೋಹಿತಶಾಹಿ ವಿರುದ್ಧ ಹೋರಾಡಿದ ಇತಿಹಾಸವಿರುವ ತಮಿಳುನಾಡಿನಂತಹ ರಾಜ್ಯದಲ್ಲಿ ಭೀಕರ ಪ್ರಕರಣಗಳು ನಡೆಯುತ್ತಿರುವುದು ಆಘಾತಕಾರಿ. ಪೆರಿಯಾರ್, ಕಾಮರಾಜ್ ಅಣ್ಣಾದೊರೆಗಳ ಹೆಸರಿನಲ್ಲಿ ಅಧಿಕಾರ ನಡೆಸುತ್ತಿರುವ ದ್ರಾವಿಡ ಪಕ್ಷಗಳ ಆಡಳಿತದಲ್ಲಿ ದಲಿತರು ಮೃಗೀಯ ಜೀವನ ನಡೆಸುತ್ತಿರುವುದು ವಿಪರ್ಯಾಸವೇ ಸರಿ. ತಮಿಳುನಾಡಿನ 30 ಮೀಟರ್ 'ಉದಂಪುರದ ಜಾತಿಗೋಡೆ' ಮಾನವಕುಲಕ್ಕೆ ಕಳಂಕಕಾರಿಯಾದದ್ದು. ಕಂಬಾಲಪಲ್ಲಿಯ ಸಜೀವದಹನ, ಹರ್ಯಾಣದಲ್ಲಿ ದನದ ಚರ್ಮ ಸುಲಿದರೆಂದು ಏಳು ಜನ ದಲಿತರ ಹತ್ಯೆ ಭಯಾನಕವಾದುದು. ಅಂಚೆಯವನು ಮನಿಆರ್ಡರನ್ನು ದಲಿತರೆಂಬ ಕಾರಣಕ್ಕೆ ವಾರಗಟ್ಟಲೆ ತಡವಾಗಿ ನೀಡುವುದು, ದಲಿತರು ಪಂಚಾಯ್ತಿ ಅಧ್ಯಕ್ಷರಾಗುತ್ತಾರೆಂದು ವರ್ಷಗಟ್ಟಲೆ ಚುನಾವಣೆಯನ್ನೇ ನಡೆಸದಿರುವುದು, ದೇವಾಲಯಗಳು ಸಹ ವಿಭಿನ್ನವಾಗಿದ್ದು, ದೇವಾಲಯಗಳಿಗೆ ಕಾಲಿಟ್ಟರೆ ದೇವಾಲಯ ಅಪವಿತ್ರವಾಗುವುದೆಂದು ಹೇಳುವುದು ಇವೆಲ್ಲಾ ಸಾಮಾನ್ಯವಾಗಿದೆ. ಸವರ್ಣೀಯರ ದೇವ ದೇವತೆಗಳು ಸುಂದರವಾಗಿರಬೇಕು ದಲಿತರ ದೇವರು ಕಪ್ಪಗೆ ದೊಡ್ಡಗೆ ಭಯಂಕರ ಸ್ವರೂಪದ್ದಾಗಿರಬೇಕಿತ್ತು.

ದಲಿತರನ್ನು ಮೇಲ್ಜಾತಿಯವರ ಜೀತದಾಳುಗಳನ್ನಾಗಿ ಮಾಡಿ ಇವರಿಂದ ಎಲ್ಲಾ ತರಹದ ಸೇವೆಯನ್ನು ಪಡೆಯುತ್ತಿದ್ದಾರೆ ಜೀತಪದ್ಧತಿಯಲ್ಲಿ ಶೇ 70–75 ರಷ್ಟು ದಲಿತರಿದ್ದರೂ ಸಹ ಇವರಲ್ಲಿ ಚಿಕ್ಕ ಮಕ್ಕಳು, ವೃದ್ದರು, ಮಹಿಳೆಯರು ಇದ್ದರು ಒಮ್ಮೆ ಒಬ್ಬ ಜೀತದಾಳಾದರೆ ಜೀವನ ಪರ್ಯಂತ ಅದರಿಂದ ಹೊರಬರಲು ಆಗುತ್ತಿರಲಿಲ್ಲ ತಂದೆ ಸಾಲವನ್ನು ಪಡೆದು ತನ್ನ ಮಕ್ಕಳಲ್ಲಿ ಒಬ್ಬರನ್ನು ಜೀತಕ್ಕೆ ಇಡುವುದು ಸಾಮಾನ್ಯವಾಗಿತ್ತು. ಜೀತದಾಳು ಸಾಲವನ್ನು ಹಿಂದಿರುಗಿಸಲಾಗದೆ ಬಡ್ಡಿ ಚಕ್ರಬಡ್ಡಿ ಬೆಳೆದು ಜೀತದಾಳಾಗೇ ಉಳಿಯಬೇಕಿತ್ತು. ಅಲ್ಲದೆ ಇವರನ್ನು ಹೊಡೆಯುವುದು ಬೈಯ್ಯುವುದು ಸಾಮಾನ್ಯವಾಗಿತ್ತು. ಜೀತದಾಳುಗಳಿಂದ ಖಾಲಿ ಬಿಳಿ ಕಾಗದದ ಮೇಲೆ ಸಹಿ ಮಾಡಿಸಿಕೊಂಡು ಅವರ ಆಸ್ತಿಯನ್ನು ನುಂಗಿ ಹಾಕುವುದು ಸಾಮಾನ್ಯ.

ದಲಿತರ ರಕ್ಷಣೆಗೋಸ್ಕರ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ ಮತ್ತು ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಒಂದು ವಿಶೇಷ ಕಾನೂನು ಮಾಡಿ ಜೀತಪದ್ಧತಿಯಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದರು. ಜೀತ ಪದ್ಧತಿ ನಿರ್ಮೂಲನೆಗೆ ಸರ್ಕಾರ, ಬ್ಯಾಂಕ್ ಮೂಲಕ ಸಾಲಕೊಡುವ ವ್ಯವಸ್ಥೆ

ಮಾಡಿತಾದರೂ ಕಾರ್ಯರೂಪಕ್ಕೆ ಬರುವುದು ಕಷ್ಟವಾಯಿತು. ಕ್ಷೌರಿಕ ಸ್ಥಾನಮಾನ ಕೂಡ ಸಮಾಜದಲ್ಲಿ ಹೀನಾಯವಾಗಿತ್ತು. ಆದರೆ ಅವರು ದಲಿತರಿಗಿಂತ ಸ್ವಲ್ಪ ಮೇಲಿದ್ದಾರೆ. ದಲಿತರಿಗೆ ಇವರ ಸೇವೆಯೂ ದೊರಕುತ್ತಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ದಲಿತರಿಗೆ ಯಾವುದೇ ಕಾನೂನಿನ ರಕ್ಷಣೆ ಇರಲಿಲ್ಲ. ಸವರ್ಣೀಯರು ದಲಿತರನ್ನು ಮನೆ ನಾಯಿಗಳಿಗಿಂತಲೂ ಹೀನಾಯವಾಗಿ ಕಾಣುತ್ತಿದ್ದರು. ದಲಿತರಿಗೆ ಸ್ವಾಭಿಮಾನ ಮಾನ ಮರ್ಯಾದೆ ಎಂಬ ಪದದ ಅರ್ಥವೇ ಗೊತ್ತಿರಲಿಲ್ಲ. ಬ್ರಹ್ಮನು ಅವರನ್ನು ಸೃಷ್ಟಿಸಿರುವುದು ಕೇವಲ ಸವರ್ಣೀಯರ ಗುಲಾಮರಾಗಿಲು ಎಂದು ನಂಬಿಸಿದ್ದು, ಬಾಹ್ಯ ಪ್ರಪಂಚದ ಪರಿಚಯವೇ ಇಲ್ಲದಷ್ಟು ದಾರುಣ್ಯ ಪರಿಸ್ಥಿತಿ ಇವರದಾಗಿತ್ತು.

ಸ್ವಾತಂತ್ರ ಪೂರ್ವದಲ್ಲಿ ಭಾರತೀಯ ಶ್ರೇಣೀಕೃತ ಜಾತಿವ್ಯವಸ್ಥೆಯು ಬಹುತೇಕ ಶ್ರಮಿಕ ವರ್ಗದವರನ್ನೊಳಗೊಂಡಿದ್ದ ಪರಿಶಿಷ್ಟಜಾತಿಗಳಿಗೆ ಯಾವುದೇ ಅವಕಾಶಗಳನ್ನು ನೀಡದೆ ಅವರನ್ನು ಕಗ್ಗತ್ತಲೊಳಗಿರಿಸಿದ್ದು ಈಗ ಇತಿಹಾಸ. ಮುಖ್ಯವಾಗಿ ನಾಗರೀಕ ಜೀವನ ಸುಧಾರಣೆಗೆ ಅವಶ್ಯವಾದ ಶಿಕ್ಷಣದಿಂದಲೇ ದಲಿತ ಸಮುದಾಯಗಳು ವಂಚಿತವಾಗಿದ್ದವು. ಆದಾಗ್ಯೂ ಭಾರತೀಯ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟವೆಂದು ಹೇಳಬಹುದಾದ ಭಕ್ತಿಪಂಥದ ಪರಂಪರೆಯ ಬೆಳವಣಿಗೆಯ ನಂತರ ದಲಿತರಲ್ಲೂ ಸಾಮಾಜಿಕ ಘನತೆ ಮತ್ತು ಹಕ್ಕುಗಳಿಗಾಗಿ ಹೋರಾಡುವ ಛಲ ಮೂಡಿತ್ತು. ಭಕ್ತಿಪಂಥ ಮತ್ತು ಬೌದ್ಧಧರ್ಮದ ಸಿದ್ಧಾಂತಗಳಿಂದ ಪ್ರೇರೇಪಿತರಾದ ಅನೇಕ ರಾಜರುಗಳು ದಲಿತ ಸಮುದಾಯಗಳ ಅಭಿವೃದ್ದಿಗಾಗಿ ಅನೇಕ ಯೋಜನೆಗಳನ್ನು ಕೈಗೊಂಡಿರುವುದನ್ನು ಇಲ್ಲಿ ಅಭ್ಯಸಿಸಿ ತಿಳಿಸಲು ಪ್ರಯತ್ನಿಸಿದ್ದೇನೆ. ಮೈಸೂರಿನ ಒಡೆಯರ್ ತಿರುವಾಂಕೂರಿನ ರಾಜವಂಶ, ಬರೋಡದ ಗಾಯಕವಾಡ್ ರಾಜವಂಶ ಹೀಗೆ ಹಲವಾರು ರಾಜರುಗಳು ದಲಿತರ ಏಳಿಗೆಗಾಗಿ ಶ್ರಮಿಸಿದ ನಿದರ್ಶನಗಳಿವೆ. ತಮ್ಮ ವ್ಯಾಪಾರವನ್ನು ವೃದ್ಧಿಸಿಕೊಳ್ಳುವ ಮೂಲಕವೇ ಭರತಖಂಡವನ್ನು ಆಕ್ರಮಿಸಿದ ಬ್ರಿಟಿಷ್ ಸಾಮ್ರಾಜ್ಯಷಾಹಿಯು ತನ್ನ ಸ್ಥಾನವನ್ನು ಭದ್ರ ಮಾಡಿಕೊಳ್ಳುವ ಉದ್ದೇಶದಿಂದ ಭಾರತೀಯ ಧಾರ್ಮಿಕ ಮತ್ತು ಸಾಂಪ್ರದಾಯಿಕ ವಿಚಾರಗಳಲ್ಲಿ ಹೆಚ್ಚಾಗಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ತಮ್ಮ ಸಾಮ್ರಾಜ್ಯದ ವಿಸ್ತರಣೆಯನ್ನು ಪ್ರಧಾನ ಗುರಿಯಾಗಿಸಿಕೊಂಡಿದ್ದ ಬ್ರಿಟೀಷರಿಗೆ ಮೇಲ್ಜಾತಿಯವರ ನೈತಿಕ ಮತ್ತು ರಾಜಕೀಯ ಬೆಂಬಲ ಅವಶ್ಯವಾಗಿತ್ತು. ಈ ಅವಧಿಯಲ್ಲೇ ಮೇಲ್ಜಾತಿಯ ಅಧಿಕಾರಶಾಹಿಗಳು ಜಾತಿವ್ಯವಸ್ಥೆಯ ಭದ್ರ ಬುನಾದಿಗೆ ಧಕ್ಕೆ ಬರದಂತೆ ಕಾನೂನುಗಳನ್ನು ರಚಿಸಲು ಬ್ರಿಟೀಷರಿಗೆ ಸಹಾಯಕರಾಗಿದ್ದರು. ಈ ಬಗ್ಗೆ ಫ್ರೆಂಚ್ ವಿದ್ವಾಂಸ ಅಬೇದುಬ್ವಾರವರು 1816 ರ ತಮ್ಮ ಕೃತಿಯಲ್ಲಿ "ಪ್ರಸ್ತುತ ಭಾರತವನ್ನು ಆಳುತ್ತಿರುವ ಯೂರೋಪಿನ ವಸಾಹತುಶಾಹಿಗಳ ವಿಶ್ವಾಸಗಳಿಸುವುದರಲ್ಲೂ ಭಾರತದ ಬ್ರಾಹ್ಮಣವರ್ಗ ಸಫಲವಾಗಿದೆ. ಆಡಳಿತ ಯಂತ್ರಗಳಲ್ಲಿ, ಸರ್ಕಾರಿ ಕಛೇರಿಗಳಲ್ಲಿ ಮತ್ತು ನ್ಯಾಯಂಗದಲ್ಲೂ ಸಹ ಉನ್ನತ ಹುದ್ದೆಗಳನ್ನು ಈ ವರ್ಗವು ಆಕ್ರಮಿಸಿಕೊಂಡಿದೆ"[3] ಎಂದು ಹೇಳುತ್ತಾರೆ

ಬ್ರಿಟೀಷರ ಆಳ್ವಿಕೆ ದಲಿತ ಸಮುದಾಯಗಳಿಗೆ ಮೇಲ್ಜಾತಿಯವರ ದೌರ್ಜನ್ಯದಿಂದ ಮುಕ್ತಿ ಪಡೆಯುವ ಒಂದು ಸಾಧನವಾಗಿ ಕಂಡಿತ್ತು. ಶಿಕ್ಷಣದಿಂದ ವಂಚಿತರಾಗಿದ್ದ ದಲಿತ ಸಮುದಾಯಗಳಿಗೆ ಬ್ರಿಟೀಷ್ ಆಳ್ವಿಕೆಯಲ್ಲಿ ಸ್ವಲ್ಪ ಮಟ್ಟಿಗಾದರೂ ಆಧುನಿಕ ಶಿಕ್ಷಣದ ಅವಕಾಶಗಳು ಲಭ್ಯವಾಗಿದ್ದವು ಇದೇ ಅವಧಿಯಲ್ಲೇ ಮಹಾತ್ಮಫುಲೆ

ಮುಂತಾದ ಸಮಾಜ ಸುಧಾರಕರು ದಲಿತರಿಗಾಗಿ, ವಿಶೇಷವಾಗಿ ಮಹಿಳೆಯರಿಗಾಗಿ ಶಾಲೆಗಳನ್ನು ಪ್ರಾರಂಭಿಸಿದರು ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಳ್ವಿಕೆ ಕೊನೆಗೊಂಡು ಬ್ರಿಟೀಷ್ ಸರ್ಕಾರವು ಆಡಳಿತ ವಹಿಸಿಕೊಂಡ ನಂತರದಲ್ಲಿ ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ಮೂಲತತ್ವ ಸೂಕ್ಷ್ಮವಾಗಿ ದಲಿತರ ಅನುಭವಕ್ಕೆ ಬರಲಾರಂಭಿಸಿತು ಇಂಗ್ಲೀಷ್ ಭಾಷೆಯ ಸಂಪರ್ಕದಿಂದ ಸುಶಿಕ್ಷಿತ ದಲಿತ ಮತ್ತು ಹಿಂದುಳಿದ ಸಮುದಾಯಗಳಲ್ಲಿ ಹೊಸ ವಿಚಾರಧಾರೆಗಳೂ ಪ್ರಾರಂಭವಾದವು. ಶಿಕ್ಷಣದ ಪರಿಣಾಮವಾಗಿ ತಮ್ಮ ಹಕ್ಕು ಭಾದ್ಯತೆಗಳ ಬಗ್ಗೆ ದಲಿತರಲ್ಲಿ ಅರಿವು ಮೂಡತೊಡಗಿತ್ತು. ಭಾರತದ ಸ್ವಾತಂತ್ರ್ಯೋತ್ತರ ರಾಜಕಾರಣದಲ್ಲಿ ದಲಿತ ಸಮುದಾಯಗಳು ವಹಿಸಬಹುದಾಗಿದ್ದ ಮಹತ್ತರ ಪಾತ್ರವನ್ನು ಗ್ರಹಿಸಿದ್ದ ಆಳುವ ವರ್ಗಗಳು ದಲಿತರನ್ನು ಸಂಸದೀಯ ಮಾರ್ಗದಲ್ಲಿ ಕೊಂಡೊಯ್ಯಲು ಎಲ್ಲ ರೀತಿಯ ತಂತ್ರಗಾರಿಕೆಯನ್ನು ಮಾಡಿದ್ದವು. ದಲಿತ ಸಮುದಾಯಗಳಲ್ಲಿ ಸುಪ್ತವಾಗಿದ್ದ ಶ್ರಮಿಕ ವರ್ಗದ ಪ್ರಜ್ಞೆಯನ್ನು ಬೆಳೆಯಲು ಬಿಡುವುದು, ದೇಶದಲ್ಲಿ ವಿಪ್ಲವಕಾರಿ ಸನ್ನಿವೇಶ ಉಂಟಾಗಬಹುದೆಂದು ಗ್ರಹಿಸಿದ ಕಾಂಗ್ರೆಸ್ ಪಕ್ಷ ದಲಿತರನ್ನು ಸಂಸದೀಯ ರಾಜಕಾರಣದಲ್ಲಿ ಕರೆದೊಯ್ಯುವಲ್ಲಿ ಯಶಸ್ವಿಯಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಅಂಬೇಡ್ಕರ್ ಅವರು ದಲಿತರು ಪ್ರತ್ಯೇಕ ಚುನಾಯಿತ ಸಮುದಾಯವಾಗಿರಬೇಕೆಂದು ಹೋರಾಡಿದರೂ ಗಾಂಧೀಜಿಯವರ ಉಪವಾಸ ಸತ್ಯಾಗ್ರಹ ಮತ್ತು ಸ್ವಾತಂತ್ರ ಸಂಗ್ರಾಮದ ಸಂದರ್ಭದಲ್ಲಿನ ಹಲವಾರು ಕಾರಣಗಳಿಂದ ಅವರು ಈ ಆಗ್ರಹವನ್ನು ಕೈಬಿಡಬೇಕಾಯಿತು. ಇದಕ್ಕೆ ಪ್ರತಿಯಾಗಿ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ನೀಡುವ ಒಪ್ಪಂದಕ್ಕೆ ಅಂಬೇಡ್ಕರ್ ಒಪ್ಪಬೇಕಾಯಿತು. 1935 ಗೌರ್ನಮೆಂಟ್ ಆಫ್ ಇಂಡಿಯಾ ಕಾಯ್ದೆಯ ಪ್ರಕಾರ ಈ ನೀತಿಯನ್ನು 1943 ರಲ್ಲಿ ಸರ್ಕಾರಿ ನೌಕರಿಯಲ್ಲಿ, ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ನೀಡುವ ನೀತಿಯನ್ನು ಅನುಷ್ಠಾನಗೊಳಿಸಲಾಯಿತು ಕ್ರಮೇಣ ಈ ಸವಲತ್ತುಗಳನ್ನು ಪರಿಶಿಷ್ಟ ಪಂಗಡಗಳಿಗೂ ಅನ್ವಯವಾಯಿತು.

"ದಲಿತರನ್ನು ಸಂಸದೀಯ ಸಾಂಸ್ಥಿಕ ವ್ಯವಸ್ಥೆಯೊಳಗೆ ಸೀಮಿತಗೊಳಿಸುವ ತಂತ್ರವನ್ನು ಕಾಂಗ್ರೆಸ್ ನಾಯಕರು ಅನುಸರಿಸಿದ್ದರು. ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಮಂಡಳಿಯ ಅಧ್ಯಕ್ಷರನ್ನಾಗಿ ಮಾಡುವುದರ ಹಿಂದೆ ಇದೂ ಒಂದು ಉದ್ದೇಶವಾಗಿತ್ತು".[4] ಎಂದು ಆನಂದ್ ತೇಲ್‌ತುಂಬ್ಡೆಯವರು ಪ್ರತಿಪಾದಿಸುತ್ತಾರೆ. ರಾಷ್ಟ್ರಿಯವಾದಿ ಚಿಂತನೆಗಳಿಂದ ಕೂಡಿದ ಸ್ವಾತಂತ್ರ್ಯ ಚಳುವಳಿಯ ಸಮಾನತಾ ಸಿದ್ಧಾಂತಗಳಿಗೆ ಪೂರಕವಾಗಿಯೇ ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚಿತವಾದ ಭಾರತೀಯ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಪಂಗಡಗಳಿಗೆ ವಿಶೇಷ ಸವಲತ್ತುಗಳನ್ನು ನೀಡಿರುವುದನ್ನು ಕಾಣಬಹುದು.

ಡಾ॥ ಬಿ.ಆರ್ ಅಂಬೇಡ್ಕರ್ ಅವರ ಜೊತೆಯಲ್ಲಿ ಅನೇಕ ವಿದ್ಯಾವಂತರು, ಕಾನೂನು ತಜ್ಞರು ಮತ್ತು ಸಮಾಜದ ಮುಖಂಡರು ಪ್ರತಿಯೊಬ್ಬ ಭಾರತೀಯನಿಗೆ ಸರಿಸಮಾನವಾದ ಹಕ್ಕುಗಳನ್ನು ಕೊಟ್ಟು ಅವರು ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಪಡೆಯಲು ಅನುಕೂಲ ಮಾಡಿಕೊಟ್ಟರು. ಇವುಗಳ ಪೈಕಿ ದಲಿತರ ಹಿತದೃಷ್ಟಿಯಿಂದ ಕಂಡುಬರುವ ಒಂದು ಅತ್ಯಂತ ಅಮೂಲ್ಯವಾದ ಅಂಶವೇನೆಂದರೆ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕಾನೂನು. ದಲಿತರ ಮೇಲಿದ್ದಂತಹ ಅತ್ಯಾಚಾರ, ಬಹಿಷ್ಕಾರ, ಅನ್ಯಾಯ, ತಾರತಮ್ಯ ಇವೆಲ್ಲವನ್ನು ಹೋಗಲಾಡಿಸಲು ಅನೇಕ ಪ್ರಮುಖ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುವುದು ಅನಿವಾರ್ಯವಾಗಿತ್ತು. ಹಿಂದುಳಿದ ವರ್ಗಗಳ, ವಿಶೇಷವಾಗಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಮತ್ತು ಈ ಜನಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಿ, ಎಲ್ಲಾ ರೀತಿಯ ಶೋಷಣೆಗಳಿಂದ ರಕ್ಷಣೆ ನೀಡುವ ಉದ್ದೇಶ ಸಂವಿಧಾನದ ವಿಧಿ 46 ರಲ್ಲಿ ವ್ಯಕ್ತವಾಗಿದೆ. ವಿಧಿ 330 ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಸತ್ತಿನಲ್ಲಿ ಹಲವು ಸ್ಥಾನಗಳನ್ನು ಮೀಸಲಾಗಿರಿಸಿದೆ. ವಿವಿಧ ರಾಜ್ಯಗಳಲ್ಲಿ ಈ ಸಮುದಾಯಗಳ ಜನಸಂಖ್ಯೆಯನ್ನಾಧರಿಸಿ ಮೀಸಲಾತಿ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ. ವಿಧಿ 332 ರ ಅನ್ವಯ ರಾಜ್ಯ ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡಗಳಿಗೆ ಸ್ಥಾನಗಳನ್ನು ಮೀಸಲಾಗಿರಿಸಲಾಗಿದೆ.

ವಿಧಿ 334 ರಲ್ಲಿ ಈ ಮೀಸಲಾತಿ ಸೌಲಭ್ಯಗಳು ಐವತ್ತು ವರ್ಷಗಳ ಕಾಲ ಊರ್ಜಿತವಾಗಿರತಕ್ಕದ್ದೆಂದು ಹೇಳಲಾಗಿದೆ. ಈ ಅಂಶವನ್ನು ಆಧರಿಸಿಯೇ ಮೀಸಲಾತಿ ವಿರೋಧಿಗಳು ಇತ್ತೀಚಿನ ದಿನಗಳಲ್ಲಿ ಜಾತಿ ಆಧಾರಿತ ಮೀಸಲಾತಿಯನ್ನು ಕೊನೆಗೊಳಿಸಲು ಆಗ್ರಹಿಸುತ್ತಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಸಂವಿಧಾನದ ವಿಧಿ 335 ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ನೀಡಲಾಗಿದೆ. ಈ ಸಂವಿಧಾನಿಕ ಉದ್ದೇಶಗಳ ಆಚರಣೆಯನ್ನು ಮತ್ತು ಅನುಷ್ಠಾನವನ್ನು ಗಮನಿಸಲು ಹಾಗೂ ಪರಾಮರ್ಶಿಸಲು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರಾಷ್ಟ್ರೀಯ ಸಮಿತಿಯೊಂದನ್ನು ಸ್ಥಾಪಿಸಲು ವಿಧಿ 338 ರಲ್ಲಿ ಹೇಳಲಾಗಿದೆ. ಈ ಎಲ್ಲಾ ಸೌಲಭ್ಯಗಳಿಂದ ದಲಿತರ ಪರಿಸ್ಥಿತಿಯಲ್ಲಿ ಒಂದು ಮಹತ್ತರವಾದ ವ್ಯಾಪಕವಾದ ಪರಿವರ್ತನೆ ಉಂಟಾಗುವುದೆಂದು ವಿಶ್ವಾಸ ಮೂಡಿತ್ತು ಅದು ಎಷ್ಟರಮಟ್ಟಿಗೆ ಎಂಬುದು ಮುಖ್ಯ ಪ್ರಶ್ನೆ. ಇಂದು 60 ವರ್ಷದ ಇತ್ತೀಚಿಗೆ ಭಾರತೀಯ ಸಮಾಜದಲ್ಲಿ ಹೀಗೆ ಕಾಣಲು ಸಾಧ್ಯವೇ? ಸರ್ಕಾರ ತನ್ನ ಕರ್ತವ್ಯ ನಿಭಾಯಿಸಿದೆಯೇ? ಅಧಿಕಾರಿಗಳು ತಮ್ಮ ಕರ್ತವ್ಯ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಮುಂದುವರೆದಿದ್ದಾರೆಯೇ? ಈ ಎಲ್ಲಾ ಪ್ರಶ್ನೆಗಳಿಗೆ ಈ ಸ್ವಾತಂತ್ರದ ನಂತರ ಕಂಡುಬರುವ ಬೆಳವಣಿಗೆ ಉತ್ತರ ಕೊಡುತ್ತದೆ. ಇಂದು ದೇವಾಲಯದೊಳಗೆ ಪ್ರವೇಶ ಮಾಡುವ ದಿಟ್ಟತನವನ್ನು ದಲಿತರು ಮಾಡಿದ್ದಾರೆ. ಧಾರ್ಮಿಕ ಮೆರವಣಿಗೆಗಳಲ್ಲಿ ಇವರು ಪ್ರಮುಖ ಪಾತ್ರ ವಹಿಸುವಲ್ಲಿ ಸಫಲರಾಗಿದ್ದಾರೆ ಹೋಟೆಲುಗಳಲ್ಲೂ ಇವರಿಗೆ ಸರಿಸಮಾನವಾದ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತಿದೆ. ಶಾಲೆಗಳಲ್ಲೂ ಇವರ ಸರಿಸಮಾನತೆಯನ್ನು ಇಂದು ಬಹುಮಟ್ಟಿಗೆ ಕಾಣಬಹುದಾಗಿದೆ. ಸಾಮಾಜಿಕ ಬಹಿಷ್ಕಾರ ಕಡಿಮೆಯಾಗಿದೆ. ಹೀಗೆ ಸಾಮಾಜಿಕ ಪರಿವರ್ತನೆ ಸಾಗುತ್ತಿದೆ.

ದಲಿತರ ಮೇಲೆ ಆಗುವ ಅನ್ಯಾಯವನ್ನು, ದೌರ್ಜನ್ಯವನ್ನು, ಸಾಮಾಜಿಕ ಬಹಿಷ್ಕಾರ ಇತ್ಯಾದಿ ಚಿತ್ರಹಿಂಸೆಯನ್ನು ತಡೆಯಲು ನಮ್ಮ ಸಂವಿಧಾನದಲ್ಲಿ ಕಾಲಂ 17 ರ ಅಡಿಯಲ್ಲಿ ಅವಕಾಶವಿದೆ. ಅಸ್ಪೃಶ್ಯತೆಯನ್ನು ಯಾವ ಕಾರಣಕ್ಕೂ ಆಚರಣೆಗೆ ತರುವ ಹಾಗಿಲ್ಲ. ಸಂವಿಧಾನದ ಈ ವಿಶೇಷ ಸೌಲಭ್ಯವನ್ನು ಜಾರಿಗೆ ತರಲು "1955 ರಲ್ಲಿ 'ಸಂಸದ್' ಕಾನೂನನ್ನು ರಚಿಸಿತು. ಇದನ್ನು Untouchability offences act 1955"[5] ಎಂದು ಕರೆಯುತ್ತಾರೆ. ಆದರೆ ಈ ಕಾನೂನು ಚುರುಕಾಗಿರಲಿಲ್ಲ. ಇದರಿಂದಾಗಿ ಸಂವಿಧಾನದ ಉದ್ದೇಶವನ್ನು ಕಾರ್ಯಗತಗೊಳಿಸಲು ಸಾದ್ಯವಾಗದ ಕಾರಣದಿಂದ ಸಂಸದ್ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿದರು. ಈ ಸಮಿತಿ ಇಡೀ ದೇಶದಲ್ಲಿ ಪ್ರವಾಸ ಮಾಡಿ ಸಾರ್ವಜನಿಕರ, ದಲಿತ ನಾಯಕರ, ಬುದ್ಧಿಜೀವಿಗಳ ಅಭಿಪ್ರಾಯದಿಂದ ಮತ್ತೆ ಸಂಸದ್‌ನಲ್ಲಿ ಹಿಂದಿನ ಕಾನೂನಿನಲ್ಲಿ ಇದ್ದಂತಹ ಲೋಪದೋಷಗಳನ್ನು ಸರಿಪಡಿಸಿ,

ಅನೇಕ ಹೊಸ ಅಂಶಗಳನ್ನು ಸೇರಿಸಿ ಕಾನೂನನ್ನು ಭದ್ರ ಮಾಡಿದರು, ಇದಕ್ಕೆ 'Protection of Civil rights act' ಎಂದು ಹೆಸರಾಯಿತು. ಈ ಕಾನೂನು ಪ್ರಕಾರ ಅಸ್ಪೃಶ್ಯತೆಯನ್ನು ಆಚರಣೆ ಮಾಡಿದವರಿಗೆ ಉಗ್ರವಾದ ಶಿಕ್ಷೆಯನು ಕೊಡಬೇಕು.

ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಆಗಾಗ್ಗೆ ದಲಿತರ ಪ್ರದೇಶಗಳಿಗೆ ಹೋಗಿ ಪರಿಸ್ಥಿತಿಯನ್ನು ಗಮನಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕು. ನ್ಯಾಯಲಯಗಳಲ್ಲಿ ತೀರ್ಪು ತುಂಬಾ ನಿಧಾನವಾಗುವುದರಿಂದ, ಪ್ರತ್ಯೇಕವಾದ ನ್ಯಾಯಲಯಗಳನ್ನು ತೆರೆಯಲು ಅವಕಾಶವಿದೆ. ಸಂಚಾರಿ ನ್ಯಾಯಲಯಗಳಿಗೂ ಕೂಡ ಅವಕಾಶವಿದೆ ಆದರೂ ಸಹ ದಲಿತರಿಗೆ ನಿರೀಕ್ಷಿಸಿದ ಮಟ್ಟಿಗೆ ಪರಿಹಾರ ದೊರಕಲಿಲ್ಲ. ಸಂವಿಧಾನಿಕ ಚೌಕಟ್ಟಿನಲ್ಲಿ ರೂಪಿಸಲಾದ ಈ ನೀತಿಗಳು ಭಾರತದಲ್ಲಿ ದಲಿತರ ಸಾಮಾಜಿಕ ಹಾಗೂ ಆರ್ಥಿಕ ಉನ್ನತಿಗೆ ಮೆಟ್ಟಿಲುಗಳಾಗಿ ಪರಿಣಮಿಸಬೇಕಾಗಿತ್ತು. ಆದರೆ ಅಂಬೇಡ್ಕರ್‌ರ ಈ ಕನಸು ಸಂಪೂರ್ಣ ನನಸಾಗದೇ ಉಳಿಯಬೇಕಾಯಿತು. ಅಧಿಕಾರಿಗಳ ಮೇಲೆ ಮೇಲ್ಜಾತಿಯವರ ಒತ್ತಡ ನಿಲ್ಲಲಿಲ್ಲ. ಕೆಲಸದಿಂದ ವಂಚಿತರಾಗುವ ಭಯವಿದೆ. ದೇವಾಲಯಗಳಲ್ಲಿ ಪ್ರವೇಶ ದೊರೆಯುವುದಿಲ್ಲ ಎಂಬ ಕಾರಣಗಳಿಂದ ಕೇಂದ್ರಸರ್ಕಾರ ಮತ್ತೆ ಕಾನೂನನ್ನು ಬದಲಾಯಿಸುವ ಚಿಂತನೆ ಮಾಡುತ್ತಿದೆ. ದಲಿತರ ಹಿತವನ್ನು ಕಾಪಾಡಲು 1989 ರಲ್ಲಿ ಕೇಂದ್ರ ಸರ್ಕಾರ ಸಂಸದ್ ಮೂಲಕ ಮತ್ತೊಂದು ಕಾನೂನು ತರಲು ಪ್ರಯತ್ನಪಟ್ಟಿತ್ತು. ಈ ಕಾನೂನನ್ನು "SC, ST (Prevention of Atrocities) Act 1989"[6] ಎಂದು ಕರೆಯುತ್ತಾರೆ. ಇಷ್ಟೆಲ್ಲಾ ಇದ್ದರೂ ಸಹ ದಲಿತರ ಮೇಲಿನ ದೌರ್ಜನ್ಯ ಇನ್ನು ಬಹುತೇಕವಾಗಿ ಇದೆ ಎಂಬುದು ವಾಸ್ತವ ಪರಿಸ್ಥಿತಿ ನೋಡಿದಾಗ ತಿಳಿಯುತ್ತದೆ.

ಕೆಲವು ನಿದರ್ಶನಗಳ ಉಲ್ಲೇಖಿಸುವುದು ಇಲ್ಲಿ ಸೂಕ್ತವೆನಿಸುತ್ತದೆ ಭಾರತದಲ್ಲಿನ ಬಹುತೇಕ ದಲಿತರು, ಕೃಷಿಕಾರ್ಮಿಕರು ಸರ್ಕಾರದ ಅಂಕಿ ಅಂಶಗಳಿಂದಲೇ ಎಂದು ಇದು ಸಾಬೀತಾಗಿದೆ. ಭೂಹೀನರಾದ ಈ ಸಮುದಾಯವು ಊಳಿಗಮಾನ್ಯ ವ್ಯವಸ್ಥೆಯ ದಬ್ಬಾಳಿಕೆಗಳಿಗೆ ಸಿಲುಕಿ, ಶತಮಾನಗಳ ಕಾಲ ದಾಸ್ಯವನ್ನು ಅನುಭವಿಸಿವೆ ಭಾರತದ ಜನಸಂಖ್ಯೆಯ ಶೇ. 24 ರಷ್ಟಿರುವ ಈ ಸಮುದಾಯದ ವಿಮೋಚನೆಗೆ ಇದ್ದ ಏಕೈಕ ಸರಳ ಹಾದಿ ಎಂದರೆ 'ಉಳುವವನಿಗೆ ಭೂಮಿ' ಎಂಬ ನೀತಿಯನ್ನು ಜಾರಿಗೊಳಿಸುವುದಾಗಿತ್ತು. ಸ್ವಾತಂತ್ರ ಪೂರ್ವದಲ್ಲಿ ಈ ಘೋಷಣೆ ಕಾಂಗ್ರೆಸ್ ಮತ್ತಿತರ ಸಾಮಾಜವಾದಿ ಸಿದ್ಧಾಂತದ ಹೋರಾಟಗಾರರ ಪ್ರಮುಖ ಧ್ಯೇಯವಾಗಿತ್ತು. ಆದರೆ ಸ್ವಾತಂತ್ರ್ಯಾನಂತರ ಜಾರಿಗೊಳಿಸಲಾದ ಭೂಸುಧಾರಣೆಯ ನೀತಿಗಳಲ್ಲಿನ ನ್ಯೂನ್ಯತೆಗಳಿಂದ ಈ ಘೋಷಣೆ ಕೇವಲ ಘೋಷಣೆಯಾಗಿಯೇ ಉಳಿಯಿತು. ಇದರಿಂದ ಈ ಸಮುದಾಯದ ಆರ್ಥಿಕ ಪರಿಸ್ಥಿತಿ ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸಲಿಲ್ಲ. ಬದಲಾಗಿ ಭೂಸುಧಾರಣಾ ಕ್ರಮಗಳಿಂದ ರೈತರಿಗೆ ವರವಾಗಿ ಪರಿಣಮಿಸಿತ್ತು. ಪ್ರಸ್ತುತ ಪರಿಸ್ಥಿತಿಯಲ್ಲಿ ಕೃಷಿಭೂಮಿಯ ರಾಷ್ಟ್ರೀಕರಣವೊಂದೇ ಸಮಸ್ಯೆಗೆ ಸೂಕ್ತ ಪರಿಹಾರ ಬದಲಾಗಿಸಬಲ್ಲದು ಅಂಬೇಡ್ಕರ್‌ರವರು ಭೂಸುಧಾರಣೆಯ ಸಂದರ್ಭದಲ್ಲಿ ಕೃಷಿಭೂಮಿಯ ರಾಷ್ಟ್ರೀಕರಣವನ್ನು ಪ್ರತಿಪಾದಿಸಿದುದನ್ನು ಇಲ್ಲಿ ಸ್ಮರಿಸಬೇಕು ಇಂದಿಗೂ ದಲಿತರು ಭೂಮಿಗಾಗಿ ತಮ್ಮ ಹೋರಾಟವನ್ನು ನಡೆಸುತ್ತಲೇ ಇದ್ದಾರೆ. ಅದೇ ರೀತಿ ಮತ್ತೊಂದು ಮುಖ್ಯವಾದ ಅಂಶವೆಂದರೆ ಸಂವಿಧಾನದ ವಿಧಿ 17 ರ ಅನ್ವಯ ಅಸ್ಪೃಶ್ಯತೆಯನ್ನು ನಿರ್ಮೂಲಮಾಡಲು ಸರ್ಕಾರ ಪಣ ತೊಟ್ಟಿತ್ತು ಆದರೆ ಈ ನಿಯಮವನ್ನು ಅನುಷ್ಠಾನಗೊಳಿಸುವುದರಲ್ಲಿ

ಸರ್ಕಾರ ಬಹಳಷ್ಟು ತಡಮಾಡುವುದರ ಜೊತೆಗೆ ನಾನಾ ರೀತಿಯ ನ್ಯೂನ್ಯತೆಗಳು ಎದುರಾದವು. ಸಂಪೂರ್ಣವಾಗಿ ಈ ಸಂವಿಧಾನ ನಿಯಮವನ್ನು ಒಂದು ಸಂಹಿತೆಯಂತೆ ಜಾರಿಗೊಳಿಸುವಲ್ಲಿ ಸರ್ಕಾರ ವಿಫಲವಾಯಿತು. ಇಂದಿಗೂ ಪರಿಸ್ಥಿತಿ ಸುಧಾರಿಸಿಲ್ಲ ದಲಿತರನ್ನು ರಕ್ಷಿಸುವಲ್ಲಿ ಸರ್ಕಾರಿ ಯಂತ್ರಗಳು ಮತ್ತು ಅಧಿಕಾರಶಾಹಿ ವಿಫಲವಾಗಿರುವುದು ಇದಕ್ಕೆ ಕಾರಣವಾಗಿದೆ. ದಲಿತ ಸಮುದಾಯಗಳಲ್ಲಿ ಕಳೆದ ಹಲವು ದಶಕಗಳಲ್ಲಿ ಶಿಕ್ಷಣ, ಹೋರಾಟ ಮತ್ತು ಸಂಘಟನೆಗಳ ಪರಿಣಾಮವಾಗಿ ಸಾಮಾಜಿಕ ಸ್ಥೈರ್ಯ ಮತ್ತು ತಮ್ಮ ಸಾಮಾಜಿಕ ಘನತೆಯ ಬಗ್ಗೆ ಮೂಡಿರುವ ಅರಿವು ಅವರ ಸಾಮುದಾಯಿಕ ಹಕ್ಕು ಪ್ರತಿಪಾದಿಸುವುದರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಅರಿವಿನ ಪರಿಣಾಮವಾಗಿ ತಮ್ಮ ವಿರುದ್ದ ದಬ್ಬಾಳಿಕೆ ನಡೆಸುತ್ತಿರುವವರ ಆಂತರ್ಯವನ್ನು ದಲಿತ ಸಮುದಾಯಗಳು ಗ್ರಹಿಸುತ್ತಿವೆ. ಈ ಬೆಳವಣಿಗೆಯ ಪರಿಣಾಮವಾಗಿ ತಮ್ಮ ವಿರುದ್ದ ನಡೆಯುವ ಆಕ್ರಮಣಗಳನ್ನು, ದಬ್ಬಾಳಿಕೆಗಳನ್ನು ಸಂಘಟಿತವಾಗಿ ಎದುರಿಸುವಲ್ಲಿ ದಲಿತರು ಯಶಸ್ವಿಯಾಗಿದ್ದಾರೆ.

ಗ್ರಾಮಿಣ ಪ್ರದೇಶಗಳಲ್ಲಿ ಇಂದಿಗೂ ಪ್ರಚಲಿತವಾಗಿರುವ ಖಾಸಗಿ ನ್ಯಾಯ ವ್ಯವಸ್ಥೆ, ಸವರ್ಣೀಯರ ಹಿಡಿತದಲ್ಲಿರುವುದರಿಂದ ದಲಿತ ಸಮುದಾಯಗಳಿಗೆ ಮಾರಕವಾಗಿರುತ್ತದೆ. ಕರ್ನಾಟಕದಂತಹ ಕೆಲವು ರಾಜ್ಯಗಳಲ್ಲಿ ದಲಿತರು ಕೃಷಿಯಲ್ಲಿ ತೊಡಗಿದ್ದು ಭೂ ಒಡೆತನ ಹೊಂದಿದ್ದರು. ದಲಿತ ಸಮುದಾಯದಲ್ಲಿ ಭೂಮಾಲೀಕರನ್ನು ಗುರುತಿಸಲಾಗುವುದಿಲ್ಲ. ಕೃಷಿ ಕಾರ್ಮಿಕರು, ಜಾಡಮಾಲಿಗಳು, ಸಫಾಯಿ ಕರ್ಮಚಾರಿಗಳು, ಕಟ್ಟಡ ಕಾರ್ಮಿಕರು, ಜೀತದಾಳುಗಳು, ಬಾಲ ಕಾರ್ಮಿಕರು, ದಿನಗೂಲಿಗಳು ಹೀಗೆ ಹೀನ ಸ್ಥಿತಿಯಲ್ಲಿರುವ ಶ್ರಮಜೀವಿಗಳಲ್ಲಿ ದಲಿತರ ಪಾಲು ಹೆಚ್ಚಾಗಿದೆ. ಈ ಸಮುದಾಯಗಳಿಗೆ ಉತ್ತಮ ಆರೋಗ್ಯ, ಶಿಕ್ಷಣ, ವಸತಿ, ಉದ್ಯೋಗ, ಪೌಷ್ಠಿಕತೆ ಎಲ್ಲವೂ ದುರ್ಲಭವೇ ಆಗಿತ್ತು. ಈ ಸಮುದಾಯಗಳಿಗಾಗಿಯೇ ಯೋಚಿಸಲಾಗುವ ಅನೇಕ ಸರ್ಕಾರಿ ಕಾರ್ಯಕ್ರಮಗಳು ಅನೇಕವೇಳೆ ಕಛೇರಿಗಳಲ್ಲಿ ಧೂಳು ಹಿಡಿಯುತ್ತಲೇ ಅವಸಾನ ಹೊಂದುತ್ತವೆ. ಶಿಶುಮರಣ ಮತ್ತು ಗರ್ಭಿಣಿ ಮಹಿಳೆಯರ ಮರಣ ಸಂಖ್ಯೆಯೂ ದಲಿತರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ದೇಶದ ಆಳುವ ವರ್ಗಗಳಿಗೆ ದಲಿತ ಸಮುದಾಯದ ಬಗ್ಗೆ ಇರುವ ಕಾಳಜಿಗೆ ಇದೊಂದು ಪುಟ್ಟ ನಿದರ್ಶನವಷ್ಟೇ. ಈ ನಿಟ್ಟಿನಲ್ಲಿ ಒಳ್ಳೆಯ ಪ್ರಯತ್ನಗಳು ಪ್ರಮಾಣಿಕವಾಗಿ ಆಗಬೇಕಾದ ಅಗತ್ಯತೆ ಇಂದು ಹೆಚ್ಚಾಗುತ್ತಿದೆ.

ಡಾ॥ ಬಿ.ಆರ್ ಅಂಬೇಡ್ಕರ್ ಅವರು ದಲಿತ ಸಮುದಾಯಗಳಿಗಾಗಿ ನಿಯೋಜಿಸಿದ ಅನೇಕ ಕಲ್ಯಾಣ ಯೋಜನೆಗಳ ನಂತರದಲ್ಲೂ ಸರ್ಕಾರಗಳು ವಿವಿಧ ಯೋಜನೆಗಳನ್ನು ರೂಪಿಸಿದೆ. ಇಂತಹ ಯೋಜನೆಗಳಿಂದ ದಲಿತ ಸಮುದಾಯಕ್ಕೆ ಅನೇಕ ಸೌಲಭ್ಯ ಸವಲತ್ತುಗಳು ದೊರಕಿವೆಯಾದರೂ ಇಡೀ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಗುಣಾತ್ಮಕವಾದ ಬದಲಾವಣೆಗಳನ್ನು ತರುವುದರಲ್ಲಿ ಸಾಫಲ್ಯವನ್ನು ಕಂಡಿಲ್ಲ. ಇಂತಹ ವೈಪಲ್ಯಕ್ಕೆ ಯೋಜನೆಗಳಿಗಿಂತಲೂ ಅವುಗಳ ಅನಿಷ್ಠಾನದಲ್ಲಿನ ನ್ಯೂನ್ಯತೆಗಳೇ ಕಾರಣ.

ದಲಿತರು ಹಿಂದುಗಳಾದರೂ ಆದರೂ ಹಿಂದೂ ದೇವಾಲಯದಲ್ಲಿ ಶತಮಾನಗಳಿಂದ ಅವರನ್ನು ದೇವಾಲಯಗಳಲ್ಲಿ ಪ್ರವೇಶಿಸಲು ಬಿಡುತ್ತಿರಲ್ಲಿಲ್ಲ. ಸ್ವಾತಂತ್ರ ಬರುವ ಮುಂಚೆ ಇವರ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ಆದರೆ ಭಾರತ ಸ್ವಾತಂತ್ರ್ಯವಾದ ನಂತರದಲ್ಲಿ ಸಂವಿಧಾನದಲ್ಲಿ ಇವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಹಿಂದುಗಳಿಗಿರುವಂತಹ ಎಲ್ಲಾ ಸಮಾನ ಹಕ್ಕುಗಳನ್ನು ಇವರಿಗೆ ಕೊಟ್ಟಿದ್ದಾರೆ.

ಜೈಪುರದ ಸೂಳ್ಯ ಎಂಬ ಗ್ರಾಮದಲ್ಲಿ ದಲಿತರಿಗೆ ದೇವಾಲಯದಲ್ಲಿ ಪ್ರವೇಶವಿರಲಿಲ್ಲ. ಅದಕ್ಕಾಗಿ ಅವರು ಎಂದೂ ಪ್ರಯತ್ನ ಪಟ್ಟಿರಲಿಲ್ಲ. ಐದು ವರ್ಷಗಳ ಹಿಂದೆ ಹೆಸರಾಂತ ಅರುಣರಾಯ್‌ರವರ ನೇತೃತ್ವದಲ್ಲಿ ಪ್ರಯತ್ನ ನಡೆಯಿತು. ಇದರಿಂದ ನೂರಾರು ದಲಿತರು ಸ್ಥಳೀಯ ದೇವಾಲಯವನ್ನು ಪ್ರವೇಶಿಸಲು ಮುಂದಾದರು. ಪ್ರತಿಭಟನೆಯನ್ನು ಮಾಡಿದರು. ದಲಿತರ ಒಬ್ಬ ಪೂಜಾರಿಯನ್ನು ಗ್ರಾಮದ ದೇವಾಲಯದಲ್ಲಿ ಪ್ರವೇಶ ಮಾಡಲು ಸವರ್ಣೀಯರು ಬಿಡಲಿಲ್ಲ, ದಲಿತರು ಇದರಿಂದ ಕುಪಿತರಾಗಿ 'ಹಜಾರಿ ಬಲಾಯಿ' ಎಂಬ ತಮ್ಮ ಪೂಜಾರಿಯ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪೋಲೀಸ್ ಬಂದೋಬಸ್ತ್ ಇದ್ದು ದೇವಾಲಯವನ್ನು ಪ್ರವೇಶಿಸಿದರು.

ಬಿಂದೇಶ್ವರ ಪಾಥಕ ಸುಮಾರು ನಲವತ್ತು ವರ್ಷಗಳಿಂದ ಸಮಾಜ ಸುಧಾರಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ದಲಿತರ ಉದ್ಧಾರಕ್ಕಾಗಿ ಶ್ರಮಿಸಿದ್ದರು. ಜಾಡಮಾಲಿ ಕೆಲಸದಿಂದ ದಲಿತರನ್ನು ಮುಕ್ತಗೊಳಿಸಲು ಯಶಸ್ವಿಯಾದ ಯೋಜನೆಯೊಂದನ್ನು ರೂಪಿಸಿದರು "ನಲವತ್ತು ವರ್ಷಗಳಿಂದ ದುಡಿದ ಫಲ ನನಗೆ ಇಂದು ದೊರಕಿತು. ಗಾಂಧೀಜಿಯವರ ಸರಿಸಮಾನತೆಯ ಕನಸು ಇಂದು ನನಸಾಯಿತು. ಅಸ್ಪೃಶ್ಯತೆ ಸಂಪೂರ್ಣವಾಗಿ ನಿರ್ಮೂಲವಾಗಬೇಕಾದರೆ, ಇನ್ನೂ ಹೆಚ್ಚು ಕಾಲ ಬೇಕು. ಆದರೆ ಇಂದಿನ ಘಟನೆ ಒಂದು ಪ್ರಮುಖ ಹೆಜ್ಜೆ ಎಂದು ಭಾವಿಸುತ್ತೇನೆ"[7]ಎಂದು ಪಾಥಕ್‌ರವರು ಹೇಳಿದರು.

ನಿಷ್ಠಾವಂತ ಅಧಿಕಾರಿಗಳು ದಲಿತರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ವವಾದ ಬದಲಾವಣೆಗಳನ್ನು ತರಬಹುದು. ಅವರಲ್ಲಿ ಅಧಿಕಾರದ ಬಲವಿದೆ. ಕೆಲವು ಅಧಿಕಾರಿಗಳು ಮಾನವೀಯ ಹಾಗೂ ಕಾನೂನಿನ ಚೌಕಟ್ಟಿನಲ್ಲಿ ದಲಿತರ ರಕ್ಷಣೆಗೆ ಬದ್ಧರಾಗಿರುತ್ತಾರೆ. ಆದರೆ ಮತ್ತೆ ಕೆಲವರು ಅಲಕ್ಷ್ಯ ಮಾಡುತ್ತಾರೆ.

1998 ರಲ್ಲಿ ಪ್ರಥಮ ಬಾರಿ ಒಂದು ವಿವಾದ ಉಂಟಾಯಿತು. ದಲಿತರು ತೇರು ಎಳೆಯುವುದರಲ್ಲಿ ತಾವೂ ಭಾಗವಹಿಸಬೇಕೆಂದು ಅಪೇಕ್ಷೆ ಪಟ್ಟರು. ಆಗ ಆಡಳಿತದಲ್ಲಿದ್ದ ಡಿ.ಎಂ.ಕೆ ಸರ್ಕಾರದವರು ಒಪ್ಪಂದಕ್ಕೆ ಪ್ರಯತ್ನ ಪಟ್ಟಿತು ಆದರೆ ಸಂಧಾನ ವಿಫಲವಾಯಿತು. ಮೂರು ವರ್ಷ ಈ ಕಾರ್ಯಕ್ರಮ ಸ್ಥಗಿತಗೊಂಡಿತು ನಂತರ ಎಡಿಎಂಕೆ ಬಂದಿತು ತೇರು ಎಳೆಯಲು ಅನುಮತಿ ಕೊಟ್ಟಿತು. ಎಲ್ಲಾ ಪೋಲೀಸ್ ಬಂದೋಬಸ್ತ್ ಎಚ್ಚರಿಕೆ ಕ್ರಮ ತೆಗೆದುಕೊಂಡ ನಂತರ ತನ್ನ ಐದು ವರ್ಷದ ಅವಧಿಯಲ್ಲಿ ನಾಲ್ಕು ಬಾರಿ ಅನುಮತಿ ಕೊಟ್ಟಿತು ನಂತರ ಡಿ.ಎಂ.ಕೆ ಸರ್ಕಾರ ಮತ್ತೆ ಆಡಳಿತಕ್ಕೆ ಬಂದಿತು. ದಲಿತರು ಕೇವಲ ತೇರು ಎಳೆಯಲು ಮಾತ್ರವಲ್ಲ ದೇವಾಲಯದಲ್ಲಿ ಸರಿಸಮಾನತೆಯ ಹಕ್ಕನ್ನು ಪಡೆದು ಪೂಜೆ ಮಾಡಲು ಬಯಸಿದರು. ಸರ್ಕಾರ ಮನ್ನಣೆ ಕೊಟ್ಟಿತು. ಒಟ್ಟಿನಲ್ಲಿ ದಲಿತರು ಒಂದು ಹೋರಾಟ ಮಾರ್ಗದಿಂದ ಕೆಲವು ಹಕ್ಕುಗಳನ್ನು ಪಡೆದರು.

ಇಂದು ಅಂಬೇಡ್ಕರ್ ಅವರ ತತ್ವಗಳು ಸಂಘಪರಿವಾರಕ್ಕೆ ಪ್ರಿಯವಾಗಿವೆ. ಪರಿವಾರದ ಅಧಿಕೃತ ಸ್ವಾಮೀಜಿಯಾದ ಪೇಜಾವರರೂ ಈಗ ಅಸ್ಪೃಶ್ಯತೆಯ ವಿರುದ್ಧ ಆಂದೋಲನೆ ನಡೆಸುವ ಕರೆನೀಡುತ್ತಾರೆ. ಇವರಿಗೆ ಮತಗಳಿಗಾಗಿ ಮತ್ತು ಮತಧರ್ಮದ ಉಳಿವಿಗಾಗಿ ಇದು ಅನಿವಾರ್ಯವಾಗಿದೆ. ಇದೊಂದು ವಿಪರ್ಯಾಸದ ಸಂಗತಿ. "ದಲಿತರನ್ನು ಅಪ್ಪಿಕೊಳ್ಳಿ, ಜಾತಿ ವ್ಯವಸ್ಥೆಯನ್ನು ಕೊನೆಗೊಳಿಸಿ, ದಲಿತರೂ, ಹಿಂದುಗಳು ಎಂದೆಲ್ಲಾ ಪ್ರಚಾರಾಂದೋಲನ ಮಾಡುವ ಪೇಜಾವರರ ಮುಖ್ಯ ಕಾಳಜಿ ಇರುವುದು ಹಿಂದೂಧರ್ಮದ ಪುನರುತ್ಥಾನ

ಮತ್ತು ಮತಾಂತರ ತಡೆಗಟ್ಟುವ ಹುನ್ನಾರ"[8] ತಮ್ಮ ಈ ಕೈಂಕರ್ಯದಲ್ಲಿ ಪೇಜಾವರರು ಪುನಃ ದಲಿತ ಕೇರಿಗಳಿಗೆ ಭೇಟಿನೀಡಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ದಲಿತರಿಗಾಗಿ ಹಾಸ್ಟೆಲುಗಳನ್ನು ಪ್ರಾರಂಭಿಸುವ ಯೋಚನೆ ಹೊಂದಿದ್ದಾರೆ. ಕನಕನನ್ನು ಗುಡಿಯೊಳಗೆ ಬಿಟ್ಟುಕೊಳ್ಳದ ಈ ಮಠಾದೀಶ್ವರರು ಇಂದು ದಲಿತ ಕೇರಿಗೆ, ಮನೆಗಳಿಗೆ ಪ್ರವೇಶಿಸುವ ಅನಿವಾರ್ಯಕ್ಕೆ ಒಳಗಾಗುತ್ತಿದ್ದಾರೆ.

ರಾಜಕೀಯ ನಾಯಕರುಗಳು, ಮುಖ್ಯ ಮಂತ್ರಿಗಳು ದಲಿತರ ಮನೆಯಲ್ಲಿ ತಂಗುವುದರ ಮೂಲಕ ಅಸ್ಪೃಶ್ಯತೆಯ ವಿರುದ್ಧ ತಮ್ಮ ನಿಲುವನ್ನು ಪ್ರತಿಪಾದಿಸುತ್ತಿದ್ದಾರೆ. ತಾವು ದಲಿತರ ಮನೆಯಲ್ಲಿ ವಾಸ್ತವ್ಯ ಹೂಡುವುದನ್ನೇ ಒಂದು ಸರ್ಕಾರಿ ಕಾರ್ಯಕ್ರಮವನ್ನಾಗಿ ಪರಿಗಣಿಸುವ ಮೂಲಕ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು ಅಸ್ಪೃಶ್ಯತೆಯ ವಾಸ್ತವತೆಯನ್ನು ತಮಗೇ ಅರಿವಿಲ್ಲದಂತೆ ಬಹಿರಂಗಗೊಳಿಸಿದ್ದನ್ನು ಕಂಡಿದ್ದೇವೆ. ಬಹುಶಃ ಮುಂಬರುವ ದಿನಗಳಲ್ಲಿ ಈ ಪ್ರಕ್ರಿಯೆಯೂ ಚುನಾವಣಾ ರಾಜಕಾರಣದ ಭಾಗವಾಗ ಬಹುದು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಮತದಾರನು ಅತ್ಯಗತ್ಯ. ಈಗಾಗಿ ಈ ಓಲೈಕೆ ಅವರ ರಾಜಕಾರಣಕ್ಕೆ ಅನಿವಾರ್ಯ. ಆಳುವ ವರ್ಗಗಳಿಗೆ ದಲಿತರ ಪರ ದನಿ ಎತ್ತುವುದು, ದಲಿತ ಹಿತಾಸಾಕ್ತಿಗಳನ್ನು ರಕ್ಷಿಸುವುದು ಚುನಾವಣಾ ಬಂಡವಾಳವಾಗಿ ಪರಿಣಮಿಸಿದೆ. ದಲಿತ ವ್ಯಕ್ತಿಯನ್ನು ಮುಖ್ಯಮಂತ್ರಿಯನ್ನಾಗಿ ಮಾಡುತ್ತೇನೆ ಎಂಬ ಘೋಷಣೆಯ ಹಿಂದೆ ದಲಿತ ಸಮುದಾಯದ ಅಭ್ಯುದಯಕ್ಕಿಂತಲೂ ರಾಜಕೀಯ ಲಾಭ ನಷ್ಟಗಳ ಲೆಕ್ಕಾಚಾರಗಳೇ ಎದ್ದು ಕಾಣುತ್ತವೆ. ಭಾರತ–ಅಮೆರಿಕಾ ಪರಮಾಣು ಒಪ್ಪಂದದ ವಿವಾದದಲ್ಲಿ ಸಂಸತ್ತಿನಲ್ಲಿ ನಡೆದ ವಿಶ್ವಾಸ ಮತ ಪ್ರಹಸನದಲ್ಲೂ ಮಾಯಾವತಿಯವರನ್ನು ಭಾವಿ ಪ್ರಧಾನಿಯಾಗಿ ಬಿಂಬಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಉತ್ತರ ಪ್ರದೇಶದಲ್ಲಿ ಮಾಯಾವತಿ, ಬಿಹಾರದಲ್ಲಿ ರಾಮ್ ವಿಲಾಸ್ ಪಾಸ್ವಾನ್, ತಮಿಳುನಾಡಿನ ರಾಮದಾಸ್, ಮಹಾರಾಷ್ಟ್ರದ ಪ್ರಕಾಶ್, ಅಂಬೇಡ್ಕರ್ ಮುಂತಾದ ರಾಜಕೀಯ ನಾಯಕರುಗಳು, ಅಂಬೇಡ್ಕರ್ ಅವರ ಧ್ಯೇಯಗಳನ್ನು ಸಾಕಾರಗೊಳಿಸುವಲ್ಲಿ ಯಶಸ್ಸು ಕಾಣದಿರುವುದನ್ನು ಈ ಹಿನ್ನೆಲೆಯಲ್ಲೂ ನೋಡಬೇಕಾಗುತ್ತದೆ. "ಯಾವುದೇ ತರ್ಕಕ್ಕೆ ನಿಲುಕದಿರುವ ವೇದ ಮತ್ತು ಶಾಸ್ತ್ರಗಳನ್ನು ಧರ್ಮ, ಸ್ಮೃತಿ ಮತ್ತು ಮನುಸ್ಮೃತಿಗಳನ್ನು ಸಂಪೂರ್ಣವಾಗಿ ನಾಶಗೊಳಿಸಬೇಕು"[9] ಎಂಬ ಅಂಬೇಡ್ಕರ್‌ರವರ ಕರೆಗೆ ತದ್ವಿರುದ್ಧವಾಗಿ, ಹಲವಾರು ಸಂದರ್ಭಗಳಲ್ಲಿ ರಾಜಕೀಯ ಅಧಿಕಾರದ ಲಾಲಸೆಯಿಂದ ಈ ಸ್ಮೃತಿಗಳ ರಕ್ಷಕರನ್ನು ಹಿಂಬಾಲಿಸಿರುವುದು ಕೆಲವು ನಾಯಕರುಗಳ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿಯಾಗಿದೆ. ಈ ಮೂಲಕ ಉದ್ಭವಿಸುವ ದುಷ್ಪರಿಣಾಮವನ್ನು ದೇಶದ ದಲಿತ ಸಮುದಾಯ ಎದುರಿಸುತ್ತಿದೆ.

ಅಂಬೇಡ್ಕರ್ ಮತ್ತು ಅವರ ಹಿಂದಿನ ಮಹಾತ್ಮ ಪುಲೆಯವರಂತಹ ಸಮಾಜ ಸುಧಾರಕರ ಚಿಂತನಾ ಕ್ರಮದಲ್ಲಿ ದಲಿತ ಸಮಮುದಾಯಗಳ ದೇವಾಲಯ ಪ್ರವೇಶ ಮತ್ತು ಅಂತರ್ಜಾತಿ ವಿವಾಹಗಳು ಪ್ರಮುಖ ಸುಧಾರಣಾ ಕ್ರಮಗಳಾಗಿದ್ದವು "ಅಂತರ್ಜಾತೀಯ ವಿವಾಹವೊಂದೇ ಜಾತಿಪದ್ಧತಿಯನ್ನು ಹೋಗಲಾಡಿಸುವ ಪ್ರಬಲವಾದ ಅಸ್ತ್ರ"[10] ಎಂದು ಅಂಬೇಡ್ಕರ್ ಹೇಳಿದುದನ್ನು ಇಲ್ಲಿ ಸ್ಮರಿಸಬಹುದು. ಈ ಎರಡೂ ಕ್ರಮಗಳು ಇಂದಿಗೂ ಸಹ ಜಾತಿವ್ಯವಸ್ಥೆಯ ವಿರುದ್ಧ ಹೋರಾಡಲು ಉತ್ತಮ ಅಸ್ತ್ರಗಳೇ ಆಗಿವೆ. ಆದರೆ ಐತಿಹಾಸಿಕ ದೃಷ್ಟಿಕೋನದಿಂದ ನೋಡಿದಾಗ ಈ ಅಸ್ತ್ರಗಳನ್ನು ಪುರೋಹಿತಶಾಹಿಯು ತನ್ನ ಅನುಕೂಲಕ್ಕೆ ತಕ್ಕಂತೆ

ಉಪಯೋಗಿಸಿಕೊಂಡಿರುವುದು ಕಂಡುಬರುತ್ತದೆ. ಅಂತರ್ಜಾತಿ ವಿವಾಹವಾಗುವವರು ಪ್ರಜ್ಞಾಪೂರ್ವಕವಾಗಿ ತಮ್ಮ ಜಾತಿ ಅಸ್ಮಿತೆಗಳನ್ನು ಕಳೆದುಕೊಂಡು ಜಾತಿಗಳ ಎಲ್ಲೆ ಮೀರಿದ ಚಿಂತನಾ ಕ್ರಮವನ್ನು ತಮ್ಮ ಜೀವನ ಶೈಲಿಯಲ್ಲಿ ಅಳವಡಿಸಿಕೊಂಡಲ್ಲಿ ಅಂತರ್ಜಾತಿ ವಿವಾಹಗಳು ಅರ್ಥಪೂರ್ಣವಾಗಬಹುದು. ಪುರುಷ ಪ್ರಧಾನ ಸಮಾಜದಲ್ಲಿ ಇಂತಹ ವಿವಾಹಗಳಲ್ಲಿ ಜಾತಿಪ್ರಜ್ಞೆ ಹೊರಸೂಸುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ, ಕಳೆದ ಐದಾರು ದಶಕಗಳಲ್ಲಿ ಸಾವಿರಾರು ಅಂತರ್ಜಾತೀಯ ಮದುವೆಗಳು ನಡೆದಿರುವುದಾದರೂ, ಈ ದೃಷ್ಟಿಕೋನದಿಂದ ಯಾವುದೇ ಸಂಶೋಧನೆ ಅಥವಾ ಸಮೀಕ್ಷೆ ನಡೆದಿಲ್ಲವಾದ್ದರಿಂದ ಈ ಬಗ್ಗೆ ನಿಖರವಾಗಿ ಏನನ್ನು ಹೇಳಲಾಗುವುದಿಲ್ಲ ಆದರೂ 'ನಾವು–ಅವರು' ಎಂಬ ಪ್ರಜ್ಞೆ ಜೀವಂತವಾಗಿರುವವರೆಗೂ ಧಾರ್ಮಿಕ ಜಾತೀಯ ಅಸ್ಮಿತೆಗಳು ಜೀವಂತವಾಗಿರುವವರೆಗೂ, ಜಾತಿ ಪ್ರಜ್ಞೆಯನ್ನು ಹೋಗಲಾಡಿಸಲಾಗುವುದಿಲ್ಲ ಎಂದು ಮಾತ್ರ ಹೇಳಬಹುದು. ಅದೇ ವೇಳೆ ವರ್ಣಸಂಕರದ ಮೂಲಕ ಶ್ರೇಣೀಕೃತ ಜಾತಿ ವ್ಯವಸ್ಥೆಗೆ ಬಲವಾದ ಪೆಟ್ಟು ನೀಡಬಲ್ಲ ಅಂತರ್ಜಾತಿ ವಿವಾಹ ಒಂದು ಕ್ರಾಂತಿ ಕಾರಿ ಪರಿವರ್ತನೆಯನ್ನು ಸಾಧಿಸಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಸಾಮಾಜಿಕ ಬಹಿಷ್ಕಾರ ಎಂಬ ಕಠೋರ ಹಾಗೂ ಮಾನವೀಯತೆಯ ಬಾಹಿರ ಶಿಕ್ಷೆ ಸಮಾಜದ ಒಂದು ಗುಂಪಿನ ಮೇಲೆ ಅಥವಾ ಒಬ್ಬ ವ್ಯಕ್ತಿಯ ಮೇಲೆ ವಿಧಿಸುವ ಪದ್ಧತಿ. ಇದು ಒಂದು ಬಗೆಯ ಮಾನಸಿಕ ಹಾಗೂ ದೈಹಿಕ ಶಿಕ್ಷೆ. ಈ ಪದ್ಧತಿ ಕಾನೂನು ಬಾಹಿರ ಇದನ್ನು ಆಚರಿಸುವವರೇ ಅಪರಾಧಿಗಳು. ಒಬ್ಬ ಮನುಷ್ಯನಿಗೆ ಶಿಕ್ಷೆ ಕೊಡುವ ಅಧಿಕಾರ ದೇವರಿಗೆ ಹಾಗೂ ಸರ್ಕಾರಕ್ಕೆ ಇರುವುದು. ಈ ಪದ್ದತಿಯನ್ನು ಸಾಮಾನ್ಯವಾಗಿ ಶ್ರೀಮಂತರು ಬಡವರ ಮೇಲೆ ಅಥವಾ ಸವರ್ಣೀಯರು ದಲಿತರ ಮೇಲೆ ಹೇರುವರು. ಸಾಮಾಜಿಕ ಬಹಿಷ್ಕಾರ ಎಂಬುದು ಒಂದು ಪ್ರಭಾವಿತ ಗುಂಪಿನ ದಬ್ಬಾಳಿಕೆ. ಕಾನೂನು ಇವರಿಗೆ ಶರಣು. ಇವರು ಕಾನೂನನ್ನು ಮುರಿಯಬಹುದು ಮತ್ತು ಬಗ್ಗಿಸಬಹುದು. ದೀನ ದಲಿತರು ಇವರ ಸೆರೆಯಾಳುಗಳು. ಇವರ ಕೈಗೊಂಬೆಗಳು. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸರಿಸಮಾನರು ಆದರೆ ಇದು ಪುಸ್ತಕದಲ್ಲಿ ಮಾತ್ರ, ವಾಸ್ತವ ಪರಿಸ್ಥಿತಿ ಬೇರೆ. ಈ ಪದ್ದತಿಗೆ ಗುರಿಯಾಗಿರುವವರು ದಲಿತರು ದಲಿತರಿಗಿಂತಲೂ ಹಿಂದೆ ಬಿದ್ದಿರುವ ಮುಸಲ್ಮಾನರು ತಲೆಯೆತ್ತಿ ನಡೆಯುವರು. ಹಿಂದು ಸಮಾಜದ ದಬ್ಬಾಳಿಕೆ ಇವರಿಗೆ ಅನ್ವಯಿಸುವುದಿಲ್ಲ.

ಸೂಲಿಬೆಲೆಯ ರಾಮಕೋಟಿ ಉತ್ಸವದಲ್ಲಿ ದಲಿತರಿಗೆ ದೇವಾಲಯ ಪ್ರವೇಶಿಸಲು ಅನುಮತಿ ನೀಡದೆ ಬಹಿಷ್ಕಾರ ಹಾಕಿರುವ ಘಟನೆಯನ್ನು ವಿವಿಧ ಸಂಘ ಸಂಸ್ಥೆಗಳು ತೀವ್ರವಾಗಿ ಖಂಡಿಸಿದ್ದು ಅಪರಾಧಿಗಳನ್ನು ಬಂಧಿಸಿ ಉಗ್ರ ಶಿಕ್ಷೆ ನೀಡುವಂತೆ ಒತ್ತಾಯಿಸಿವೆ.

ವಿಜಯ ಪುರದ ಸಮೀಪದ ಬಳುವನಹಳ್ಳಿ ಗ್ರಾಮದಲ್ಲಿ ಭಾರೀ ವಿಜೃಂಭಣೆಯಿಂದ ನಡೆಯುವ ರಾಮಕೋಟೆ ಉತ್ಸವ ಸಂದರ್ಭದಲ್ಲಿ ದೇವಾಲಯ ಪ್ರವೇಶಿಸಲು ಅನುಮತಿಯನ್ನು ಸವರ್ಣೀಯರು ತಡೆದು ಪ್ರಶ್ನೀಸಿದ್ದಕ್ಕೆ ದಲಿತರ ಮೇಲೆ ಹಲ್ಲೆ ನಡೆಸಿದ್ದಾರೆ. ನಂತರ ಕೂಲಿ ಕೆಲಸಕ್ಕೆ ಕರೆಯದೆ ತೋಟಗಳ ಹತ್ತಿರ ನೀರಿಗೆಂದು ಹೋದವರನ್ನು ಕಲ್ಲುಗಳನ್ನು ಬೀಸಿ ಓಡಿಸಿದ್ದಾರೆನ್ನಲಾದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಪೋಜಪ್ಪ ಮತ್ತು ಉಪಾಧ್ಯಕ್ಷ

ಸಿ. ಮುನಿಯಪ್ಪ ಸರ್ಕಾರವನ್ನು ಒತ್ತಾಯಿಸಿದರು. ಡಾ॥ ಬಿ.ಆರ್ ಅಂಬೇಡ್ಕರ್ ಯುವಕ ಸಂಘ ಮತ್ತು ಸೂಲಿಬೆಲೆ ಅನುಪಮಾ ಮಹಿಳಾ ಸ್ವಸಹಾಯ ಸಂಘಗಳು ಸೇರಿದಂತೆ ವಿವಿಧ ಸಂಘಟನೆಗಳು ಈ ಘಟನೆಯನ್ನು ಖಂಡಿಸಿವೆ.

ಸಮಾಜದಲ್ಲಿ ಇಂದಿಗೂ ಅಸಮಾನತೆ, ಜಾತಿ ಸಂಘರ್ಷ ಹಾಗೂ ಲಿಂಗ ತಾರತಮ್ಯದಂತಹ ಸಾಮಾಜಿಕ ಪಿಡುಗುಗಳು ಜನಮಾನಸದಿಂದ ದೂರವಾಗಿಲ್ಲ, ಸಮಬಾಳು–ಸಮಪಾಲು ತತ್ವದಡಿಯಲ್ಲಿ ಸಂವಿಧಾನ ತನ್ನ ಪ್ರಜೆಗಳಿಗೆ ಹಕ್ಕುಗಳನ್ನು ದಯಪಾಲಿಸಿದ್ದರೂ ಅವುಗಳ ಕಟ್ಟುನಿಟ್ಟಿನ ಪಾಲನೆಯಾಗಿಲ್ಲ. ವರ್ಗತಾರತಮ್ಯಕ್ಕೆ ಬಲಿಯಾಗಿ ನಿಕೃಷ್ಟ ಜೀವನ ನಡೆಸುವುದು. ಸಮಾಜದ ಘೋರ ವ್ಯವಸ್ಥೆಗೆ ಹಿಡಿದ ಕನ್ನಡಿ. ಇದಕ್ಕೊಂದು ನಿದರ್ಶನ ಒರಿಸ್ಸಾದ ಪುರಿ ಜಗನ್ನಾಥನ ಸನ್ನಿಧಿಯಲ್ಲಿ ನಡೆದಿದೆ. ಮೂವರು ಶಾಲಾ ಬಾಲಕಿಯರು ಇಲ್ಲಿನ ಕಾಳಿಮಾತೆಗೆ ನೈವೇದ್ಯ ಅರ್ಪಿಸಲು ಮುಂದಾಗಿದ್ದೇ ಇದೀಗ ಬಹುದೊಡ್ಡ ವಿವಾದ. ಕಾರಣ ಅವರು ದಲಿತ ವರ್ಗಕ್ಕೆ ಸೇರಿದವರು ಈ ತಪ್ಪಿಗಾಗಿ ಇದೀಗ ಆ ಬಾಲಕಿಯರು ಸೇರಿದಂತೆ ಇಡೀ ಗ್ರಾಮಕ್ಕೆ ಬಹಿಷ್ಕಾರ ಹಾಕಿರುವ ಅಮಾನವೀಯ ಘಟನೆ ನಡೆದು ವರ್ಷ ಕಳೆದರೂ ಬಹಿರಂಗಗೊಂಡಿದ್ದು ಇತ್ತೀಚೆಗೆ. ಕಾರಣ ಜನರಲ್ಲಿರುವ ಮೂಢನಂಬಿಕೆ. ತಮ್ಮ ತಂದೆಕಾಲದಿಂದಲೂ ಹರಿಜನರಿಗೆ ದೇವಾಲಯ ಪ್ರವೇಶ ನಿರ್ಬಂಧಿಸಲಾಗಿದೆ ಹಾಗೆಯೇ ನಾವು ಕೂಡ ದಲಿತರನ್ನು ಒಳಬಿಡುತ್ತಿಲ್ಲ ಎಂದು ದೇವಾಲಯದ ಕ್ಷೇತ್ರಪಾಲಕರು ಹೇಳುತ್ತಾರೆ. ಸಂಪ್ರದಾಯವಾದಿಗಳ ಈ ಉತ್ತರಕ್ಕೆ ಶೋಷಣೆಗೊಳಗಾದ ಜನರದು ಅಸಹಾಯಕತೆಯ ಆಕ್ರೋಶ. ಕಾಲ ಬದಲಾದಂತೆ ಆಚರಣೆಗಳು ಬದಲಾಗುತ್ತವೆ ಎಂದು ಭಾವಿಸಿದರೂ ಇನ್ನು ಅಲ್ಲಿನ ಜನ ಬದಲಾಗುವ ಮನಸ್ಸು ಮಾಡಿಲ್ಲ ಮೇಲ್ಜಾತಿ ಹಾಗೂ ಕೆಳಜಾತಿಗಳೆರಡು ಅವಲಂಬಿಸಿದ್ದು ಕೃಷಿಯನ್ನೇ. ಮಾಡುವ ಕೆಲಸ, ಪೂಜಿಸುವ ದೇವರು ಒಂದೇ ಆದರೂ ತಾರತಮ್ಯ ಮಾಡುತ್ತಿರುವುದು ನೀಚಕೃತ್ಯ ಎಂಬುದು ದೇವಾಲಯ ಪ್ರವೇಶಿಸಿದ ಸುಶಿಕ್ಷಿತ ಹೆಣ್ಣುಮಕ್ಕಳ ಅಭಿಪ್ರಾಯ.

ದಲಿತರಿಗೆ ಕೆರೆ ನೀರು ಮುಟ್ಟಲು ಬಿಡುವುದಿಲ್ಲ. ಹೋಟೆಲುಗಳಲ್ಲಿ ಕಾಫಿ ಕೊಡಲ್ಲ. ಸಹಭೋಜನ ಇಲ್ಲ, ಶಾಲೆಗಳಲ್ಲಿ ದಲಿತರು ಸಿದ್ದಪಡಿಸಿದ ಬಿಸಿಯುಟವನ್ನು ಮಕ್ಕಳು ಊಟ ಮಾಡುವುದಿಲ್ಲ ಎನ್ನುವುದು ಒಂದು ಕಡೆಯಾದರೆ, ಮೈಸೂರು ಜಿಲ್ಲೆಯಲ್ಲಿ ದಲಿತರ ಹೆಸರಿನಲ್ಲಿರುವ ನ್ಯಾಯಬೆಲೆ ಅಂಗಡಿಗಳಿಂದ ಸವರ್ಣೀಕೊಳ್ಳುವುದಿಲ್ಲ ಯರು ಪಡಿತರವನ್ನು ಕೂಡ ತೆಗೆದುಕೊಳ್ಳುವುದಿಲ್ಲ. ಎಪಿಎಲ್, ಬಿಪಿಎಲ್ ಕಾರ್ಡುಗಳ ಸಮಸ್ಯೆ ಹಾಗೂ ಯುನಿಟ್ ಪದ್ಧತಿಯ ಗೊಂದಲಗಳ ನಡುವೆ ಮೈಸೂರು ಜಿಲ್ಲೆಯ ಪಡಿತರ ವ್ಯವಸ್ಥೆಯಲ್ಲಿ ಸಾಮಾಜಿಕ ಬಹಿಷ್ಕಾರದ ಸಮಸ್ಯೆಯು ಎದುರಾಗಿದೆ. ಭಾರತದಲ್ಲಿ ದಲಿತರ ಮೇಲಿನ ಹಿಂಸಾಚಾರವನ್ನು ಜನಾಂಗೀಯ ತಾರತಮ್ಯಕ್ಕೆ ಹೋಲಿಸಿರುವ ವಿಶ್ವಸಂಸ್ಥೆಯ ಸಮಿತಿ ಸಾಮಾಜಿಕವಾಗಿ ಹಿಂದುಳಿದವರನ್ನು ದೇಶದಲ್ಲಿ ನಡೆಸಿಕೊಳ್ಳುತ್ತಿರುವ ರೀತಿಯನ್ನು ಪ್ರಶ್ನಿಸಿದೆ. ಭಾರತ ಸರ್ಕಾರವು ದಲಿತರ ಮೇಲಿನ ದೌರ್ಜನ್ಯಕ್ಕೆ ಕೂಡಲೇ ತಡೆಹಾಕಬೇಕು ಮತ್ತು ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯಿದೆಯನ್ನು ವಾಪಸ್ ಪಡೆಯಬೇಕು ಎಂದು ವಿಶ್ವಸಂಸ್ಥೆಯ ಜನಾಂಗೀಯ ತಾರತಮ್ಯ ನಿರ್ಮೂಲನಾ ಸಮಿತಿ (ಸಿ ಇ ಆರ್ ಡಿ) ಕರೆ ನೀಡಿದೆ. ಗ್ರೀಸ್‌ನ ಲೈನೋಸ್ ಅಲೆಗ್ಸಾಂಡರ್ ಸಿಸಿಲಿಯಾನೋಸ್ ಅವರ ನೇತೃತ್ವದ ಸಮಿತಿ ಜಿನೀವಾದಲ್ಲಿ ಫೆಬ್ರವರಿ 23 ಮತ್ತು 26 ರಂದು ಎರಡು ಸಭೆ ನಡೆಸಿ ವರದಿ ಪ್ರಕಟಿಸಿದೆ.

ದಲಿತರ ವಾಸ್ತವಿಕ ತಾರತಮ್ಯ ಹಾಗೆಯೇ ಮುಂದುವರೆದಿದೆ ಎಂದು ವರದಿ ಗುರುತಿಸಿದೆ. ದಲಿತರ ಚಿತ್ರಹಿಂಸೆ ಮತ್ತು ಕೊಲೆಗಳು ದಲಿತ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯ, ಸುನಾಮಿ ನಂತರದ ಪರಿಹಾರ ಕಾರ್ಯದಲ್ಲಿ ಜಾತಿ ತಾರತಮ್ಯ ಮುಂತಾದ ವ್ಯವಸ್ಥಿತ ಆಕ್ರಮಣಗಳತ್ತ ವರದಿ ಬೆಳಕು ಚೆಲ್ಲಿದೆ "ಜಿನೀವಾದಲ್ಲಿ ವಿಶ್ವಸಂಸ್ಥೆಯ ತಜ್ಞರ ಮುಂದೆ ದಲಿತರ ಮೇಲಿನ ದೌರ್ಜನ್ಯ ಕುರಿತು ಸಾಕಷ್ಟು ಪುರಾವೆಗಳನ್ನೊದಗಿಸಿದ್ದರೂ ಅದನ್ನು ಭಾರತದಲ್ಲಿ ದಲಿತರ ಹಕ್ಕುಗಳನ್ನು ವ್ಯವಸ್ಥಿತವಾಗಿ ತಿರಸ್ಕರಿಸುತ್ತಿರುವ ಪ್ರತಿಬಿಂಬ ಎಂದು ವರದಿಯಲ್ಲಿ ವಿವರಿಸಲಾಗಿದೆ"[11] ಎಂದು ಮಾನವನ ಹಕ್ಕುಗಳು ಮತ್ತು ಜಾಗತಿಕ ಕಾನೂನು ಕೇಂದ್ರದ ಸಿಬ್ಬಂದಿ ನಿರ್ದೇಶಕಿ ಹಾಗೂ ಸಮಿತಿ ಸದಸ್ಯ ಸ್ಮಿತಾ ನಾರೂಲಾ ಅವರು ತಿಳಿಸಿದರು.

ಶೇ 98 ರಷ್ಟು ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಬಿದ್ದು ಹೋಗಿವೆ ಎಂದು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಧ್ಯಕ್ಷ ನೆಹರು ಚ. ಓಲೇಕಾರ್ ತಿಳಿಸಿದರು. ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ನಂತರ ವರದಿಗಾರರೊಂದಿಗೆ ಮಾತನಾಡಿದ ಅವರು "ಬೆರಳೆಣಿಕೆಯಷ್ಟು ಪ್ರಕರಣಗಳಲ್ಲಿ ಮಾತ್ರ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ"[12] ಎಂದರು. "ದೌರ್ಜನ್ಯಕ್ಕೆ ಒಳಗಾದ ದಲಿತರಿಗೆ ನ್ಯಾಯ ಒದಗಿಸಲು ಸಾಕ್ಷಿಗಳು ಮುಂದೆ ಬಂದರೆ ಅವರಿಗೆ ಆಯೋಗದಿಂದ ಅಗತ್ಯ ನೆರವು ಒದಗಿಸಲಾಗುವುದು"[13] ಎಂದು ಹೇಳಿದರು. "ಪರಿಶಿಷ್ಟ ಜಾತಿ ಪಟ್ಟಿಯೊಳಗಿನ ವಿವಿಧ ಜಾತಿಗಳ ಪೈಕಿ ಹಲವು ಜಾತಿಗಳ ಜನರು ಒಳಮೀಸಲಾತಿ ಬೇಕು ಎಂದು ಕೇಳುತ್ತಿದ್ದಾರೆ. ಒಳ ಮೀಸಲಾತಿ ತರುವುದರಲ್ಲಿ ತಪ್ಪೇನು ಇಲ್ಲ"[14] ಎಂದು ಓಲೇಕಾರ್ ಅವರು ಅಭಿಪ್ರಾಯಪಡುತ್ತಾರೆ.

ಗಾಂಧೀಜಿಯವರು ಮೊಟ್ಟಮೊದಲು ಪರಿಶಿಷ್ಟ ಜಾತಿಯವರಿಗೆ 'ಹರಿಜನ' ಎಂಬ ಪದವನ್ನು ಉಪಯೋಗಿಸಿದರು ಅಂದರೆ ದೇವರ ಮಕ್ಕಳು ಎಂದರ್ಥ. ಹರಿಜನರು ಎಂಬ ಪದವನ್ನು ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ದಬ್ಬಾಳಿಕೆಗೆ, ಶೋಷಣೆಗೆ ಹಾಗೂ ಅಸ್ಪೃಶ್ಯತೆಗೆ ಒಳಗೊಂಡವರಿಗೆ ಅನ್ವಯಿಸಲು ಗಾಂಧೀಜಿಯವರು ಈ ಪದವನ್ನು ಉಪಯೋಗಿಸಿದರು. 1935 ರಲ್ಲಿ ಇಂಗ್ಲೇಂಡಿನಿಂದ ಭಾರತಕ್ಕೆ ಸ್ವಾತಂತ್ರ್ಯ ನೀಡುವ ದಿಕ್ಕಿನಲ್ಲಿ ಚರ್ಚಿಸಲು ಲಾರ್ಡ್ ಸೈಮನ್ ಆಯೋಗ ಬಂದಿತ್ತು. ಅವರ ಮುಂದೆ ಡಾ. ಅಂಬೇಡ್ಕರ್‌ರವರನ್ನು 'ಹರಿಜನ' ಪದವನ್ನು ತಿರಸ್ಕರಿಸಿ ಪರಿಶಿಷ್ಟ ವರ್ಗ ಎಂದು ಗುರ್ತಿಸಿದರು. ಈ ಪರಿಶಿಷ್ಟ ವರ್ಗದವರನ್ನು ಇತ್ತೀಚೆಗೆ ದಲಿತರೆಂದು ಕರೆಯಲಾಯಿತು. ಈಗ ಈ ಪದ ಜಾರಿಯಲ್ಲಿದೆ. ಹಿಂದೂ ಧರ್ಮದ ಅಸ್ತಿತ್ವವನ್ನು, ಹಿಂದೂ ಅಸ್ಮಿತೆಯನ್ನು ಉಳಿಸಿಕೊಳ್ಳಲು ದೇವಾಲಯ ಮತ್ತು ಮಠಗಳೇ ಪ್ರಮುಖ ಕೇಂದ್ರಗಳಾಗಿವೆ ಎಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ. ಒಂದೆಡೆ ಅನೇಕ ಪ್ರಸಿದ್ಧ ದೇವಾಲಯಗಳಲ್ಲಿ ದಲಿತರಿಗೆ ಮುಕ್ತ ಪ್ರವೇಶ ದೊರೆಯುತ್ತಿದ್ದರೆ ಇನ್ನೊಂದೆಡೆ ದಲಿತ ಸಮುದಾಯಗಳು ತಮ್ಮದೆ ಆದ ಪ್ರತ್ಯೇಕ ದೇವಸ್ಥಾನಗಳನ್ನು ಕಟ್ಟಿಕೊಳ್ಳುತ್ತಿವೆ ಹಲವಾರು ದೇವಾಲಯಗಳಲ್ಲಿ ದಲಿತ ಪುರೋಹಿತರೂ ನೇಮಕಗೊಂಡಿದ್ದಾರೆ ಇತ್ತೀಚೆಗೆ ಸರ್ವೋಚ್ಚ ನ್ಯಾಯಲಯವೂ ಸಹ ದಲಿತರಿಗೆ ಪುರೋಹಿತ ನೌಕರಿ ನೀಡಲು ಯಾವುದೇ ಅಭ್ಯಂತರ ಇರಕೂಡದು ಎಂದು ಆದೇಶ ನೀಡಿದೆ.

ಗ್ರಾಮೀಣ ಪ್ರದೇಶಗಳಿಂದ ದಲಿತರು ಇಂದು ನಗರ–ಪಟ್ಟಣ ಪ್ರದೇಶಗಳಿಗೆ ಬಂದು ನೆಲೆಸುತ್ತಿದ್ದಾರೆ. ಭೂಮಿಯೊಂದಿಗಿನ ತಮ್ಮ ಸಂಬಂಧಗಳನ್ನು ಕಡಿದುಕೊಳ್ಳುವ ಈ ಸಮುದಾಯಗಳಿಗೆ ನಗರಗಳಲ್ಲಿ ಒಂದು ಸಾಮಾಜಿಕ ಸ್ಥಾನ ಸ್ಥಾಪಿಸಿಕೊಳ್ಳಬೇಕಾದ ಅವಶ್ಯಕತೆ ಇರುತ್ತದೆ. ನಗರ ಪ್ರದೇಶಗಳಲ್ಲಿ ಜಾತಿ ವ್ಯವಸ್ಥೆಯ ಕರಾಳ ರೂಪಗಳು ಬಹಿರಂಗವಾಗಿ ವ್ಯಕ್ತವಾಗುವುದಿಲ್ಲವಾದರೂ ಅಂತರ್ಯದಲ್ಲಿರುವ ಜಾತಿ ಪ್ರಜ್ಞೆಯಿಂದ ದಲಿತ ಸಮುದಾಯಗಳ ಅಸ್ಮಿತೆ ಪ್ರಶ್ನಾರ್ಹವಾಗಿರುತ್ತದೆ. ಆರ್ಥಿಕವಾಗಿ ಉನ್ನತಿ ಹೊಂದಿದ್ದರೂ ಸಾಮಾಜಿಕ ಚೌಕಟ್ಟಿನಲ್ಲಿ ದಲಿತರಿಗೆ ಸಮಾನವಾದ ಸ್ಥಾನವನ್ನು ಒದಗಿಸಲು ಸವರ್ಣೀಯ ಸಮಾಜ ಸದಾ ಹಿಂಜರಿಯುತ್ತದೆ. ಭಾಷೆ, ಶುಚಿತ್ವ, ಸಂಪ್ರದಾಯ, ಆಚಾರ ವಿಚಾರಗಳು, ಆಹಾರ ಪದ್ದತಿ ಇವೆಲ್ಲವೂ ದಲಿತ ಸಮುದಾಯವನ್ನು ಸಾಮಾಜಿಕ ಚೌಕಟ್ಟಿನಿಂದ ಹೊರಗಿಡಲು ಮೇಲ್ಜಾತಿಯ ಜನಾಂಗಕ್ಕೆ ಅಸ್ತ್ರಗಳೇ ಆಗಿಬಿಡುತ್ತವೆ. ಈ ಪರಿಸ್ಥಿತಿಯಿಂದ ಹೊರಬರಲು ನಗರವಾಸಿ ದಲಿತರಿಗೆ ತಮ್ಮ ಜೀವನ ಶೈಲಿಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ನಗರ ಪ್ರದೇಶಗಳಲ್ಲಿ ದಲಿತರ ಜೀವನ ಶೈಲಿ ವಿಭಿನ್ನವಾಗಿರುತ್ತದೆ. ನಗರ ಮತ್ತು ಪಟ್ಟಣಗಳಲ್ಲಿ ದಲಿತರು ಅನಾಮಧೇಯರಾಗಿ ಉಳಿಯುವ ಮೂಲಕ ಈ ವಿಕರ್ಷಣೆ ಮತ್ತು ಅಸ್ಪೃಶ್ಯತೆಯಿಂದ ಮುಕ್ತಾರಾಗಿರುವ ಸಾಧ್ಯತೆ ಇದೆ ಎಂದು ಅಂಬೇಡ್ಕರ್ ವ್ಯಾಖ್ಯಾನಿಸುತ್ತಾರೆ. ಅಸ್ಪೃಶ್ಯರಿಗೂ ಗ್ರಾಮೀಣ ಭಾರತದಲ್ಲಿ ಉಜ್ವಲ ಭವಿಷ್ಯವಿದೆ ಎಂದು ನಂಬಿದ್ದ ಗಾಂಧೀಜಿಯವರು ಇದಕ್ಕೆ ತದ್ವಿರುದ್ದವಾದ ಅಭಿಪ್ರಾಯವನ್ನು ತಾಳುತ್ತಾರೆ. ದಲಿತರು ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ, ಮೆಟ್ರೋಪಾಲಿಟನ್ ನಗರಗಳಿಗೆ ಬಂದು ನೆಲೆಸಿದ್ದರೂ ಅಸ್ಪೃಶ್ಯತೆಯಿಂದ ಸಂಪೂರ್ಣ ವಿಮೋಚನೆ ದೊರೆತಿಲ್ಲವೆಂಬ ಅಂಶವನ್ನು ನಾನು ಇಲ್ಲಿ ವಿವರಿಸಿದ್ದೇನೆ. ನಗರದಲ್ಲಿ ದಲಿತರಿಗೆ ಬಾಡಿಗೆಗೆ ಮನೆಸಿಗುವುದು ಇಂದಿಗೂ ದುರ್ಲಭ.

ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡುವ ಪ್ರಸ್ತಾವನೆ ಬಂದ ಸಂದರ್ಭದಲ್ಲಿ ಸವರ್ಣೀಯರಿಂದ ಪ್ರತಿಭಟನೆ ವ್ಯಕ್ತವಾದಾಗ ಬಹುತೇಕವಾಗಿ ದಲಿತರು, ದಲಿತ ಸಂಘಟನೆಗಳು ಮೀಸಲಾತಿಯ ಪರವಾಗಿ ಹೋರಾಡಿದ್ದನ್ನು ನೋಡಿದ್ದೇವೆ. ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾದ ತಾರತಮ್ಯಕ್ಕೊಳಗಾದ, ದಮನಿಸಲ್ಪಟ್ಟ ಒಂದು ಇಡೀ ಜನಸಮುದಾಯವು ಇಂದು ಸಾವಿರಾರು ಸಂಖ್ಯೆಯಲ್ಲಿ ವೈದ್ಯರನ್ನು, ಇಂಜಿನಿಯರುಗಳನ್ನು, ವಕೀಲರನ್ನು, ಲೇಖಕ, ಕವಿ, ಸಾಹಿತಿಗಳನ್ನು ಸೃಷ್ಟಿಸಿರುವುದು ಅಂಬೇಡ್ಕರ್‌ವಾದದ ಮಹಾನ್ ಸಾಧನೆಯಾಗಿದೆ ಎಂಬುದನ್ನು ನಾನು ಇಲ್ಲಿ ಶ್ಲಾಘಿಸಿದ್ದೇನೆ. ದಲಿತ ಜನಾಂಗವನ್ನು ಶೋಷಣೆಯಿಂದ ಮೇಲೆತ್ತುವ, ಅವರಲ್ಲಿ ಒಂದು ಹೋರಾಟದ ಕಿಚ್ಚನ್ನು ತುಂಬಿ ಹುರಿದುಂಬಿಸಿ ಅವರ ಉದ್ಧಾರಕ್ಕೆ ಕಾರಣಕರ್ತರಾದ ಡಾ॥ ಸಿದ್ಧಲಿಂಗಯ್ಯನವರ ಪ್ರತಿಭೆಯ ಪರಿಶ್ರಮವನ್ನು ನಾನು ಇಲ್ಲಿ ಶ್ಲಾಘಿಸಲು ಬಯಸಿದ್ದೇನೆ. ದಲಿತರಲ್ಲಿ ಒಗ್ಗಟ್ಟಿರಲಿಲ್ಲ. ಸರಿಯಾದ ನಾಯಕತ್ವವಿರಲಿಲ್ಲ, ಸಂಘಟನೆ ಮತ್ತು ಹೋರಾಟ ಜಾರಿಗೆ ಬರಲಿಲ್ಲ. ಇದನ್ನು ಜಾರಿಗೆ ತರಲೂ ಪ್ರಯತ್ನವೂ ಮಾಡಲಿಲ್ಲ ಆದರೆ ಶಿಕ್ಷಣದ ಪ್ರಭಾವದಿಂದ ಸಂಘಟನೆಗೆ ಪ್ರಯತ್ನ ನಡೆಯಿತು. ಭದ್ರಾವತಿಯಲ್ಲಿ ಕಾಲೇಜಿನ ಅಧ್ಯಾಪಾಕರಾದ ದಿವಂಗಂತ ಬಿ. ಕೃಷ್ಣಪ್ಪನವರು ಕೆಲವು ಸ್ನೇಹಿತರೊಂದಿಗೆ ಸೇರಿ ದಲಿತ ಸಂಘರ್ಷ ಸಮಿತಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದರಿಂದ ದಲಿತರಲ್ಲಿ ಜ್ಞಾನೋದಯವಾಯಿತು. ಸಾವಿರಾರು ಸಂಖ್ಯೆಯಲ್ಲಿ ದಲಿತರು ಮುಂದೆ ಬಂದು ಈ ಸಂಸ್ಥೆಗೆ ಶಕ್ತಿಕೊಟ್ಟರು.

ಡಿ.ಎಸ್.ಎಸ್ ಒಂದು ಸಾಮಾಜಿಕ ಕ್ರಾಂತಿಕಾರಿಣಿ ಗುಂಪಾಯಿತು. ಜನರಲ್ಲಿ ಉತ್ಸಾಹ ಕಂಡುಬಂದಿತು. ಭವಿಷ್ಯ ಉಜ್ವಲವಾಗುವುದು, ಅನ್ಯಾಯವು ಮಾಯವಾಗುವುದು. ಅಸ್ಪೃಶ್ಯತೆಯಿಂದ ಮುಕ್ತರಾಗಬಹುದೆಂಬ ಹೊಸ ಆಸೆ ಚಿಗುರಿತು. ಇದು ಸಾಧ್ಯವೆಂದು ಅನೇಕರು ಕನಸು ಕಾಣುತ್ತಿದ್ದರು. ಕ್ರಮೇಣ ದಲಿತ ಸಾಹಿತಿಗಳ ಪ್ರಭಾವ ಹೆಚ್ಚಾಯಿತು ಸಾಹಿತ್ಯ ಕ್ಷೇತ್ರದಲ್ಲಿ ಹೆಸರುಗಳಿಸಿದ ಕವಿಗಳು ಸಹಕಾರ ಕೊಟ್ಟರು. ದೇವನೂರ ಮಹಾದೇವ ಡಾ॥ ಸಿದ್ಧಲಿಂಗಯ್ಯನವರು ಈ ಹೋರಾಟದಲ್ಲಿ ಕಂಡುಬಂದರು. ಡಿ.ಎಸ್.ಎಸ್ ರಾಜ್ಯದ ಮೂಲೆ ಮೂಲೆಗಳಲ್ಲಿ ಜನಪ್ರಿಯಗೊಂಡು ಸವರ್ಣೀಯರಲ್ಲಿ ಆತಂಕಮೂಡಿಸಿತು. ಇಂತಹ ಹೋರಾಟಗಳಿಂದ ದಲಿತರಿಗೆ ನ್ಯಾಯ ದೊರಕಿಸಿಕೊಡಬೇಕಿದೆ. ದಲಿತರ ಉದ್ಧಾರಕ್ಕೆ ಸರ್ಕಾರದಿಂದ ಹೇರಳವಾದ ಹಣ ಖರ್ಚಾದರೂ ಬಹುತೇಕ ಹಣ ದಲಿತರ ಅಭಿವೃದ್ಧಿಗೆ ಸಿಗುತ್ತಿಲ್ಲ. ಕೆಲವರು ಶಾಸಕರು ಇದನ್ನು ಲೂಟಿ ಮಾಡುತ್ತಿದ್ದಾರೆ ಪರಿಶಿಷ್ಠ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮದವರು ಕೊಳ್ಳೆ ಹೊಡೆಯುತ್ತಿದ್ದಾರೆ ಎಂಬ ಕೂಗು ಕೇಳಿಬರುತ್ತಿದೆ. ಇದರಿಂದ ದಲಿತರಿಗೆ ನಷ್ಟವಾಗುತ್ತಿದೆ. ಸರ್ಕಾರವು ಈ ನಿಟ್ಟಿನಲ್ಲಿ ಗಮನಹರಿಸಿ ಹಣವನ್ನು ಸದುಪಯೋಗವಾಗುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಪಡಬೇಕಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಸಿದ್ಧಲಿಂಗಯ್ಯನವರ ಆತ್ಮಕಥೆಯ ವಿಚಾರಗಳನ್ನು ಗ್ರಹಿಸಿದ್ದೇನೆ. ಈ ದೃಷ್ಟಿಯಿಂದ ಇತರೆ ದಲಿತ ಸಮುದಾಯಗಳಿಗೆ ಸಂಬಂಧ ಪಟ್ಟ ಕೃತಿಗಳನ್ನು ಅಭ್ಯಸಿಸಿದಾಗ ಸ್ಪಷ್ಟ ಉದಾಹರಣೆಗಳ ಮೂಲಕ ದಲಿತ ಸಮುದಾಯವೊಂದು ಮೊದಮೊದಲು ಬಡತನ, ಹಸಿವು, ಆಕ್ರೋಶದಿಂದ ನರಳಿದ್ದು ಆನಂತರ 70-80 ರ ದಶಕದಲ್ಲಿ ತಮ್ಮದೇ ಆದ ಸೃಜನಶೀಲ ಆಲೋಚನೆ ಪ್ರತಿಭೆಗಳನ್ನು ಆದರಿಸಿ ಸಬಲೀಕರಣದ ಕಡೆ ಚಲಿಸುತ್ತಿರುವ ಹೊಸ ಸಮುದಾಯವಾಗಿ ರೂಪುಗೊಳ್ಳುತ್ತಿದೆ. ಈ ಎಲ್ಲಾ ಹಂತಗಳಲ್ಲೂ ಸಿದ್ಧಲಿಂಗಯ್ಯನವರ ಆತ್ಮಕಥನಗಳನ್ನು ಅನ್ವಯಿಕವಾಗಿ ಬಳಸಿಕೊಳ್ಳಬಹುದಾಗಿದೆ.

ಹೀಗೆ ಹಿರಿಯರ ಮುಗ್ಧತೆ ಅಸಹಾಯಕತೆ, ಪ್ರಾಣಿಸಾದೃಶ್ಯವಾಗಿ ದಲಿತ ಜನರನ್ನೇ ಬಳಸಿಕೊಳ್ಳುತ್ತಿದ್ದ ರೀತಿ, ದೊಡ್ಡಪ್ಪನ ರಾಜಕಾರಣ, ಬಾಲ್ಯದ ಬಡತನ, ತಾತನ ನೆರವು, ತಂದೆ ಮಗನಿಗೆ ಶಿಕ್ಷಣ ಕಲಿಸಲೇಬೇಕೆಂಬ ಇದ್ದಂತಹ ಬದ್ಧತೆ, ಅಲ್ಲಿದ್ದ ತೊಡಕುಗಳು – ಈ ನಡುವೆ ಸಿದ್ಧಲಿಂಗಯ್ಯನವರು ಪರಿಶ್ರಮದಿಂದ ಬದುಕನ್ನು ಕಟ್ಟಿಕೊಂಡ ರೀತಿ ಇತ್ಯಾದಿ ಸಂಗತಿಗಳನ್ನು ಈ ಅಧ್ಯಾಯದಲ್ಲಿ ವಿವರಿಸಿದ್ದೇನೆ. ದಲಿತ ಜಗತ್ತು ಬದಲಾದ ರೀತಿಗೆ ಊರುಕೇರಿ ಆತ್ಮಕಥನ ಒಂದು ದೊಡ್ಡ ಉದಾಹರಣೆಯಂತಿದೆ. ಇದಕ್ಕೆ ಆಸರೆಯಾಗಿ ನಿಂತದ್ದು ಸರ್ಕಾರಿ ಸೌಲಭ್ಯ ಹಾಗೂ ದಲಿತ ಪರ ಹೋರಾಟಗಳು ಎಂಬುದು ಸತ್ಯ. ಸಿದ್ಧಲಿಂಗಯ್ಯನವರು ಊರುಕೇರಿ ಆತ್ಮಕಥನದಲ್ಲಿ ತಿಳಿಸುವ ಎಲ್ಲಾ ವಿವರಗಳು ಒಟ್ಟು ದಲಿತ ಜಗತ್ತು ಸಾಗಿಬರುತ್ತಿರುವ ದಾರಿಯನ್ನು ಸ್ಪಷ್ಟಪಡಿಸುತ್ತದೆ ಎಂಬುದನ್ನು ಇಲ್ಲಿ ಅಧ್ಯಯನದ ಮುಖೇನ ಗ್ರಹಿಸಿದ್ದೇನೆ.

ಕೊನೆ ಟಿಪ್ಪಣಿ

1. ಪ್ರೊ. ಡಾ. ಮುಮ್ತಾಜ್ ಅಲಿಖಾನ್ : ದಲಿತರು ಅಂದು ಮತ್ತು ಇಂದು, ಸಪ್ನ ಎಂಟರ್‌ಪ್ರೈಸಸ್, ಬೆಂಗಳೂರು, 2013 ಪುಟ 03
2. ಅದೇ ಪುಸ್ತಕ : ಪುಟ 03
3. ನಾ.ದಿವಾಕರ : ದಲಿತರ ವಿಮೋಚನೆಯ ಆದಿ ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ, ಬೆಂಗಳೂರು 2011. ಪುಟ 46.
4. ಅದೇ ಪುಸ್ತಕ : ಪುಟ 47
5. ಪ್ರೊ. ಡಾ. ಮುಮ್ತಾಜ್ ಅಲಿಖಾನ್ : ದಲಿತರು ಅಂದು ಮತ್ತು ಇಂದು, ಸಪ್ನ ಎಂಟರ್‌ಪ್ರೈಸಸ್, ಬೆಂಗಳೂರು, 2013 ಪುಟ 11
6. ಅದೇ ಪುಸ್ತಕ : ಪುಟ 12
7. ಅದೇ ಪುಸ್ತಕ : ಪುಟ 16
8. ನಾ.ದಿವಾಕರ : ದಲಿತರ ವಿಮೋಚನೆಯ ಆದಿ ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ, ಬೆಂಗಳೂರು 2011. ಪುಟ 57.
9. ಅದೇ ಪುಸ್ತಕ : ಪುಟ 59
10. ಅದೇ ಪುಸ್ತಕ : ಪುಟ 61
11. ಪ್ರೊ. ಡಾ. ಮುಮ್ತಾಜ್ ಅಲಿಖಾನ್ : ದಲಿತರು ಅಂದು ಮತ್ತು ಇಂದು, ಸಪ್ನ ಎಂಟರ್‌ಪ್ರೈಸಸ್, ಬೆಂಗಳೂರು, 2013 ಪುಟ 70
12. ಅದೇ ಪುಸ್ತಕ : ಪುಟ 71
13. ಅದೇ ಪುಸ್ತಕ : ಪುಟ 71
14. ಅದೇ ಪುಸ್ತಕ : ಪುಟ 72

ಅಧ್ಯಾಯ – ೫

ಸಮಾರೋಪ

ಡಾ. ಸಿದ್ಧಲಿಂಗಯ್ಯನವರು 1954ರಲ್ಲಿ ಮಾಗಡಿ ತಾಲ್ಲೂಕಿನ ಮಂಚನಬಲೆಯಲ್ಲಿ ಜನಿಸಿದ್ದು, ಅವರಿಗೀಗ 60 ವರ್ಷಗಳು ತುಂಬಿವೆ. ಶ್ರೀಯುತರು ಬದುಕಿನುದ್ದಕ್ಕೂ ಇಟ್ಟಂತಹ ಹೆಜ್ಜೆ, ಮಾಡಿದ ಸಾಧನೆ ಅಪೂರ್ವವಾದವುಗಳಾಗಿವೆ. ಇವರು ಸಾಹಿತಿಯಾಗಿ, ದಲಿತ ಪರ ಹೋರಾಟಗಾರರಾಗಿದ್ದು ಆಗಿನ ಅವರ ಅಭಿವ್ಯಕ್ತಿ, ಅಂತರಂಗದ ಆಲೋಚನೆ ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿದ್ದು ಒಟ್ಟಾರೆ ಅವರ ಬರವಣಿಗೆಯ ಸ್ವರೂಪ, ಭಾಷಣದ ವೈಖರಿ ದಲಿತರ ಬದುಕಿಗೆ ಹೊಸ ಚೈತನ್ಯ ತುಂಬಿತು. ಜೊತೆಗೆ ವಿಶಿಷ್ಟವಾದ ಸಾಹಿತ್ಯವೊಂದು ವ್ಯಕ್ತಿಯ ಆತ್ಮಕಥೆಗೆ ಹೇಗೆ ಮಹತ್ವ ತುಂಬಿತು ಎಂಬುದನ್ನು ಈ ಮೇಲಿನ ನನ್ನ ನಿಬಂಧದ ಎಲ್ಲಾ ಅಧ್ಯಾಯಗಳನ್ನು ಅಭ್ಯಸಿಸಿದಾಗ ಮಹತ್ವಪೂರ್ಣವಾದ ಅಂಶಗಳನ್ನು ಗ್ರಹಿಸಬಹುದು.

ಈ ಮೇಲಿನ ಎಲ್ಲಾ ಅಧ್ಯಾಯಗಳ ಹಿನ್ನೆಲೆಯನ್ನು ಗಮನಿಸಿದಂತೆ ಡಾ. ಸಿದ್ಧಲಿಂಗಯ್ಯರವರು ಬಾಲ್ಯದ ದಿನಗಳಲ್ಲಿಯೇ ಬಡತನ, ಅನಕ್ಷರತೆ ಬಗ್ಗೆ ಚಿಂತಿಸುತ್ತಾ ತಾವು ದಾರಿದ್ರ್ಯವನ್ನು, ಅವಮಾನವನ್ನು ಅನುಭವಿಸುತ್ತಲೇ ಬೆಳೆದು ಬಂದವರು. ವಿದ್ಯಾರ್ಥಿ ದಿಸೆಯಲ್ಲಿಯೇ ಸಾರ್ವಜನಿಕರ ಸಭೆ, ಸಮಾರಂಭಗಳಲ್ಲಿ ಭಾಷಣ ನೀಡುವ ಮೂಲಕ ಪ್ರದರ್ಶನ ನೀಡುತ್ತಿದ್ದರು. ಕವಿತೆಗಳನ್ನು ಬರೆಯುವ ಹವ್ಯಾಸವಿತ್ತು. ಅಂಬೇಡ್ಕರ್ ಬಗ್ಗೆ ಅಪಾರ ಗೌರವ ಹೊಂದಿದ್ದು ಅವರ ಪುಸ್ತಕಗಳನ್ನು ಆಸಕ್ತಿಯಿಂದ ಓದುತ್ತಿದ್ದರು. ಕಾರಣ ಅಂಬೇಡ್ಕರ್ ಕೂಡ ದಲಿತ ಸಮುದಾಯದವರಾಗಿದ್ದು ಒಂದೇ ರೀತಿಯ ಹಿಂಸೆ, ಅವಮಾನಕ್ಕೆ ಒಳಗಾಗಿದ್ದರು. ನಂತರ ಅಂಬೇಡ್ಕರ್ ಸ್ವಪ್ರತಿಭೆಯಿಂದ ಬೆಂದು ದೊಡ್ಡ ವ್ಯಕ್ತಿಯಾಗಿದ್ದು, ಜನರ ಪ್ರಶಂಸೆ ಗಳಿಸಿದ್ದು ಡಾ. ಸಿದ್ದಲಿಂಗಯ್ಯನವರ ಜೀವನದ ಮೇಲೆ ಬಹಳ ಪ್ರಭಾವ ಬೀರಿತು.

ಬಾಲ್ಯದಲ್ಲಿ ಮಾಗಡಿ ತಾಲ್ಲೂಕಿನ ದಲಿತರ ಕಾಲೋನಿಯಲ್ಲಿ ಬೆಳೆದು ಪ್ರಾಥಮಿಕ ಶಾಲೆಯಲ್ಲಿ 2ನೇ ತರಗತಿ ಓದಿದ ನಂತರ ಬೆಂಗಳೂರಿಗೆ ಇಡೀ ಕುಟುಂಬದವರು ಬಂದರು. ಶ್ರೀರಾಮಪುರದಲ್ಲಿ ವಾಸವಿದ್ದು ಸ್ಮಶಾನದ ಹತ್ತಿರವಿದ್ದ ಸರ್ಕಾರಿ ಶಾಲೆಯಲ್ಲಿ 3–4ನೇ ತರಗತಿ ಮುಗಿಸಿ ಅಲ್ಲಿಯೇ ಮಾಧ್ಯಮಿಕ ತರಗತಿಗಳನ್ನು ಓದಿದರು. ನಂತರ ಪ್ರೌಢಶಾಲೆಯನ್ನೇ ಮಲ್ಲೇಶ್ವರಂ ಸರ್ಕಾರಿ ಶಾಲೆಯಲ್ಲಿ ಮುಂದುವರೆಸಿ, ಸರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ ಪಿ.ಯು.ಸಿ. ಪದವಿ ತರಗತಿಗಳನ್ನು ಮುಂದುವರೆಸಿದರು. ಬಾಲ್ಯದಿಂದ ಕಾಲೇಜಿನವರೆಗೆ ಓದುತ್ತಿದ್ದರೂ ಅವರ ಬಡತನ ಹಾಗೆಯೇ ಇತ್ತು. ಇಂತಹ ಸಂದರ್ಭದಲ್ಲೂ ಧೃತಿಗೆಡದೆ ಬೆಂಗಳೂರಿನ ದಲಿತರ ಹಾಸ್ಟೆಲ್‌ನಲ್ಲಿ ಸೇರಿಕೊಂಡು ಸರ್ಕಾರಿ ಗ್ರಂಥಾಲಯಗಳಿಗೆ ಹೋಗಿ ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಹಾಗಾಗಿ ಸಹಜವಾಗಿಯೇ ಮಾರ್ಕ್ಸವಾದ, ಅಂಬೇಡ್ಕರ್‌ವಾದಗಳಿಗೆ ಮಾರುಹೋಗಿದ್ದರು.

ಇಂದು ದಲಿತ ಸಮುದಾಯ ಚೇತರಿಸಿಕೊಳ್ಳುತ್ತಿದೆಯೆಂದರೆ ನಾಡೋಜ ಡಾ. ಸಿದ್ಧಲಿಂಗಯ್ಯನವರ ಸಾಹಿತ್ಯ ಹಾಗೂ ಪ್ರತಿಭೆಯ ಪಾತ್ರ ಮಹತ್ತರವಾದದ್ದು. ಇವರು ಹಂತ ಹಂತವಾಗಿ ಬೆಳೆದು ಪ್ರಸಿದ್ಧ ದಲಿತ ಕವಿ ಎನಿಸಿಕೊಂಡ ಮೇಲಂತೂ ಹಲವಾರು ಸಂಸ್ಥೆಗಳಿಗೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಬೋಧನೆಯಲ್ಲಿ 30 ವರ್ಷಗಳ ಅನುಭವ ಪಡೆದು ವಿದ್ಯಾರ್ಥಿಗಳಿಗೆ ಆದರ್ಶ ಶಿಕ್ಷಕರಾಗಿದ್ದಾರೆ. ಅಷ್ಟೇ ಅಲ್ಲದೆ ಕರ್ನಾಟಕ ಸರ್ಕಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿ (2006–08) 2 ವರ್ಷಗಳ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ವಿಧಾನ ಪರಿಷತ್ತು, ವಿಷಯ ಸಮಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 1997–98 ರವರೆಗೆ ಅಧ್ಯಕ್ಷರಾಗಿದ್ದರು. ಇವರಿಗೆ ಸಂದ ಪ್ರಶಸ್ತಿಗಳು ಹಲವಾರು. ರಾಜ್ಯೋತ್ಸವ ಪ್ರಶಸ್ತಿ, ಜಾನಪದ ತಜ್ಞ, ಡಾ. ಅಂಬೇಡ್ಕರ್ ಪ್ರಶಸ್ತಿ, ಪ್ರತಿಷ್ಠಿತ ನಾಡೋಜ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ದೊರೆತಿವೆ. ಊರುಕೇರಿ 1, 2, ಆತ್ಮಕಥನದ ಜೊತೆಗೆ ಉರಿಕಂಡಾಯ, ಜನಸಂಸ್ಕೃತಿ, ನನನ ಜನಗಳು ಮತ್ತು ಇತರ ಕವಿತೆಗಳು, ಸದನದಲ್ಲಿ ಸಿದ್ಧಲಿಂಗಯ್ಯ, ಗ್ರಾಮದೇವತೆಗಳು (ಸಂಶೋಧನಾ ಪ್ರಬಂಧ), ಸಮಕಾಲೀನ ಕನ್ನಡ ಕವಿತೆಗಳು, ಮೆರವಣಿಗೆ, ಆಯ್ದ ಕವಿತೆಗಳು, ಹಕ್ಕಿನೋಟ, ಏಕಲವ್ಯ ನಾಟಕ, ಕಪ್ಪು ಕಾಡಿನ ಹಾಡು, ಅವತಾರಗಳು (ಪ್ರಬಂಧ), ಹೊಲೆಮಾದಿಗರ ಹಾಡು (ಕವನ ಸಂಕಲನ) ಇನ್ನು ಮುಂತಾದ ಕೃತಿಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ

ಅಷ್ಟೇ ಅಲ್ಲದೆ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡಿ ಅವರ ಭವಿಷ್ಯದ ದಾರಿಗೆ ಬೆಳಕಾಗಿದ್ದಾರೆ. ಮುಂದುವರೆದು ಹಲವಾರು ರಾಷ್ಟ್ರೀಯ ಸಮ್ಮೇಳನದಲ್ಲೂ ಅಧ್ಯಕ್ಷರಾಗಿ ಭಾಗವಹಿಸಿದ್ದಾರೆ. ಅಂತರಾಷ್ಟ್ರೀಯ ಸಮ್ಮೇಳನಗಳು ಹಾಗೂ ವಿಚಾರ ಸಂಕೀರಣಗಳಲ್ಲೂ ಅಧ್ಯಕ್ಷರಾಗಿ ಪಾಲ್ಗೊಂಡು ನೈತಿಕ ಮೌಲ್ಯ, ಮಾನವೀಯ ಮೌಲ್ಯಗಳನ್ನು ಜನರಿಗೆ ಭಾಷಣದ ಮೂಲಕ ಸಾರಿದ್ದಾರೆ.

ಒಟ್ಟಾರೆಯಾಗಿ ಡಾ. ಸಿದ್ಧಲಿಂಗಯ್ಯನವರು ಒಬ್ಬ ವ್ಯಕ್ತಿಯಲ್ಲ. ಇಡೀ ನೊಂದ ಸಮುದಾಯದ ವಿಶ್ವವಿದ್ಯಾಲಯವಿದ್ದಂತೆ. ಇಡೀ ಸಮುದಾಯದ ನೋವು ಇವರ ಮೂಲಕ ಆತ್ಮಕಥನದಲ್ಲಿ ಅನಾವರಣಗೊಂಡಿದೆ. ಇವರಿಂದ ಪ್ರೇರಣೆ ಪಡೆದ ದಲಿತ ಸಮುದಾಯ ಸಶಕ್ತಿಗೊಳ್ಳುತ್ತದೆ. ಹಲವಾರು ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಿಂದ ಕತ್ತಲಿನಿಂದ ಬೆಳಕಿಗೆ ಬಂದಿದ್ದಾರೆ. ಇಂತಹ ಸಾಧನೆಯ ಹರಿಕಾರರಾಗಿರುವ ಅಂಬೇಡ್ಕರ್‌ರವರು ಹಲವಾರು ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಇವರನ್ನು ನಂಬಿ ಬಂದ ಕಾರ್ಯಕರ್ತರ ಕೈಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿಸಿ, ಅವರಲ್ಲಿ ಚೈತನ್ಯ ತುಂಬಿ ಮುಂದಿನ ಪೀಳಿಗೆಗೆ ಶ್ರೀಯುತರು ಆದರ್ಶಪ್ರಾಯರಾಗಿದ್ದಾರೆ.

ಹೀಗೆ ಡಾ. ಸಿದ್ಧಲಿಂಗಯ್ಯನವರ ಆತ್ಮಕಥನ ಇಡೀ ದಲಿತ ಸಮುದಾಯದ ಕಥನವಾಗಿ ಮೂಡಿಬಂದಿದ್ದು, ಬಡವರಿಗೆ, ದಲಿತರಿಗೆ ನಗುವಿನ ಶಕ್ತಿಯಂತೆ, ಸಹೃದಯರಿಗೆ ಆದರ್ಶದಂತೆ ಕಂಡು ಬಂದಿರುವುದು ಶ್ರೀಯುತರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತೆ ಎನ್ನುವ ಅಂಶವನ್ನು ಮನಗಾಣಬಹುದು.

"ಡಾ. ಸಿದ್ಧಲಿಂಗಯ್ಯನವರ ಆತ್ಮಕಥನದಲ್ಲಿ ಅಸ್ಮಿತೆಯ ಹುಡುಕಾಟ" (ದಲಿತ ಆತ್ಮಕಥನಗಳ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯನ್ನು ನಾನು ಸಂಶೋಧನೆಗೆ ಬಳಸಿಕೊಂಡಿದ್ದು, ಇದರ ಉದ್ದೇಶ, ವ್ಯಾಪ್ತಿಯ ವಿವರಣೆಗಳನ್ನು ನನ್ನ ನಿಬಂಧದಲ್ಲಿ ನೀಡಿರುತ್ತೇನೆ.

ಮರಾಠಿ ಮೂಲದಿಂದ ಬಂದಂತಹ ಕನ್ನಡಕ್ಕೆ ಅನುವಾದಗೊಂಡಿರುವ ದಲಿತ ಆತ್ಮಕಥೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಸಿದ್ಧಲಿಂಗಯ್ಯನವರ ಆತ್ಮಕಥೆಯು ಇವುಗಳ ದಾಟಿಯಲ್ಲೇ ಇರುವುದನ್ನು ಗುರ್ತಿಸಿದ್ದೇನೆ. ದಲಿತ ಸಮುದಾಯದ ನೆಲೆ, ಅದು ಬದಲಾವಣೆಗೊಳ್ಳುತ್ತಿರುವ ರೀತಿ ಒಂದೇ ಬಗೆಯಾದುದು ಎಂಬುದನ್ನು ಇಲ್ಲಿ ವಿವರಿಸಿದ್ದೇನೆ. ಇಡೀ ಭಾರತದಾದ್ಯಂತ ಇರುವ ದಲಿತರ ನೋವು, ತಲ್ಲಣಗಳ ಸ್ವರೂಪ ಒಂದೇ ಮತ್ತು ಅದಕ್ಕೆ ಕಾರಣವಾದ ಸಾಮಾಜಿಕ ಪರಿಸ್ಥಿತಿಯೂ ಒಂದೇ ಎಂಬುದನ್ನು ವಿವರಿಸುವ ಪ್ರಯತ್ನ ಮಾಡಿದ್ದೇನೆ. ಅಂಬೇಡ್ಕರ್, ಜ್ಯೋತಿಬಾಪುಲೆ ಇತರರ ಪ್ರೇರಣೆಗಳಿಂದ ಮತ್ತು ಸ್ವತಂತ್ರ ಭಾರತ ಒದಗಿಸಿಕೊಟ್ಟ ಸೌಲಭ್ಯಗಳಿಂದ ದಲಿತ ಸಮುದಾಯ ಅಡೆತಡೆಗಳ ನಡುವೆಯೂ ಹೇಗೆ ಹೊಸ ಬದುಕನ್ನು ಕಟ್ಟಿಕೊಳ್ಳುತ್ತಲಿದೆ ಎಂಬುದನ್ನು ವಿವರಿಸಿ ದಲಿತರ ಬದುಕಿನ ಸಬಲೀಕರಣದ ಕಡೆ ಸಾಗುತ್ತಿರುವ ಚಿತ್ರಣವನ್ನು ಕೊಟ್ಟಿದ್ದೇನೆ. ಇದಕ್ಕೆ ಉದಾಹರಣೆಯಾಗಿ ಸಿದ್ಧಲಿಂಗಯ್ಯನವರ ಬದುಕು ಸಾಗಿಬಂದ ನೆಲೆಗಳನ್ನೇ ನಿದರ್ಶನವಾಗಿ ಬಳಸಿಕೊಂಡಿದ್ದೇನೆ.

ಈ ಅತಂತ್ರ ಸಮುದಾಯದ ಬದುಕೇ ವೈಯಕ್ತಿಕ ಸಂಕಟ ಮತ್ತು ಸಾಮಾಜಿಕ ಅಪಮಾನಗಳಿಂದ ಕೂಡಿರುವುದು. ಇಲ್ಲಿನ ನಂಬಿಕೆಗಳು, ಸಂಪ್ರದಾಯಗಳು ಅದಕ್ಕೆ ಕಾರಣವಾದ ವ್ಯವಸ್ಥೆ ಇವೆಲ್ಲವೂ ಆ ಸಮುದಾಯದ ಅಸ್ಮಿತೆಗಳು. ಶ್ರೀಯುತರ ಆತ್ಮಕಥನದಲ್ಲಿ ಅವರೇ ವಿವರಿಸಿರುವ ಇಂತಹ ಕೆಲವು ಸಂದರ್ಭಗಳನ್ನು ಅಲ್ಲಿನ ಅಸ್ಮಿತೆಗಳೆಂದು ಗುರ್ತಿಸಿ ವಿವರಿಸಿದ್ದೇನೆ. ಹಾಗೆಯೇ ಈ ನೆಲೆಯಿಂದ ಹೊರಟ ಇವರು ಶಿಕ್ಷಣ ಪಡೆದ ರೀತಿ ಇದಕ್ಕೆ ಕಾರಣವಾದ ಕುಟುಂಬದ ಒತ್ತಾಸೆ, ಬದ್ಧತೆ ಇವುಗಳೂ ಕೂಡ ಈ ಸಮುದಾಯದ ಇಂದಿನ ಪೀಳಿಗೆಗೆ ಹೇಗೆ ಬದುಕನ್ನು ಕಟ್ಟಿಕೊಳ್ಳಬಹುದು ಎಂಬುದಕ್ಕೆ ಗುರುತುಗಳಾಗುತ್ತವೆ. ಸಂಘರ್ಷದ ಮಧ್ಯೆಯೂ ಸಮಾಜದ ಎಲ್ಲಾ ಗೌರವಗಳನ್ನು ಪಡೆಯಬಹುದಾದ ಅಸಾಮಾನ್ಯ ನೆಲೆಗೆ ದಲಿತನೊಬ್ಬ ಹೇಗೆ ತಲುಪಬಹುದು ಎಂಬುದನ್ನು ಈ ಆತ್ಮಕಥನ ಸ್ಪಷ್ಟಪಡಿಸುತ್ತದೆ. ಈ ದಾರಿಯೇ ಇಂದಿನ ವರ್ತಮಾನಕ್ಕೆ ಒಂದು ಬಹುದೊಡ್ಡ ಅಸ್ಮಿತೆಯಾಗುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ನಾನು ಅವರ ಆತ್ಮಕಥನವನ್ನು ಅಭ್ಯಸಿಸಿ ಇದಕ್ಕೆ ಪೂರಕವಾಗಿ ಒಟ್ಟು ದಲಿತ ಲೋಕದ ಚಿತ್ರಣವನ್ನು ಸಂಕ್ಷಿಪ್ತವಾಗಿ ನೀಡಿ ನನ್ನ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿರುತ್ತೇನೆ.

ಅಧ್ಯಾಯ – ೬

ಅನುಬಂಧ

❖ ಪ್ರಕಟಿತ ಕೃತಿಗಳು

1.	2012,	:	ಊರುಕೇರಿ ಭಾಗ 1, 12ನೇ ಮುದ್ರಣ, ಅಂಕಿತ ಪುಸ್ತಕ ಪ್ರಕಾಶನ.
2.	2009	:	ಉರಿಕಂಡಾಯ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
3.	2007	:	ಜನಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4.	2006	:	ಊರುಕೇರಿ (ಭಾಗ–2), ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.
5.	2005	:	ನನ್ನ ಜನಗಳು ಮತ್ತು ಇತರ ಕವಿತೆಗಳು (ಆಯ್ದ ಕವನಗಳು), ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು.
6.	2004	:	ಸದನದಲ್ಲಿ ಸಿದ್ಧಲಿಂಗಯ್ಯ (ಭಾಗ–2), ಸಂಪಾದಕರು ದೊಡ್ಡಹುಲ್ಲೂರು ರುಕ್ಕೋಜಿರಾವ್, ಕಾಮಧೇನು ಪ್ರಕಾಶನ, ಬೆಂಗಳೂರು.
7.	2003	:	ಸಮಕಾಲೀನ ಕನ್ನಡ ಕವಿತೆ ಭಾಗ–3, ಭಾಗ–4, ಸಂಪಾದನೆ : ಇತರರೊಂದಿಗೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
8.	2000	:	ಮೆರವಣಿಗೆ (ಆಯ್ದ ಕವನಗಳು), ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
9.	1997	:	ಊರುಕೇರಿ (ಆತ್ಮಕಥನ), ಅಕ್ಷರ ಪ್ರಕಾಶನ, ಸಾಗರ.
10.	1997	:	ಗ್ರಾಮದೇವತೆಗಳು (ಸಂಶೋಧನಾ ನಿಬಂಧ), ಮೂಲಭಾರತಿ ಪ್ರಕಾಶನ, ಬೆಂಗಳೂರು.
11.	1996	:	ಸದನದಲ್ಲಿ ಸಿದ್ಧಲಿಂಗಯ್ಯ (ಭಾಗ–1), ಸಂಪಾದಕರು ದೊಡ್ಡಹುಲ್ಲೂರು ರುಕ್ಕೋಜಿರಾವ್, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
12.	1997	:	ಆಯ್ದ ಕವಿತೆಗಳು (ಆಯ್ದ ಕವನಗಳು), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

13. 1991 : ಹಕ್ಕಿನೋಟ (ಲೇಖನಗಳ ಸಂಕಲನ), ಕಲ್ಯಾಣಿ ಪ್ರಕಾಶನ, ಬೆಂಗಳೂರು.

14. 1986 : ಏಕಲವ್ಯ (ನಾಟಕ), ಅಜಂತ ಪ್ರಕಾಶನ, ಬೆಂಗಳೂರು.

15. 1992 : ಕಪ್ಪು ಕಾಡಿನ ಹಾಡು (ಕವನ ಸಂಕಲನ), ಅಜಂತ ಪ್ರಕಾಶನ, ಬೆಂಗಳೂರು.

16. 1981 : ಅವತಾರಗಳು (ಪ್ರಬಂಧಗಳು), ಪ್ರಿಂಟರ್ಸ್ ಪ್ರಕಾಶನ, ಬೆಂಗಳೂರು.

17. 1980 : ಪಂಚಮ ಮತ್ತು ನೆಲಸಮ (ನಾಟಕಗಳು), ಪಂಚಮ ಪ್ರಕಾಶನ, ಬೆಂಗಳೂರು.

18. 1979 : ಸಾವಿರಾರು ನದಿಗಳು (ಕವನ ಸಂಕಲನ), ಸಮುದಾಯ ಪ್ರಕಾಶನ, ಬೆಂಗಳೂರು.

19. 1975 : ಹೊಲೆ ಮಾದಿಗರ ಹಾಡು (ಕವನ ಸಂಕಲನ), ಮುಂಗಾರು ಪ್ರಕಾಶನ, ಬೆಂಗಳೂರು.

ಅನ್ಯಭಾಷೆಗಳಿಗೆ ಅನುವಾದಗೊಂಡ ಕೃತಿಗಳು

1. ಊರುಕೇರಿ (ಆತ್ಮಕಥೆ)–1998ರಲ್ಲಿ ತಮಿಳು ಭಾಷೆಗೆ, 2003ರಲ್ಲಿ ಇಂಗ್ಲೀಷ್ ಭಾಷೆಗೆ ಹಾಗೂ 2011ರಲ್ಲಿ ಮಲೆಯಾಳಂ ಭಾಷೆಗೆ ಅನುವಾದಗೊಂಡು ಪ್ರಕಟಿಸಲಾಗಿದೆ. ಇಂಗ್ಲೀಷ್ ಅನುವಾದವನ್ನು ದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ.
2. ಕವಿತೆಗಳು : ಇಂಗ್ಲೀಷ್, ಹಿಂದಿ, ತಮಿಳು, ಬೆಂಗಾಲಿ, ಮಲಯಾಳಂ, ಉರ್ದು ಮತ್ತು ತೆಲುಗು ಭಾಷೆಗಳಿಗೆ ಅನುವಾದಗೊಂಡು ಪತ್ರಿಕೆಗಳು ಮತ್ತು ಕವಿತಾ ಸಂಗ್ರಹಗಳಲ್ಲಿ ಪ್ರಕಟವಾಗಿವೆ.

ಬದುಕಿನ ಘಟ್ಟಗಳು

ಬೋಧನಾನುಭವ ಮತ್ತು ನಿರ್ವಹಿಸಿದ ಜವಾಬ್ದಾರಿಗಳು

	▪	ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ 30 ವರ್ಷಗಳ ಬೋಧನಾನುಭವ.
ಜೂನ್ 2001 ರಿಂದ ಜನವರಿ 2006	:	ನಿರ್ದೇಶಕರಾಗಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಣೆ.
ಏಪ್ರಿಲ್ 2006 ರಿಂದ ಜೂನ್ 2006	:	ಪ್ರಭಾರ ನಿರ್ದೇಶಕರಾಗಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಣೆ.
2001–03	:	ಕಲಾನಿಕಾಯದ ಡೀನ್, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಣೆ.
1992 ರಿಂದ	:	ಪ್ರಾಧ್ಯಾಪಕರಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಣೆ.
1981–1992	:	ಕನ್ನಡ ಉಪನ್ಯಾಸಕರಾಗಿ ಕನ್ನಡ ಅಧ್ಯಯನ ಕೇಂದ್ರ, ಸ್ನಾತಕೋತ್ತರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಣೆ.
1976–1981	:	ಸಂಶೋಧನ ಸಹಾಯಕರಾಗಿ ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಣೆ.
2006–2008	:	ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ.
1997–98	:	ಅಧ್ಯಕ್ಷರು, ವಿಷಯ ಸಮಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ವಿಧಾನ ಪರಿಷತ್ತು.

ಅ) ಪಿಎಚ್.ಡಿ. ಪದವಿ ಸಂಶೋಧನಾ ಮಾರ್ಗದರ್ಶನ

1.	2008	:	ಪ್ರವಾಸ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ
2.	2007	:	ಬಸವಣ್ಣನವರ ಸಾಮಾಜಿಕ ಆರ್ಥಿಕ ಚಿಂತನೆಗಳು
3.	2006	:	ಬುಡಕಟ್ಟು ಜನಾಂಗಗಳಲ್ಲಿ ಜನಪದ ವೈದ್ಯ
4.	2003	:	ಹರಪನಹಳ್ಳಿ ತಾಲೂಕಿನ ಗ್ರಾಮದೇವತೆಗಳು

5. 2001 : ಜನಪದ ಕಥನ ಗೀತೆಗಳಲ್ಲಿ ಮಹಿಳೆ : ಒಂದು ಅಧ್ಯಯನ

6. 2000 : ಬಸವರಾಜ ಕಟ್ಟೀಮನಿಯವರ ಕೃತಿಗಳು : ಒಂದು ಅಧ್ಯಯನ

7. 1999 : ಜನಪದ ಸಾಹಿತ್ಯದಲ್ಲಿ ಕುಟುಂಬ ಮತ್ತು ದಾಂಪತ್ಯ ಜೀವನ

8. 1998 : ಜನಪದ ಸಾಹಿತ್ಯದಲ್ಲಿ ಪವಾಡಗಳು : ಒಂದು ಅಧ್ಯಯನ

ಆ) ಎಂಫಿಲ್. ಪದವಿ ಸಂಶೋಧನಾ ಮಾರ್ಗದರ್ಶನ

1. 1999 : ಜನಪದ ವೈದ್ಯ : ಒಂದು ಅಧ್ಯಯನ

2. 1977 : ಕನ್ನಡ ಜಾನಪದಕ್ಕೆ ಜೀ.ಶಂ. ಪರಮಶಿವಯ್ಯನವರ ಕೊಡುಗೆ

3. 1997 : ಶಿರಾ ತಾಲೂಕು ಭೂತಗಳು : ಒಂದು ಅಧ್ಯಯನ

4. 1996 : ಧರ್ಮಾಮೃತ ಸಮಯ ಪರೀಕ್ಷೆ ಮತ್ತು ಧರ್ಮ ಪರೀಕ್ಷೆ : ಒಂದು ಅಧ್ಯಯನ

5. 1994 : ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ

6. 1994 : ಸಾಸಲು : ಜಾನಪದೀಯ ಅಧ್ಯಯನ

7. 1993 : ಅನುಪಮ ನಿರಂಜನರ ಕಾದಂಬರಿಗಳು : ಒಂದು ಅಧ್ಯಯನ

8. 1991 : ಮಾದೇಶ್ವರ ಮಹಾಕಾವ್ಯ : ಒಂದು ಅಧ್ಯಯನ

ಇ. ರಾಷ್ಟ್ರೀಯ ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳು

1. 23 ಮತ್ತು 24ನೇ ಮೇ 2007 : ಪಣಜಿಯಲ್ಲಿ ನಡೆದ ಭಾರತೀಯ ಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆ, ಗೋವಾ.

2. ನವೆಂಬರ್ 2004 : ಹಂಪಿ ಉತ್ಸವದಲ್ಲಿ ಕವಿ ಕಾವ್ಯ ಗಾಯನ ಗೋಷ್ಠಿ ಅಧ್ಯಕ್ಷತೆ, ಕರ್ನಾಟಕ ಸರ್ಕಾರ.

3. ಅಕ್ಟೋಬರ್ 2003 : ದಸರಾ ಕವಿಗೋಷ್ಠಿಯಲ್ಲಿ ಅಧ್ಯಕ್ಷತೆ, ಮೈಸೂರು.

4. ಫೆಬ್ರವರಿ 9, 2003 : 6ನೇ ಗೋರೆಗಾಂವ್ ವಿಚಾರ ಭಾರತಿ ಸಮ್ಮೇಳನದ ಅಧ್ಯಕ್ಷತೆ, ಮುಂಬೈ.

5. ಜನವರಿ 24 ರಿಂದ 26, 2002 : 68ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಭಾಷಣ, ಬಾಗಲಕೋಟೆ.

6. ನವೆಂಬರ್ 29–30, 2000 : 6ನೇ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಮಾಗಡಿ.

7. ನವೆಂಬರ್ 25 ಮತ್ತು 26, 2000 : ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ ಆಯೋಜಿಸಿದ್ದ ದಕ್ಷಿಣ ಪ್ರಾಂತೀಯ ಕವಿ ಸಮ್ಮೇಳನದಲ್ಲಿ ಕಾವ್ಯ ವಾಚನ, ತ್ರಿವೇಂಡ್ರಮ್, ಕೇರಳ.

8. ಏಪ್ರಿಲ್ 16 ರಿಂದ 18, 1994ರಂದು : ಬೀದರ್‌ನಲ್ಲಿ ನಡೆದ 16ನೇ ಕಲ್ಯಾಣ ನಾಡಿನ ಶರಣ ಸಮ್ಮೇಳನದ ಅಧ್ಯಕ್ಷತೆ.

9. ಡಿಸೆಂಬರ್ 28 ರಿಂದ 30 1993 : ನವದೆಹಲಿಯ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ನಡೆದ ಭಾರತೀಯ ಕಾವ್ಯೋತ್ಸವದಲ್ಲಿ ಭಾಗವಹಿಸಿ ಸಮಾರೋಪ ಭಾಷಣ.

10. ಡಿಸೆಂಬರ್ 30, 1991 ರಿಂದ ಜನವರಿ 4, 1992ರವರೆಗೆ ಹೈದ್ರಾಬಾದ್‌ನ ಎನ್.ಐ.ಆರ್.ಡಿ.ಯಲ್ಲಿ ನಡೆದ ಇಷ್ಯೂಸ್ ಇನ್ ರೂರಲ್ ಡೆವಲಪ್‌ಮೆಂಟ್ ಅಂಡ್ ಅಡ್ಮಿನಿಸ್ಟ್ರೇಷನ್ ತರಬೇತಿ ಶಿಬಿರದಲ್ಲಿ ಶಾಸಕರಾಗಿ ಭಾಗವಹಿಸುವಿಕೆ.

11. ಮಾರ್ಚ್ 11 ರಿಂದ 1986 : ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆದ ವಿಶ್ವ ಕವಿ ಸಮ್ಮೇಳನದಲ್ಲಿ ವೀಕ್ಷಕರಾಗಿ ಭಾಗವಹಿಸಿರುವಿಕೆ.

12. ಮಾರ್ಚ್ 28 ರಿಂದ 30 1987 : ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆದ ಕವಿಭಾರತಿ ಭಾರತೀಯ ಕಾವ್ಯೋತ್ಸವದಲ್ಲಿ ಭಾಗವಹಿಸಿರುವಿಕೆ.

ಈ. ಅಂತರಾಷ್ಟ್ರೀಯ ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳು

1. ವರ್ಲ್ಡ್ ಅಲಯನ್ಸ್ ಆಫ್ ರಿಫಾರ್ಮ್‌ಡ್ ಚರ್ಚ್ಸ್ ಆಯೋಜಿಸಿದ 'ಇಂಟರ್ ಫೈಥ್' ತಂಡದ ಸದಸ್ಯನಾಗಿ ಜುಲೈ 19 ರಿಂದ 27, 2002ರಲ್ಲಿ ಇಂಡೋನೇಷ್ಯಾಕ್ಕೆ ಭೇಟಿ.

2. ಚೈನ–ಭಾರತ ಸಾಂಸ್ಕೃತಿಕ ಸಂವಾದ ಕಾರ್ಯಕ್ರಮದಲ್ಲಿ ಮಾರ್ಚ್ 9 ರಿಂದ 18ರವರೆಗೆ–2001ರಲ್ಲಿ ಚೈನಾದ ಬೀಜಿಂಗ್‌ನಲ್ಲಿ ಭಾಗವಹಿಸಿರುವಿಕೆ.

3. ಥಾಯ್‌ಲ್ಯಾಂಡಿನ ಬ್ಯಾಂಕಾಕ್‌ನಲ್ಲಿ ಅಕ್ಟೋಬರ್ 4 ರಿಂದ 7–200ರವರೆಗೆ ನಡೆದ ಅಲಯನ್ಸ್ ಫಾರ್ ಎ ರೆಸ್ಪಾನ್ಸಿಬಲ್ ಪ್ಲೂರಲ್ ಅಂಡ್ ಯುನೈಟೆಡ್ ವರ್ಲ್ಡ್ ಪ್ರಿಪರೇಟರಿ ವರ್ಕ್‌ಷಾಪ್ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿರುವಿಕೆ.

4. ಡಿಸೆಂಬರ್ 3 ರಿಂದ 7-1992ರಲ್ಲಿ ಥಾಯ್‌ಲ್ಯಾಂಡ್ ಸುಅನ್ ಮೊಖ್ಬಾದಲ್ಲಿ ನಡೆದ ವರ್ಕ್‌ಷಾಪ್ ಆನ್ ಕ್ರಿಯೇಟಿಂಗ್ ಪಾರ್ಟಿಸಿಪೇಟರಿ ಕಲ್ಚರ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಿರುವಿಕೆ.

ಉ. ಸಾಮಾಜಿಕ ಮತ್ತು ಇತರೆ ಚಟುವಟಿಕೆಗಳು

1. ಸಂಸ್ಥಾಪಕ ಸದಸ್ಯರು, ಕರ್ನಾಟಕ ದಲಿತ ಸಂಘರ್ಷ ಸಮಿತಿ.
2. ಸಂಸ್ಥಾಪಕ ಸದಸ್ಯರು, ಬಂಡಾಯ ಸಾಹಿತ್ಯ ಸಂಘಟನೆ.
3. ಸದಸ್ಯರು, ಜಾನಪದ ಸಾಹಿತ್ಯ ಸಂಪಾದಕ ಮಂಡಲಿ, ಕರ್ನಾಟಕ ಸರ್ಕಾರ.
4. ಸದಸ್ಯರು, ಡಾ. ಅಂಬೇಡ್ಕರ್‌ರವರ ಕೃತಿಗಳ ಕನ್ನಡ ಭಾಷಾಂತರ ಮತ್ತು ಸಂಪಾದನಾ ಸಮಿತಿ, ಕರ್ನಾಟಕ ಸರ್ಕಾರ 1988 ರಿಂದ.
5. ಸದಸ್ಯರು, ಡಾ. ರಾಮಮನೋಹರ ಲೋಹಿಯಾರವರ ಕೃತಿಗಳ ಕನ್ನಡ ಭಾಷಾಂತರ ಮತ್ತು ಸಂಪಾದನಾ ಸಮಿತಿ, ಕರ್ನಾಟಕ ಸರ್ಕಾರ.

ಸದಸ್ಯರಾಗಿ ಸೇವೆ ಸಲ್ಲಿಸಿದ ಸಂಸ್ಥೆಗಳು

1988–1994, 1995–2001	: ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು.
1996–1997	: ಅರ್ಜಿಗಳ ಸಮಿತಿ, ಕರ್ನಾಟಕ ವಿಧಾನ ಪರಿಷತ್ತು.
2002–2003	: ಸಿಂಡಿಕೇಟ್ ಸದಸ್ಯ, ಬೆಂಗಳೂರು ವಿಶ್ವವಿದ್ಯಾಲಯ.
1992–1995	: ಸಿಂಡಿಕೇಟ್ ಸದಸ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ.
1998–2004	: ಸದಸ್ಯ, ಸೆನ್ಸಾರ್ ಮಂಡಲಿ.
1999–2004	: ಸದಸ್ಯ, ಆಡಳಿತ ಮಂಡಲಿ, ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು.
2001–2004	: ಸದಸ್ಯ, ಶೈಕ್ಷಣಿಕ ಮಂಡಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
1995–1998	: ಗ್ರಂಥಾಲಯ ಪ್ರಾಧಿಕಾರ, ಕರ್ನಾಟಕ ಸರ್ಕಾರ.
1995–1996	: ವಿಷಯ ಸಮಿತಿ, ಗೃಹ ಮತ್ತು ಸಾರಿಗೆ ವಿಭಾಗ ವಿಧಾನ ಮಂಡಲ.
1992–1997	: ಕನ್ನಡ ಭಾಷಾ ಸಲಹಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ.
1992–1995	: ಕಾರ್ಯಕಾರಿ ಮಂಡಲಿ, ಕನ್ನಡ ಸಾಹಿತ್ಯ ಪರಿಷತ್ತು.
1995–1999	: ನಿರ್ದೇಶಕ ಮಂಡಲಿ, ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮ.
1995–1996	: ವಿಷಯ ಸಮಿತಿ, ಕರ್ನಾಟಕ ವಿಧಾನ ಪರಿಷತ್ತು.
1995–1996	: ಭರವಸೆಗಳ ಸಮಿತಿ, ಕರ್ನಾಟಕ ವಿಧಾನ ಪರಿಷತ್ತು.
1992–1995	: ಚಿತ್ರಕಥೆ ಆಯ್ಕೆ ಸಮಿತಿ ಮತ್ತು ಚಲನಚಿತ್ರ ವೀಕ್ಷಣಾ ಸಮಿತಿ, ಬೆಂಗಳೂರು ದೂರದರ್ಶನ ಕೇಂದ್ರ
1992–1995	: ಕನ್ನಡ ಅಭಿವೃದ್ಧಿ ಪ್ರಾಧಿಕಾರ.
1991–1993	: ಪರಿಶಿಷ್ಟ ಜಾತಿ/ವರ್ಗಗಳ ಸಮಿತಿ, ಕರ್ನಾಟಕ ವಿಧಾನ ಮಂಡಲ.
1990–1993	: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
1990–1992	: ಚಿತ್ರಕಥೆ ಆಯ್ಕೆ ಸಮಿತಿ, ರಾಷ್ಟ್ರೀಯ ಚಲನಚಿತ್ರ ಅಬಿವೃದ್ಧಿ ನಿಗಮ.
1986–1992	: ಶೈಕ್ಷಣಿಕ ಪರಿಷತ್ತು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

1989–1990	:	ವಿಧಾನ ಮಂಡಲ ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನ ಮಂಡಲ
1986–1990	:	ಆಡಳಿತ ಮಂಡಲಿ, ಡಾ.ಅಂಬೇಡ್ಕರ್ ವೈದ್ಯಕೀಯ ಕಾಲೇಜು.
1993–1998	:	ಕನ್ನಡ ಭಾಷಾ ಸಲಹಾ ಸಮಿತಿ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ.
1988–1993	:	ಜನರಲ್ ಕೌನ್ಸಿಲ್, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ.
1986–1987	:	ಕನ್ನಡ ಕಾವಲು ಸಮಿತಿ ಮತ್ತು ಗಡಿ ಸಲಹಾ ಸಮಿತಿ.
1985–1987	:	ಪ್ರಸಾರಾಂಗ ಸಲಹಾ ಸಮಿತಿ, ಬೆಂಗಳೂರು ವಿಶ್ವವಿದ್ಯಾಲಯ.
1986–1987	:	ಪದವಿ ಪೂರ್ವ ಶಿಕ್ಷಣ ಮಂಡಲಿ, ಕರ್ನಾಟಕ ಸರ್ಕಾರ.
1984–1990	:	ಕರ್ನಾಟಕ ಸಾಹಿತ್ಯ ಅಕಾಡೆಮಿ.
1992–1995	:	ಆಡಳಿತ ಮಂಡಲಿ, ಜಾನಪದ ಲೋಕ, ರಾಮನಗರ, ಬೆಂಗಳೂರು.
2005–2008	:	ಸದಸ್ಯರು, ವಿಮಾದರರ ಪರಿಷತ್ತು, ಬೆಂಗಳೂರು ವಿಭಾಗ 2, ಭಾರತೀಯ ಜೀವವಿಮಾ ನಿಗಮ.


ಅಧ್ಯಕ್ಷರಾಗಿ ಡಾ॥ ಸಿದ್ದಲಿಂಗಯ್ಯನವರು

2006–2008	:	ಕನ್ನಡ ಅಭಿವೃದ್ಧಿ ಪ್ರಾಧಿಕಾರ
2008–2013	:	ಕನ್ನಡ ಪುಸ್ತಕ ಪ್ರಾಧಿಕಾರ.
2013 ರಿಂದ ಇಲ್ಲಿಯವರೆಗೆ	:	ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಕೇಂದ್ರದ ನಿರ್ದೇಶಕರಾಗಿ ಪ್ರಸ್ತುತ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಪ್ರಶಸ್ತಿ ಪುರಸ್ಕಾರಗಳು

2007	:	ನಾಡೋಜ ಪ್ರಶಸ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ–.
2005	:	ಬಾಬು ಜಗಜೀವನರಾಮ್ ಪ್ರಶಸ್ತಿ, ಕರ್ನಾಟಕ ಸರ್ಕಾರ.
2002	:	ಸತ್ಯಕಾಮ ಪ್ರತಿಷ್ಠಾನ ಪ್ರಶಸ್ತಿ.
2002	:	ಡಾ. ಅಂಬೇಡ್ಕರ್ ಪ್ರಶಸ್ತಿ, ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ, ನವದೆಹಲಿ.
2001	:	ಸಂದೇಶ್ ಪ್ರಶಸ್ತಿ.
2001	:	ಜಾನಪದ ತಜ್ಞ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ.
1984, 1999	:	ಉತ್ತಮ ಚಲನಚಿತ್ರ ಗೀತರಚನೆಗಾಗಿ ಕರ್ನಾಟಕ ಸರ್ಕಾರದ ಪ್ರಶಸ್ತಿ.
1992	:	ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಪ್ರಶಸ್ತಿ, ಕರ್ನಾಟಕ ಸರ್ಕಾರ.
1996	:	ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ.
1986	:	ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರ್ಕಾರ.

ಡಾ.ಸಿದ್ಧಲಿಂಗಯ್ಯ ಅವರ ವಂಶವೃಕ್ಷ



ಗ್ರಂಥಸೂಚಿ

ಮೂಲ ಪಠ್ಯಗಳು

೧	ಡಾ. ಸಿದ್ಧಲಿಂಗಯ್ಯ	:	ಊರುಕೇರಿ ೧ ಆತ್ಮಕಥನ, ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು. ಹನ್ನೆರಡನೆಯ ಮುದ್ರಣ : ೨೦೧೨
೨	ಡಾ. ಸಿದ್ಧಲಿಂಗಯ್ಯ	:	ಊರುಕೇರಿ ೨ ಆತ್ಮಕಥನ, ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು. ದ್ವಿತೀಯ ಮುದ್ರಣ : ೨೦೦೯

ಆಕರ ಗ್ರಂಥಗಳು

೧	ಅರವಿಂದ ಮಾಲಗಿತ್ತಿ	:	ಗೌರ್ಮೆಂಟ್ ಬ್ರಾಹ್ಮಣ, ಲಕ್ಷ್ಮಿ ಪ್ರಿಂಟಿಂಗ್ ಮತ್ತು ಪ್ರಕಾಶನ, ಮೈಸೂರು, ಆರನೇ ಮುದ್ರಣ ೨೦೧೨.
೨	ಪ್ರೊ॥ ಚಂದ್ರ ಕಾಂತ ಪೋಕಳೆ	:	ಬಲುತ, (ಮರಾಠಿ ಮೂಲ ದಯಪವಾರ) ದಲಿತ ಲೇಖಕನ ಆತ್ಮಕಥೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು. ಮೊದಲ ಮುದ್ರಣ ೨೦೧೩.
೩	ಡಾ . ಎನ್. ಚಿನ್ನಸ್ವಾಮಿ ಸೋಸಲೆ	:	ದಲಿತರ ಬದುಕು-ಮೆಲುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರಥಮ ಮುದ್ರಣ ೨೦೧೨
೪	ಜಗನ್ನಾಥರಾವ ಬಹುಳೆ ಎಸ್.	:	ಬಾಳಲಹರಿ, ಗೀತಪ್ರಿಯರವರ ಆತ್ಮಕಥೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ಪ್ರಥಮ ಮುದ್ರಣ ೨೦೦೪
೫	ಪ್ರೊ॥ ತೇಜಸ್ವಿ ಕಟ್ಟಿಮನಿ	:	ಎಂಜಲು ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ಪ್ರಥಮ ಮುದ್ರಣ ೨೦೦೬.
೬	ದೊಡ್ಡಹೂಲ್ಲೂರು ರುಕ್ಕೋಜಿ	:	ಡಾ: ಸಿದ್ಧಲಿಂಗಯ್ಯನವರ ಸದನದ ಭಾಷಣಗಳು ಭಾಗ-೨, ಬೆಂಗಳೂರು, ಪ್ರಥಮ ಮುದ್ರಣ ೨೦೦೫
೭	ದೇಜಗೌ	:	ವಿಚಾರವಾದಿ ಕ್ರಾಂತಿಕಾರಿ ಡಾ. ಅಂಬೇಡ್ಕರ್, ಬೆಂಗಳೂರು, ಮೂರನೆ ಮುದ್ರಣ ೨೦೧೩

೮	ದೇಜಗೌ	:	ಮಾನವತವಾದಿ ಡಾ. ಅಂಬೇಡ್ಕರ್, ಸಪ್ನ ಬುಕ್ ಹೌಸ್, ಬೆಂಗಳೂರು. ಆರನೇ ಮುದ್ರಣ : ೨೦೧೨.
೯	ನಾ. ದಿವಾಕರ	:	ದಲಿತರು ವಿಮೋಚನೆಯ ಹಾದಿ ಒಂದು ಅವಲೋಕನ, ನವಕರ್ನಾಟಕ ಪ್ರಕಾಶನ ಬೆಂಗಳೂರು ದ್ವಿತೀಯ ಮುದ್ರಣ ೨೦೧೩.
೧೦	ಪ್ರಭಾಕರ್ ಸಂಝುಗಿರಿ	:	ಡಾ. ಬಿ.ಆರ್.ಅಂಬೇಡ್ಕರ್ ಜೀವನ ಮತ್ತು ಹೋರಾಟ, ಕ್ರಿಯಾ ಪ್ರಕಾಶನ ಬೆಂಗಳೂರು, ದ್ವಿತೀಯ ಮುದ್ರಣ ೨೦೧೧.
೧೧	ಪ್ರಧಾನ ಗುರುದತ್ತ	:	ದೇವನೂರು ಮಹದೇವ, ನವಕರ್ನಾಟಕ ಪ್ರಕಾಶನ ಬೆಂಗಳೂರು ಮೂರನೇ ಮುದ್ರಣ ೨೦೧೨.
೧೨	ಬೇಬಿತಾಯಿ ಕಾಂಬಳೆ	:	ಬದುಕು ನಮ್ಮದು, ನವಕರ್ನಾಟಕ ಪ್ರಕಾಶನ, ಬೆಂಗಳೂರು. ಮೊದಲ ಮುದ್ರಣ ೨೦೦೯.
೧೩	ಶ್ರೀ ಜಿ.ಬಿ. ಮಾನೆ	:	ದಲಿತ ಮುಕ್ತಿ ಸಂಗ್ರಾಮ, ಛಾಯ ಸಾಹಿತ್ಯ ಪ್ರಕಾಶನ, ಬೆಂಗಳೂರು ಪ್ರಥಮ ಮುದ್ರಣ ೨೦೧೦
೧೪	ಪ್ರೊ|| ಡಾ. ಮುಮ್ತಾಜ್ ಅಲಿಖಾನ್	:	ದಲಿತರ ಅಂದು ಮತ್ತು ಹಿಂದು, ಸ್ವಪ್ನ ಎಂಟರ್ ಪ್ರೈಸಸ್, ಬೆಂಗಳೂರು ಪ್ರಥಮ ಮುದ್ರಣ ೨೦೧೧
೧೫	ಆರ್.ಡಿ.ಜಿ.	:	ಭಾರತ ರತ್ನ ಬಿ.ಆರ್. ಅಂಬೇಡ್ಕರ್, ಸಪ್ನ ಬುಕ್ ಹೌಸ್, ಬೆಂಗಳೂರು. ದ್ವಿತೀಯ ಮುದ್ರಣ, ೨೦೧೩
೧೬	ಪಿ. ಲಂಕೇಶ್	:	ಹುಳಿಮಾವಿನ ಮರ, ಲಂಕೇಶ್ ಪ್ರಕಾಶನ, ಬೆಂಗಳೂರು ನಾಲ್ಕನೇ ಮುದ್ರಣ ೨೦೧೪.
೧೭	ಲಕ್ಷ್ಮಣ ಗಾಯಕವಾಡ	:	ಉಚಲ್ಯಾ, ನವಕರ್ನಾಟಕ ಪ್ರಕಾಶನ, ಆರನೇ ಮುದ್ರಣ೨೦೧೧
೧೮	ಲಕ್ಷ್ಮೀನಾರಾಯಣ ನಾಗವಾರ	:	ಬತ್ತದ ಬೆಳದಿಂಗಳು ಡಾ. ಸಿದ್ಧಲಿಂಗಯ್ಯ, ಮಿಲಿಂದ್ ಪ್ರಕಾಶನ ಬೆಂಗಳೂರು-೦೬, ಪ್ರಥಮ ಮುದ್ರಣ ೨೦೦೬

೧೯	ಪ್ರೊ. ಲಕ್ಷ್ಮಣತೆಲಗಾವಿ	:	ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು, ಪ್ರಸಾರಾಂಗ ಕನ್ನಡ ವಿದ್ಯವಿದ್ಯಾಲಯ ಹಂಪಿ ಪ್ರಥಮ ಮುದ್ರಣ ೧೯೯೯
೨೦	ಶರಣಕುಮಾರ ಲಿಂಬಾಳೆ (ಅನುವಾದ ದು.ನಿಂ.ಬೆಳಗಲಿ.)	:	ಅಕ್ರಮ ಸಂತಾನ, ನವಕರ್ನಾಟಕ ಪ್ರಕಾಶನ, ನಾಲ್ಕನೇ ಮುದ್ರಣ ೨೦೧೩
೨೧	ಬಿ.ಶಿವಕುಮಾರ್	:	ದನಿಯಿಲ್ಲದವೆ ದನಿ ನಾಡೋಜ ಡಾ. ಸಿದ್ಧಲಿಂಗಯ್ಯ , ಕನ್ನಡ ವಿಶ್ವವಿದ್ಯಾಲಯ ಹಂಪಿ. ಪ್ರಥಮ ಮುದ್ರಣ ೨೦೧೧
೨೨	ಡಾ. ಜೆ. ಸೋಮಣ್ಣ	:	ಅಂಬೇಡ್ಕರ್ ಬದುಕು (ಜೀವನ ಚರಿತ್ರೆ) ಶಿವರಂಜನಿ ಪಬ್ಲಿಕೇಷನ್ಸ್, ಮೈಸೂರು ಮೊದಲ ಮುದ್ರಣ ೨೦೦೯
೨೩	ಬಿ. ಸುಜ್ಞಾನ ಮೂರ್ತಿ	:	ದಲಿತ ಹೋರಾಟಗಾರ ಅಯ್ಯನ್ ಕಾಳಿ, ಪಲ್ಲವ ಪ್ರಕಾಶನ, ಪ್ರಥಮ ಮುದ್ರಣ ೨೦೧೧.